ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಫೆಬ್ರವರಿ 26, 2014 ಪುಟ 20 ರೂ. 15/-

ಇಂಗಳೆ ಮಾರ್ಗ




ಅಂಬೇಡ್ಕರ್ ಬಗ್ಗೆ ಕನ್ನಡ ಕಾವ್ಯ




ಕಾಮ ಕಮಲದ ಮತ್ತೊಂದು ರಾದ್ಧಾಂತ



ಸನ್ ಮನ್ಸೂರ್ ಜೀವನಗಾಥೆ





ದೇಶಪಾಂಡೆಯ ಬಿನ್ ಶೇತ್ಕಿ ಬಿಸ್ನೆಸ್!!

ಮಂಡ್ಯ ಸಾಹಿತ್ಯ ಜಾತ್ರೆಗೆ




ಮೀರಾಗ್ರಹಣ

ಸಂದರ್ಶನಗಳು




ಛಾಯಾಗ್ರಾಹಕ ನಾಗಾರ್ಜುನ

ಕವಿ ಸನದಿ



ಸರ್ವೋದಯ ಕರ್ನಾಟಕದ ಮಿತ್ರರಲ್ಲಿ ಒಂದು ಆಗ್ರ



ಸರ್ವೋದಯ ಕರ್ನಾಟಕ ಪಕ್ಷವನ್ನು ಆಮ್ ಆದ್ಮಿ ಪಕ್ಷದಲ್ಲಿ ವಿಲೀನಗೊಳಿಸುವ ತೀರ್ಮಾನ ಕೈಗೊಳ್ಳಲಾಗುತ್ತಿದೆಯೆಂಬ ವರ್ತಮಾನವಿದೆ. ಆಮ್ ಆದ್ಮಿ ಪಕ್ಷದ ದೆಹಲಿ ಗೆಲುವಿನ ನಂತರ ಪ್ರಜ್ಞಾವಂತರೆಲ್ಲರಲ್ಲೂ ಒಂದು ಆಶಾಭಾವನೆ ಮೂಡಿರುವುದು ವಾಸ್ತವ. ಸಜ್ಜನಿಕೆಯಿಂದ ಚುನಾವಣಾ ರಾಜಕಾರಣವನ್ನು ಮಾಡುವ ಬಯಕೆಯಿದ್ದವರೆಲ್ಲರೂ ಹತಾಶೆಗೆ ಒಳಗಾಗುವ ಪರಿಸ್ಥಿತಿ ಇದ್ದಾಗ, ಹಣ ಖರ್ಚು ಮಾಡದೇ ಗೆದ್ದ ಯಶಸ್ವೀ ಪ್ರಯೋಗವನ್ನು ಆಪ್ ಮಾಡಿದ್ದರಿಂದ ಈ ಆಶಾಭಾವನೆಯು ಸಹಜವಾಗಿತ್ತು. ಆದರೆ, ಸರ್ವೋದಯ ಕರ್ನಾಟಕದಂತಹ ಒಂದು ಪಕ್ಷವು ಅದರೊಂದಿಗೆ ವಿಲೀನವೇ ಆಗಿಬಿಡುತ್ತದೆಂಬುದು ಆಶ್ಚರ್ಯವನ್ನೂ, ಆತಂಕವನ್ನೂ ಉಂಟುಮಾಡುತ್ತದೆ. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ರೈತಸಂಘ, ದಲಿತ ಸಂಘರ್ಷ ಸಮಿತಿಗಳ ಒಡನಾಡಿಗಳಾಗಿರುವವರಿಗೆ ತಮ್ಮ ಆಗ್ರಹಪೂರ್ವಕವಾದ ಒತ್ತಾಯವನ್ನು ಸರ್ವೋದಯ ಕರ್ನಾಟಕದ ಮುಂದಿಡುವ ಹಕ್ಕಿದೆಯೆಂದು ಭಾವಿಸಿ ಈ ಬರಹವನ್ನು ಬರೆಯಲಾಗಿದೆ.

ದೆಹಲಿ ಚುನಾವಣಾ ಫಲಿತಾಂಶದ ಆರಂಭದಲ್ಲಿ, ದೂರದ ಕರ್ನಾಟಕದಲ್ಲಿರುವವರಿಗೆ ಆಪ್‌ನ ಕುರಿತು ಅಸ್ಪಷ್ಟತೆ ಇದ್ದಿದ್ದು ಹೌದು. ಅದರ ಜೊತೆಗೆ ಆ ಪಕ್ಷದ ಸರ್ಕಾರ ತೆಗೆದುಕೊಳ್ಳುವ ನಿಲುವುಗಳು ಏನಾಗಿರುತ್ತವೆ, ಕಾದುನೋಡೋಣ ಎಂಬ ಅನಿಸಿಕೆಯೂ ಹಲವರಲ್ಲಿತ್ತು. ಆದರೆ ಆರಂಭದಲ್ಲಿ ಇದ್ದ ಯೂಫೋರಿಯಾ, ಸಂಭ್ರಮ ಈಗ ಸಾಕಷ್ಟು ಕಡಿಮೆಯಾಗಿದೆ. ಅದಕ್ಕೆ ಕಾರಣ ಆಪ್‌ನ ಕುರಿತು ಹೆಚ್ಚೆಚ್ಚು ಸ್ಪಷ್ಟತೆಯನ್ನು ಆ ಪಕ್ಷವೇ ನೀಡುತ್ತಿರುವುದು. ಈ ಸ್ಪಷ್ಟತೆ ಹೆಚ್ಚಾದಂತೆ, ಒಂದಷ್ಟು ಮೆಚ್ಚುಗೆಯೊಂದಿಗೇ, ಷರತ್ತುಬದ್ಧ ಬೆಂಬಲವನ್ನು ಆ ಪಕ್ಷಕ್ಕೆ ನೀಡೋಣ ಎಂದಾಗಲೀ ಅಥವಾ ನಮಗೆ ಸಕಾರಾತ್ಮಕ ಅಭಿಪ್ರಾಯವೇ ಇದೆ; ಆದರೆ ಹೊರಗಿನ ಬೆಂಬಲ ನೀಡುತ್ತೇವೆ ಎಂದಾಗಲೀ ಸರ್ವೋದಯ ಕರ್ನಾಟಕವು ಹೇಳಿದ್ದರೆ ಅದರಲ್ಲಿ ಆಶ್ಚರ್ಯವೇನೂ ಆಗುತ್ತಿರಲಿಲ್ಲ. ಅದರೊಂದಿಗೆ ವಿಲೀನವೇ ಆಗಿಬಿಡುವುದು ಒಂದು ಅಸಂಗತ ವಿದ್ಯಮಾನದಂತೆ ತೋರುತ್ತದೆ. ಕಳೆದ 40 ವರ್ಷಗಳಲ್ಲಿ ಕರ್ನಾಟಕದ ಎರಡು ಬಹುಮುಖ್ಯ ಚಳವಳಿಗಳಾದ ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿಗಳು ಮಾಡಿದ್ದಕ್ಕೂ, ಈಗ ಮಾಡಹೊರಟಿರುವುದಕ್ಕೂ ನಡುವೆ ದೊಡ್ಡ ಕಂದರ ಇದರಿಂದ ಸೃಷ್ಟಿಯಾಗುತ್ತದೆ.

ನಾವೆಲ್ಲರೂ ಮೆಚ್ಚುವ ಗೌರವಿಸುವ ದೇವನೂರರಾಗಲೀ, ಪುಟ್ಟಣ್ಣಯ್ಯನವರಾಗಲೀ ಆಮ್ ಆದ್ಮಿ ಪಕ್ಷದ ಬಗೆಗೆ ಯಾವ ಪ್ರಶ್ನೆಗಳೂ ಇಲ್ಲದೇ, ಸೂಕ್ತವಾಗಿ ಚರ್ಚೆಯೂ ನಡೆಸದೇ ಈ ತೀರ್ಮಾನಕ್ಕೆ ಬಂದಿರಲಾರರು. ಈ ನಿರ್ಧಾರದ ಹಿಂದೆ ಅವರದ್ದೇ ಆದ ಒಂದು ತರ್ಕವೂ ಇರುತ್ತದೆ. ಆದರೆ ಅಂತಹ ತರ್ಕವನ್ನೂ ಪ್ರಶ್ನಿಸುವ ಅಗತ್ಯವಿದೆ; ಅಂತಿಮ ತೀರ್ಮಾನವನ್ನು ಸರ್ವೋದಯ ಕರ್ನಾಟಕದ ಸಮಿತಿಗಳೇ ತೆಗೆದುಕೊಳ್ಳುತ್ತವಾದರೂ, ಅದಕ್ಕೆ ಮುಂಚೆ ಈ ಕೆಲವು ಅಂಶಗಳನ್ನು ಗಮನಿಸಿ ಎಂಬ ಆಗ್ರಹ ಮಾತ್ರ ನಮ್ಮದು.

ಆಮ್ ಆದ್ಮಿ ಪಕ್ಷವು ಕುಮಾರ್ ವಿಶ್ವಾಸ್‌ರಂತಹ ಮೋದಿ ಅಭಿಮಾನಿಗಳಿಂದ ಮಾತ್ರ ಕೂಡಿಲ್ಲ. ಅದರಲ್ಲಿ ಯೋಗೇಂದ್ರ ಯಾದವ್, ಪ್ರಶಾಂತ್ ಭೂಷಣ್‌ರಂತಹ ವಿವೇಕಶಾಲಿಗಳೂ, ಪ್ರಗತಿಪರ ಆಲೋಚನೆಯುಳ್ಳವರೂ ಇದ್ದಾರೆ. ಆ ಪಕ್ಷದಲ್ಲಿ ಎಡ, ಬಲ ಮತ್ತು ಮಧ್ಯದ ಎಲ್ಲಾ ಧಾರೆಗಳ ಆಲೋಚನೆಯುಳ್ಳವರು ಇದ್ದಾರೆ, ನಿಜ. ನಾವು ಅದರಲ್ಲಿ ಹೋಗಿ ಸೇರಿಕೊಳ್ಳುವುದರಿಂದ ಎಡಪಂಥೀಯ, ಪ್ರಗತಿಪರ, ಪ್ರಜಾಸತ್ತಾತ್ಮಕ ವಿಭಾಗವನ್ನು ಹೆಚ್ಚಿಸುವ ಮೂಲಕ ಈ ಕಡೆಗೆ ಎಳೆಯಬಹುದು ಎಂಬ ಒಂದು ತರ್ಕ ಸಾಕಷ್ಟು ಚಲಾವಣೆಯಲ್ಲಿದೆ. ಆ ಮೂಲಕ ಆಪ್‌ಅನ್ನು ರೂಪಿಸುವ ಅಥವಾ ಪುನರ್ ರೂಪಿಸುವ ಸಾಧ್ಯತೆ ಉಂಟಾಗುತ್ತದೆ; ಸುಮ್ಮನೆ ಹೊರಗಿನಿಂದ ಮಾತಾಡುತ್ತಿದ್ದರೆ, 21ನೇ ಶತಮಾನದ ಭಾರತದ ರಾಜಕಾರಣದ ಮುಖ್ಯ ಪ್ರಯೋಗವೊಂದರಲ್ಲಿ ನಾವು ವಹಿಸಬಹುದಾದ ಪಾತ್ರವನ್ನು ಸೀಮಿತಗೊಳಿಸಿದಂತಾಗುತ್ತದೆ ಎಂಬುದು ಒಂದು ವಾದ.

ಈ ಸಾಧ್ಯತೆ ಇದೆಯೇ? ಆಮ್ ಆದ್ಮಿ ಪಕ್ಷವು ಪ್ರತಿನಿಧಿಸುವುದು ಏನನ್ನು? ಅದಕ್ಕೊಂದು ಸಿದ್ಧಾಂತ ಈಗಾಗಲೇ ಇಲ್ಲವೇ? ಇದುವರೆಗೆ ನಾವು ನಂಬಿಕೊಂಡ ಸಿದ್ಧಾಂತಗಳನ್ನೆಲ್ಲಾ ಪಕ್ಕಕ್ಕಿಟ್ಟು 'ಏನೋ ಒಳ್ಳೆಯದು ನಡೆಯುತ್ತಿದೆ, ಅದರೊಡನೆ ಹೆಜ್ಜೆ ಹಾಕುತ್ತಾ, ತಪ್ಪಿರುವುದನ್ನು ಸರಿ ಮಾಡುತ್ತಾ ಹೋಗೋಣ' ಎಂಬ ನಿಲುವು ಆತ್ಮಹತ್ಯಾತ್ಮಕವಾದುದಾಗಿರುತ್ತದೆ. ಏಕೆಂದರೆ ಆಮ್‌ಆದ್ಮಿ ಪಕ್ಷಕ್ಕೆ ಈಗಾಗಲೇ ಒಂದು ಸಿದ್ಧಾಂತ, ರಾಜಕೀಯ ಇದೆ. ಅದನ್ನು ನಾವು ಕೆಲವು ಎಡಪಂಥೀಯರು ಹೇಳುತ್ತಿರುವಂತೆ 'ಸಾಮ್ರಾಜ್ಯಶಾಹಿಗಳ, ಬಂಡವಾಳಶಾಹಿಗಳ ಸಂಚು' ಎಂದು ತಳ್ಳಿಹಾಕಬಾರದು. ಅದು ಅತಿರೇಕದ ನಿಲುವಾಗುತ್ತದೆ ಮತ್ತು ಆಮ್ ಆದ್ಮಿ ಪಕ್ಷದ ಸಕಾರಾತ್ಮಕ ಮುಖವನ್ನು ನಿರಾಕರಿಸಿದಂತಾಗುತ್ತದೆ.

ಆದರೆ ಆಮ್ ಆದ್ಮಿ ಪಕ್ಷದ ಸಿದ್ಧಾಂತವು ನಿಸ್ಸಂದೇಹವಾಗಿ, ಜಾಗತೀಕರಣದ ಫಲಾನುಭವಿಗಳಾಗಿರುವ ಮೇಲ್ಮಧ್ಯಮ ವರ್ಗದ ಸಿದ್ಧಾಂತವೇ ಆಗಿದೆ. ಅದಕ್ಕೆ ನಾವು ಏನು ಹೆಸರು ಬೇಕಾದರೂ ಕೊಡಬಹುದು. ಇಂದು ಆಪ್‌ನ (ಅದರ ಪ್ರಧಾನ ಕಾರ್ಯಕರ್ತಗಣದ ಮೂಲಕ ಪ್ರತಿನಿಧಿಸಲ್ಪಡುವ) ಸಾಮಾಜಿಕ ನೆಲೆ ಈ ಮೇಲ್ಮಧ್ಯಮ ವರ್ಗವೇ ಆಗಿದೆ. ಈ ದೇಶದ ಸಾಮಾಜಿಕ ಸಂದರ್ಭದಲ್ಲಿ ಮೇಲ್ಮಧ್ಯಮ ವರ್ಗವೆಂದರೆ, ಸಂಪೂರ್ಣವಾಗಿ ಅಲ್ಲದಿದ್ದರೂ ಪ್ರಧಾನವಾಗಿ ಮೇಲ್ಮಧ್ಯಮ ಜಾತಿಗಳೂ ಆಗಿರುತ್ತವೆ. ಹಾಗಾಗಿ ಅದರ ಸಿದ್ಧಾಂತವು, ರಾಜಕೀಯ ನಿಲುವುಗಳು ಈ ವರ್ಗ ಮತ್ತು ಜಾತಿ ಸಮುದಾಯಗಳ ಹಿತಾಸಕ್ತಿಯನ್ನು ಹೊಂದಿರುತ್ತದೆ; ಹೊಂದಿದೆ. ಹೌದು, ಯೋಗೇಂದ್ರ ಯಾದವ್ ಮತ್ತಿತರರು ಅದನ್ನು ಇನ್ನೂ ಹಲವು ವರ್ಗ ಮತ್ತು ಜಾತಿ ಹಿತಾಸಕ್ತಿಗಳನ್ನೂ ಪ್ರತಿನಿಧಿಸುವಂತೆ ವಿಸ್ತರಿಸಲು ಪ್ರಯತ್ನಿಸುತ್ತಿದ್ದಾರೆ. ಇನ್ನೊಂದು ಅರ್ಥದಲ್ಲಿ ಹೇಳಬೇಕೆಂದರೆ ಅವರು ಆಪ್ ಪಕ್ಷವನ್ನು 21ನೇ ಶತಮಾನದ ಕಾಂಗ್ರೆಸ್ ಪಕ್ಷದಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಅಂದರೆ ಅದು ಕಾಂಗ್ರೆಸ್ ಪಕ್ಷದಂತೆಯೇ ಅತ್ಯಂತ ಅಸಂಗತವಾಗಿದೆ. ಮೇಲ್ನೋಟಕ್ಕೆ ಕಾಂಗ್ರೆಸ್ ಪಕ್ಷವು ಈ ದೇಶದ ಎಲ್ಲಾ ವರ್ಗಗಳ, ಎಲ್ಲಾ ಜಾತಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಪಕ್ಷದಂತೆ ಕಾಣುತ್ತದೆ. ಬಿಜೆಪಿಗೆ ಹೋಲಿಸಿದರೆ, ಅದು ನಿಜ ಸಹ ಎಂದೆನ್ನಿಸುವಂತೆ ಅದರ ಪ್ರಮುಖ ಸ್ಥಾನಗಳಲ್ಲಿ ಭಿನ್ನ ಜಾತಿಗಳ (ಭಿನ್ನ ವರ್ಗಗಳಿಂದ ಅಲ್ಲ) ಪ್ರಾತಿನಿಧ್ಯವೂ ಇರುತ್ತದೆ. ಆದರೆ ಅದು ಭಾರತದ ಕಾರ್ಪೊರೇಟ್ ಉದ್ದಿಮೆದಾರರ ಪರವಾಗಿ ಆಳ್ವಿಕೆ ನಡೆಸುತ್ತಿರುತ್ತದೆ. ಕಾರ್ಯಕ್ರಮಗಳಲ್ಲಿ ಕೆಲವು ಗರೀಬರ ಪರ ಘೋಷಣೆಗಳನ್ನು ಹೊಂದಿರುತ್ತದೆ. ಅದು ಹೇಗೆ ಎಂಬುದು ಈಗ ಎಲ್ಲರಿಗೂ ಗೊತ್ತಿದೆ.

ಆಮ್‌ಆದ್ಮಿ ಇದನ್ನು ಹೇಗೆ ಮಾಡುತ್ತದೆ ಅಥವಾ ಮಾಡುತ್ತಿದೆ? ಒಂದೆಡೆ ಜಾಗತೀಕರಣದ ಫಲಾನುಭವಿಗಳಾಗಿರುವ ಮೇಲ್ಮಧ್ಯಮ ವರ್ಗದ ಸಾಮಾಜಿಕ ನೆಲೆ, ಇನ್ನೊಂದೆಡೆ ಜಾಗತೀಕರಣದ ಕಾರಣಕ್ಕೇ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರು ಮತ್ತು ನಗರಗಳಿಗೆ ವಲಸೆ ಹೋಗಿ ಅಸಂಘಟಿತ ವಲಯದಲ್ಲಿ ಅಭದ್ರರಾಗಿರುವ ದಲಿತರ (ಸರ್ವೋದಯದಂತಹ ಪಕ್ಷಗಳು ಆಪ್‌ನ ಭಾಗವಾದರೆ) ವಿಚಿತ್ರ ಹೈಬ್ರಿಡ್‌ಅನ್ನು ಸೃಷ್ಟಿಸುವ ಪ್ರಯತ್ನದಿಂದ ಮಾಡಹೊರಟಿದೆ. ಡಬ್ಲ್ಯುಟಿಓನಿಂದ ಭಾರತ ಹೊರಬರಬೇಕೆಂದು ಕೇಳಿದ್ದರಲ್ಲಿ ಕರ್ನಾಟಕ ರಾಜ್ಯ ರೈತಸಂಘದ್ದು ಮುಖ್ಯ ಪಾತ್ರವಿತ್ತು. ಜಾಗತೀಕರಣವನ್ನು ವಿರೋಧಿಸುವ ಕುರಿತಾಗಿ ಆಪ್‌ನ ನಿಲುವು ಎಡಬಿಡಂಗಿಯಾಗಿರುವುದರಲ್ಲಿ ಅಥವಾ ನಿಲುವೇ ಇಲ್ಲದಿರುವಲ್ಲಿ ಅಥವಾ ಅದರ ಪರವಾಗಿರುವುದರಲ್ಲಿ ಸಿದ್ಧಾಂತ ರಾಹಿತ್ಯದ ಕಾರಣವಿಲ್ಲ. ಬದಲಿಗೆ ಈ ಗೊಂದಲವೇ ಒಂದು ಸಿದ್ಧಾಂತವಾಗಿದೆ. ಅವರು ಜಾಗತೀಕರಣದ ಪರವಾಗಿದ್ದಾರೆ.

ಅದನ್ನು ಕೇವಲ ಆಪ್‌ನ ಕಾರ್ಪೊರೇಟ್ ಮುಖವಾಗಿರುವ ಪೃಥ್ವಿ ರೆಡ್ಡಿ ಮಾತ್ರವಲ್ಲ, ಅದರ ಪ್ರಗತಿಪರ ಮುಖವಾಗಿರುವ ಯೋಗೇಂದ್ರ ಯಾದವ್ ಸಹ ಬೇರೆ ಮಾತುಗಳಲ್ಲಿ ಹೇಳಿದ್ದಾರೆ. 'ನಮಗೆ ಅಭಿವೃದ್ಧಿ ಬೇಕು, ಆದರೆ ನಾವು ಕಾರ್ಪೊರೇಟ್‌ಗಳನ್ನು ನಿಯಂತ್ರಣದಲ್ಲಿಡುತ್ತೇವೆ' ಎಂದು. ಹೈಬ್ರಿಡ್ ಮತದಾರ ಸಮುದಾಯ ಮತ್ತು ಹೈಟೆಕ್ ಕಾರ್ಯಕರ್ತಗಣ ಇರುವಾಗ ನೀಡುವ ಇಂತಹ ಹೇಳಿಕೆಗಳು ಕೇವಲ ತಂತ್ರಗಳಲ್ಲ. ಬದಲಿಗೆ, ಮೇಲ್ಮಧ್ಯಮ ವರ್ಗದ ಯಜಮಾನಿಕೆಯಡಿ, ತಳಸ್ತರಗಳನ್ನು ಒಪ್ಪಿಸುವುದೇ ಆಗಿರುತ್ತದೆ. ಇಂತಹ ಸೋಷಿಯಲ್ ಇಂಜಿನಿಯರಿಂಗ್ ಇಲ್ಲದೇ ಸಂಸದೀಯ ರಾಜಕಾರಣದಲ್ಲಿ ಉಳಿದುಕೊಳ್ಳಲು ಬೇಕಾದ ಮತಗಳಿಕೆಯ ಶಕ್ತಿಯನ್ನು ಸಂಪಾದಿಸಲಾಗುವುದಿಲ್ಲ.

ಒಂದು ವೇಳೆ 'ಅದಿನ್ನೂ ಹೈಬ್ರಿಡ್ ಸ್ವರೂಪದಲ್ಲೇ ಇದೆ, ಅದನ್ನು ಬದಲಿಸುವ ಸಾಧ್ಯತೆ ಇದೆ ಎನ್ನುವುದಾದರೆ, ಆಪ್‌ನ ಆರ್ಥಿಕ ಮಂಡಳಿಯಲ್ಲಿ ಯಾಕೆ, ನವ ಉದಾರವಾದಿ ಆರ್ಥಿಕತೆಯನ್ನು ಬೆಂಬಲಿಸುವ ಜಾಗತೀಕರಣದ ವಕ್ತಾರರೇ ತುಂಬಿಕೊಂಡಿದ್ದಾರೆ? ಅವರ ವಿವರಗಳು ಇಂತಿವೆ: ಐಡಿಯಾ (ಬಿರ್ಲಾ) ಕಂಪೆನಿಯ ಎಂಡಿ, ಸ್ಕಾಟ್ಲೆಂಡ್ ಬ್ಯಾಂಕ್‌ನ ಸಿಎಂಡಿ, ಎನ್‌ಜಿಓ ಕುಳ ಅಸೀಂ ಶ್ರೀವಾಸ್ತವ, ಆರ್ಥಿಕ ತಜ್ಞ ಲವೀಶ್ ಭಂಡಾರಿ, ಪೃಥ್ವಿ ರೆಡ್ಡಿ ಇತ್ಯಾದಿ. ಇವರುಗಳು ಈಗಾಗಲೇ ಸಲಹೆಗಳಿಗಾಗಿ ಇನ್‌ಫೋಸಿಸ್ ನಾರಾಯಣಮೂರ್ತಿ ಮತ್ತು ಬಯೋಕಾನ್‌ನ ಕಿರಣ್ ಮಜುಂದಾರ್ ಶಾರನ್ನು 'ಕನ್ಸಲ್ಟ್' ಮಾಡಿದ್ದಾರೆ. ಲವೀಶ್ ಭಂಡಾರಿ ಈಚೆಗೆ ಬರೆದ ಲೇಖನವೊಂದರಲ್ಲಿ, ಹೇಗೆ ಉದ್ದಿಮೆದಾರರಿಗೆ ನೀಡುವ 'ಸ್ವಾತಂತ್ರ್ಯ' ಮಾತ್ರ ದೇಶವನ್ನು ಅಭಿವೃದ್ಧಿ ಪಥದ ಕಡೆಗೆ ಕೊಂಡೊಯ್ಯಬಲ್ಲುದು ಎಂದು ವಿವರಿಸಿದ್ದಾನೆ. ಅದರ ಜೊತೆಗೆ ಯಾವ ಮುಖ್ಯಮಂತ್ರಿಯ ಕಚೇರಿಯಲ್ಲಿ ಅಧಿಕಾರವು ಘನೀಭವಿಸಿರುತ್ತದೋ, ಅಂತಹ ರಾಜ್ಯಗಳಲ್ಲಿ ಅತ್ಯುತ್ತಮವಾಗಿ ಅಭಿವೃದ್ಧಿಯಾಗುತ್ತದೆಂತಲೂ, ಅದಕ್ಕೆ ಗುಜರಾತ್‌ನ ನರೇಂದ್ರ ಮೋದಿ ಮತ್ತು ಮಧ್ಯಪ್ರದೇಶದ ಶಿವರಾಜ್ ಚೌಹಾಣ್‌ರು ಒಳ್ಳೆಯ ಮಾದರಿಗಳೆಂತಲೂ ಬರೆದಿದ್ದಾನೆ.

ಇದು ಸಹಜವಾಗಿದೆ. ಏಕೆಂದರೆ ಪ್ರತಿಯೊಂದು ರಾಜಕೀಯ ಗುಂಪಿನ (ಎಲ್ಲಾ ಜನಸಂಘಟನೆಗಳೂ ಸಹ ರಾಜಕೀಯ ಗುಂಪುಗಳೇ) ಹಿತಾಸಕ್ತಿ ಅದರ ಕಾರ್ಯಕರ್ತಗಣವನ್ನು ಬಿಂಬಿಸಬೇಕು. ಇಲ್ಲದಿದ್ದರೆ, ಆ ಗಣ ಅವರೊಂದಿಗೆ ಉಳಿಯುವುದಿಲ್ಲ. ಹಾಗಿದ್ದೂ, ಜಾಗತೀಕರಣ ಫಲಾನುಭವಿ ವರ್ಗಕ್ಕೂ, ಜಾಗತೀಕರಣದಿಂದ ವಿನಾಶವನ್ನು ಅನುಭವಿಸುತ್ತಿರುವ ವರ್ಗಗಳಿಗೂ ಯಾವ ಸಾಮ್ಯತೆಯನ್ನು ಆಮ್‌ಆದ್ಮಿ ಪಕ್ಷವು ಹುಡುಕಿದೆ? ಅದು ಭ್ರಷ್ಟಾಚಾರವನ್ನು ಹುಡುಕಿದೆ. ಖಂಡಿತಾ ನಿಜ. ಭ್ರಷ್ಟಾಚಾರದಿಂದ ಇಬ್ಬರೂ ಬಾಧಿತರೇ. ಆದರೆ ಭ್ರಷ್ಟಾಚಾರದಲ್ಲಿ ಹಲವು ಬಗೆಗಳಿವೆ ಎಂಬುದನ್ನು ಮಾತ್ರ ಮರೆಯಬಾರದು.

ರಿಟರ್ನ್ ಆಫ್ ಇಕ್ವಿಟಿ (ಬಂಡವಾಳಕ್ಕೆ ಬರುವ ಲಾಭ)ಯನ್ನು ಶೇ.25ರಷ್ಟು ಕಾನೂನು ಪ್ರಕಾರವೇ ಖಾತರಿಗೊಳಿಸಿದರೆ ಅದು ಭ್ರಷ್ಟಾಚಾರವನ್ನೂ ಕಾನೂನುಬದ್ಧ ಮಾಡಿದಂತೆಯೇ ಅಲ್ಲವಾ? ಹಾಗೆ ಮಾಡಿದಾಗ ಸತ್ಯಂ ರಾಜು ಭ್ರಷ್ಟನಾಗುತ್ತಾನೆ. ನಾರಾಯಣಮೂರ್ತಿ ಸಾಚಾ. ಅಂಬಾನಿ ಭ್ರಷ್ಟ, ಟಾಟಾ ಅಲ್ಲ. ತಾವು ಕ್ಯಾಪಿಟಲಿಸಂಗೆ ವಿರೋಧ ಅಲ್ಲ, ಕ್ರೋನಿ ಕ್ಯಾಪಿಟಲಿಸಂಗೆ ಮಾತ್ರ ವಿರೋಧ ಎನ್ನುತ್ತಿರುವುದರ ಹಿಂದೆ ಇರುವ ತಿಳುವಳಿಕೆ ಇದೇ ಅಲ್ಲವಾ? ಖಾಸಗಿ ಸಾರ್ವಜನಿಕ ಸಹಭಾಗಿತ್ವ ಕ್ರೋನಿ ಕ್ಯಾಪಿಟಲಿಸಂನ ಒಂದು ಪ್ರಮುಖ ಲಕ್ಷಣ. ಪಿಪಿಪಿಯ ಬಗ್ಗೆ ಆಮ್‌ಆದ್ಮಿ ಪಕ್ಷದ ನಿಲುವೇನು? ಅದನ್ನು ಬೇಡ ಎಂದು ಇದುವರೆಗೆ ಹೇಳಿದ್ದಾರೆಯೇ? ಆಪ್‌ನ ಆರ್ಥಿಕ ನೀತಿ ಸ್ಪಷ್ಟವಾಗಿ ಒಂದು ರೀತಿಯಲ್ಲಿ ಅದು ವಿಶ್ವಬ್ಯಾಂಕ್ ಈ ದೇಶ[ಕ್ಕೆ] ತರಬೇಕೆಂದಿರುವ ಆರ್ಥಿಕ ನೀತಿಯೇ ಆಗಿದೆ. ಅದ[ನ್ನು] ಬೆಂಬಲಿಸುವ ಫೋರ್ಡ್ ಫೌಂಡೇಷನ್‌ನಿಂದ ಕೇಜ್ರಿವಾಲ[ರ] ಎನ್‌ಜಿಓ ಹಣ ಪಡೆಯುತ್ತಿದ್ದುದು ಕೇವಲ ಆಕಸ್ಮಿಕವ[ಲ್ಲ].


ಇವೆಲ್ಲಾ ಆದರ ಆರ್ಥಿಕ ನೀತಿಯದ್ದಾದರೆ, ಆಪ್[ನ] ಸಾಮಾಜಿಕ ನೀತಿಗಳೇನು? ಇಂದು ಮೊಹಲ್ಲಾ ಸಭಾ[ಗಳ] ಮೂಲಕ ಆಪ್ ಹೇಳುತ್ತಿರುವ 'ಜನಾಭಿಪ್ರಾಯ' ಮೆಜಾರಿಟೇರಿಯನಿಸಂ ಅಲ್ಲವಾ? ಇದನ್ನು ಅಂಬೇಡ್[ಕರ್] ಸ್ಪಷ್ಟವಾಗಿ ವಿರೋಧಿಸಿದ್ದರು. ಆ ಕೇರಿಗಳ[ಲ್ಲಿ] ಅಲ್ಪಸಂಖ್ಯಾತರಾಗಿರುವ ದಲಿತರು, ಭಿನ್ನ ಧರ್ಮದವ[ರು], ಭಿನ್ನ ಲಿಂಗಿಗಳ ಹಕ್ಕುಗಳ ಪಾಡೇನಾಗಬಹುದು? ಅ[ದು] ದೆಹಲಿಯ ಕಾನೂನು ಸಚಿವ ಭಾರ್ತಿಯ ಕ್ಷೇತ್ರದಲ್ಲಿ ರಾತ್ರಿ ಏನಾಯಿತೋ, ಅದೇ ಆಗುತ್ತದೆ. ಜನಾಭಿಪ್ರಾಯವ[ನ್ನು] ಪಡೆಯಬೇಕಾದಾಗಲೂ, ಅದರಲ್ಲಿ ಅಲ್ಪಸಂಖ್ಯಾತ[ರ] ಹಕ್ಕುಗಳನ್ನು ಖಾತರಿಗೊಳಿಸುವ ಮತ್ತು ದಮನಿ[ತರ] ಅಭಿಪ್ರಾಯಗಳನ್ನು ಪ್ರತ್ಯೇಕವಾಗಿಯೂ ಪಡೆದುಕೊಳ[್ಳುವ] ಅತ್ಯಂತ ಪ್ರಜಾತಾಂತ್ರಿಕ ಮಾರ್ಗವಾಗಿಯೇ ಅಂಬೇಡ್[ಕರ್] ದ್ವಿ-ಮತದಾನದ ಪದ್ಧತಿಯನ್ನು ಪ್ರತಿಪಾದಿಸಿದ್ದು. ಅದ[ನ್ನು] ಒಳಗೊಳ್ಳದ ಜನಾಭಿಪ್ರಾಯವು ದಮನಿತರನ[್ನು] ಬೇಟೆಯಾಡಿಬಿಡಬಲ್ಲದು. ಅದರಲ್ಲೂ ಸಮಾಜದಲ್ಲಿ ಫ್ಯಾಸಿ[ಸಂ] ಬೆಳೆಯುತ್ತಿರುವ ಈ ಕಾಲದಲ್ಲಿ.


ಆಪ್‌ನ ಮುನ್ನೋಟದ ದಸ್ತಾವೇಜು (ವಿಷ[ನ್] ಡಾಕ್ಯುಮೆಂಟ್) ವರ್ಗ, ಜಾತಿ ಮತ್ತು ಲಿಂಗ ತಾರತಮ[್ಯದ] ಕುರಿತು ಏನು ಹೇಳುತ್ತದೆ, ಅದರ ರಾಜಕೀಯ ಕಾರ್ಯಕ್ರ[ಮ] ಏನಾಗಿದೆ ಎಂಬುದರ ಮೇಲೆ ರಾಜಕೀಯ ಮೈತ್ರಿಗ[ಳು] ಏರ್ಪಡಬೇಕು. ಅದು ಒಂದು ಪ್ರಕ್ರಿಯೆಯ[ಾಗಿ] ರೂಪುಗೊಳ್ಳಬೇಕು. ಹಾಗಿಲ್ಲದೇ ನಿಧಾನ[ವಾಗಿ] ರೂಪುಗೊಳ್ಳುತ್ತದೆ, ನಾವು ಈಗ ಒಂದಾಗಿ ಬಿಡೋ[ಣ] ಎಂಬುದು ಭೋಳೇತನವಾದೀತು. ಅಂತ[ಹ] ಅಮಾಯಕತನವನ್ನು 40 ವರ್ಷಗಳ ಕಾಲ ಕರ್ನಾಟಕದ[] ಬಹುಮುಖ್ಯ ಚಳವಳಿಗಳ ನೇತಾರರಾಗಿರುವುದ[ನ್ನು] ಪ್ರದರ್ಶಿಸುವುದು ಅತ್ಯಂತ ಸೋಜಿಗದ ಸಂಗತಿ. ಹೌ[ದು], ನಮ್ಮೆಲ್ಲಾ ಚಳವಳಿಗಳು ಜನರನ್ನು ಪರಿಣಾಮಕಾರಿಯ[ಾಗಿ] ತಾಕುತ್ತಿಲ್ಲ; ಅವರನ್ನು ತಲುಪಲು ನಾವೆಲ್ಲಿ ವಿಫಲವಾಗಿದ್ದ[ೇವೆ] ಎಂಬುದನ್ನು ಅತ್ಯಂತ ಕಟುವಾಗಿ, ಆತ್ಮವಿಮರ್ಶಾತ್ಮಕವ[ಾಗಿ] ನೋಡಿಕೊಳ್ಳಬೇಕು. ಆದರೆ ಆತ್ಮವಿಮರ್ಶೆ ಆ[ತ್ಮ] ನಿರಾಕರಣೆಯ ಮಟ್ಟಕ್ಕೆ ಹೋಗುವುದು ಅಪಾಯದ ಸಂಗ[ತಿ]. ಅದು ಆತ್ಮಹತ್ಯೆಗೆ ದಾರಿ ಮಾಡಿಕೊಡುತ್ತದೆ.


ಆರ್ಥಿಕತೆಯ ಅಂಬಾನೀಕರಣ ಮತ್ತು ರಾಜಕೀಯ[ದ] ಮೋದೀಕರಣ ಆಗುತ್ತಿರುವಾಗ ನಮಗೆ ಬೇಕಿರುವು[ದು] 21ನೇ ಶತಮಾನದ ಕಾಂಗ್ರೆಸ್ಸಲ್ಲ; 21ನೇ ಶತಮಾನ[ದ] ಚಳವಳಿ. ಅಂಬಾನಿ ಮತ್ತು ಮೋದಿ ವಿದ್ಯಮಾನವ[ನ್ನು] ತಾಂತ್ರಿಕವಾಗಿ ವಿರೋಧಿಸುತ್ತಿರುವ, ಆದರೆ ಅದರ ಮೂ[ಲಕ್ಕೆ] ಕೈ ಹಾಕದೇ ರಾಜಕಾರಣವನ್ನು ಮಾಡುತ್ತಿರುವ ಆ[ಮ್] ಆದ್ಮಿ ಪಕ್ಷವು ಅವರಿಗೇ ಅನುಕೂಲ ಮಾಡಿಕೊಡು[ವ] ಸಾಧ್ಯತೆ ಇಲ್ಲದಿಲ್ಲ.

ಇಷ್ಟೆಲ್ಲಾ ಅಪಾಯಗಳಿದ್ದೂ, ಆಮ್‌ಆದ್ಮಿ ಪಕ್ಷವ[ನ್ನು] ಹೊರಗಿನಿಂದ ಕಾದು ನೋಡುವ ಅಗತ್ಯವಿದೆ. ಅಗತ್ಯಬಿ[ದ್ದರೆ] ಹೊರಗಿನಿಂದ ಬೆಂಬಲಿಸಲೂ ಬೇಕಿದೆ. ಕೊಳೆ[ತು] ನಾರುತ್ತಿರುವ ಪಕ್ಷಗಳು ಮತ್ತು ಈಗಾಗಲೇ ಆಪ್‌ನ ವಿರು[ದ್ಧ] ತಿರುಗಿ ಬೀಳುತ್ತಿರುವ ಕಾರ್ಪೊರೇಟ್ ಮೀಡಿಯಾಗ[ಳು] ಅದರ ಮೇಲೆ ಮಾಡುವ ಆರೋಪಗಳನ್ನು ನಂಬಬೇಕಿ[ಲ್ಲ]. ಆದರೆ ವಿಲೀನದಂತಹ ನಿರ್ಧಾರವು ಬಹಳ ಆತುರ[ದ್ದು] ಮತ್ತು ಚಳವಳಿಯ ದೃಷ್ಟಿಯಿಂದ ಅಪಾಯಕ[ಾರಿ]ಯಾದದ್ದಾಗಿದೆ.

ಇದು ಸರ್ವೋದಯ ಕರ್ನಾಟಕದ ಹಿರಿಯರ ಮು[ಂದೆ] ಇಟ್ಟಿರುವ ವಿನಯಪೂರ್ವಕ ಆಗ್ರಹವಾಗಿದೆ.








ಪರ್ಯಾಯ ಇತಿಹಾಸದ ಮೇಲೆ ದೌರ್ಜನ್ಯ


ಇನ್ನೆರಡು ತಿಂಗಳಲ್ಲಿ ಲೋಕಸಭೆಗೆ ಚುನಾವಣೆಗಳು ನಡೆಯಲಿವೆ. ಹಲವು ಚೆಡ್ಡಿ ಸಮೀಕ್ಷೆಗಳ ಪ್ರಕಾರ ಫ್ಯಾಸಿಸ್ಟ್ ಧೋರಣೆಯ ನರಹಂತಕ ನರೇಂದ್ರ ಮೋದಿ ಪ್ರಧಾನಿ ಆಗಲಿದ್ದಾನೆ. ಆದರೆ ದುರಂತ ಸಂಗತಿ ಯಾವುದೆಂದರೆ ಚುನಾವಣೆಗಳು ನಡೆಯುವ ಮುನ್ನವೇ ಫ್ಯಾಸಿಸ್ಟ್ ಸ್ವಭಾವ ಎಲ್ಲೆಡೆ ತಾಂಡವವಾಡುತ್ತಿರುವುದು. ಇದಕ್ಕೆ ಲೇಟೆಸ್ಟ್ ಬಲಿಪಶು ವೆಂಡಿ ಡೋನಿಗರ್ ಎಂಬ ಖ್ಯಾತ ಬರಹಗಾರ್ತಿ.

ಈಗ ಎಲ್ಲರಿಗೂ ಗೊತ್ತಿರುವಂತೆ ಡೋನಿಗರ್ ಅವರು ಬರೆದಿರುವ 'ದಿ ಹಿಂದೂ: ಅಲ್ಟರ್ನೇಟಿವಿ ಹಿಸ್ಟರಿ' ಎಂಬ ಪುಸ್ತಕವನ್ನು ಅದರ ಪ್ರಕಾಶಕ ಸಂಸ್ಥೆ ಹಿಂದೆ ಪಡೆಯುವಂತೆ ಮಾಡುವಲ್ಲಿ ಹಿಂದೂತ್ವದ ಒಂದು ಅನಾಮಧೇಯ ಗುಂಪು ಯಶಸ್ವಿಯಾಗಿದೆ.

ಯಾರು ಈ ಡೋನಿಗರ್ ಮತ್ತು ಆಕೆ ಬರೆದಿರುವ ಪುಸ್ತಕದಲ್ಲಿ ಏನಿದೆ ಎಂದು ನೋಡಿದರೆ ನಮ್ಮ ದೇಶದಲ್ಲಿ ಹಿಂದೂ ಮೂಲಭೂತವಾದದಿಂದಾಗಿ ಆಗುತ್ತಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಮತ್ತು ಮೋದಿ ಹಿಂಬಾಲಕರ ಫ್ಯಾಸಿಸ್ಟ್ ಸಿದ್ಧಾಂತದ ಅಪಾಯ ಅರ್ಥವಾಗುತ್ತದೆ.



ಅಮೆರಿಕಾ ಮೂಲದ ಡೋನಿಗರ್ ಓರ್ವ ಖ್ಯಾತ ಭಾರತಜ್ಞೆ, ಅಮೆರಿಕದಲ್ಲಿ ಅವರನ್ನು ಮಾನವಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವವರಲ್ಲಿ ಪ್ರಮುಖರು ಎಂದೇ ಗುರುತಿಸಲಾಗಿದೆ. ಸಂಸ್ಕೃತವನ್ನು ಚೆನ್ನಾಗಿ ಕಲಿತಿರುವ ಅವರು ಅದೇ ಭಾಷೆಯಲ್ಲಿರುವ ನಾಲ್ಕು ವೇದಗಳನ್ನು, ಉಪನಿಷದ್‌ಗಳನ್ನು, ಪುರಾಣಗಳನ್ನು, ಬ್ರಾಹ್ಮಣ್ಯಗಳನ್ನು, ಅರಣ್ಯಕಗಳನ್ನು ಹಾಗೂ ಶಾಸ್ತ್ರಗಳನ್ನಲ್ಲದೆ ರಾಮಾಯಣ ಮತ್ತು ಮಹಾಭಾರತಗಳನ್ನು ಹಲವು ದಶಕಗಳಿಂದ ಅಭ್ಯಸಿಸಿದ್ದಾರೆ. ಭಾರತದ ಇತಿಹಾಸದಲ್ಲಿ ಮತ್ತು ಸಂಸ್ಕೃತದಲ್ಲಿ ಅಪಾರ ಸಂಶೋಧನೆಗಳನ್ನು ಮಾಡಿರುವ ಡೋನಿಗರ್ ಅವರು ಈ ಹಿಂದೆಯೂ ಇವುಗಳನ್ನು ಕುರಿತು ಹಲವಾರು ಪುಸ್ತಗಳನ್ನು ಬರೆದಿದ್ದಾರೆ.



ಪ್ರಾಚೀನ ಬರಹಗಳನ್ನು, ಅದರಲ್ಲೂ ಅವುಗಳಲ್ಲಿರುವ ಲೈಂಗಿಕತೆಯ ಸಂಗತಿಗಳನ್ನು ಡೋನಿಗರ್ ಅವರು ಹೊಸ ಬಗೆಯಲ್ಲಿ ವಿಶ್ಲೇಷಿಸುವ ಪರಿ ಹಲವರಲ್ಲಿ ಸಂಚಲನ ಮೂಡಿಸಿ ಅವರೂ ಆ ನಿಟ್ಟಿನಲ್ಲಿ ಸಂಶೋಧನೆಗಳನ್ನು ಕೈಗೊಳ್ಳುವಂತೆ ಮಾಡುತ್ತಾ ಬಂದಿದೆ. ಆದರೂ ಯಾಕೆ ಡೋನಿಗರ್ ಅವರು ಹಿಂದೂತ್ವವಾದಿಗಳ ಆಕ್ರೋಶಕ್ಕೆ ಗುರಿಯಾಗುತ್ತಾ ಬಂದಿದ್ದಾರೆಂದರೆ ಡೋನಿಗರ್ ಅವರು ಪುರೋಹಿತಶಾಹಿಗಳು ಹೇಳುವ ಕತೆಗಳ ಬದಲಾಗಿ ಈ ದೇಶದ ಇತರೆ ಸಂಸ್ಕೃತಿಗಳಲ್ಲಿ ಇರುವ ಕತೆಗಳನ್ನು ಹೇಳುತ್ತಾರೆ. ಜೊತೆಗೆ ಸಂಸ್ಕೃತದಲ್ಲಿರುವ ತತ್ವಗಳನ್ನು ಅವರು ಆಧುನಿಕ ದೃಷ್ಟಿಕೋನದಲ್ಲಿ ತರ್ಕಕ್ಕೆ ಒಡ್ಡುತ್ತಾರೆ. ಪುರೋಹಿತಶಾಹಿಗಳು ಹೇಳಿದ್ದು ಮಾತ್ರ ವೇದವಾಕ್ಯ ಇತರರದ್ದು ಸುಳ್ಳುಗಳು ಎಂದು ಹಿಂದೂತ್ವವಾದಿಗಳು ವಾದಿಸುವುದರಿಂದ ಡೋನಿಗರ್ ಚೆಡ್ಡಿ ಸಿದ್ಧಾಂತಿಗಳ ಕೆಂಗಣ್ಣಿಗೆ ಗುರಿಯಾಗುತ್ತಾ ಬಂದಿದ್ದಾರೆ.

2009ರಲ್ಲಿ ಡೋನಿಗರ್ ಅವರ 'ದಿ ಹಿಂದೂಸ್: ಅನ್ ಆಲ್ಟರ್ನೇಟಿವ್ ಹಿಸ್ಟರಿ' ಪ್ರಕಟಗೊಂಡಾಗ ಅದನ್ನು ಮೆಚ್ಚಿ ಜಗತ್ತಿನ ಹಲವಾರು ಪತ್ರಿಕೆಗಳು ವಿಮರ್ಶೆಗಳನ್ನು ಪ್ರಕಟಿಸಿದ್ದವು. ದಿ ಹಿಂದೂಸ್ತಾನ್ ಟೈಮ್ಸ್ ಪ್ರಕಾರ ಆ ವರ್ಷ ಅತಿಹೆಚ್ಚು ಮಾರಾಟವಾದ 'ಅಕಲ್ಪಿತ ಪುಸ್ತಕ'ಗಳಲ್ಲಿ ಅತಿ ಮೊದಲನೆ ಸ್ಥಾನ ಪಡೆದಿತ್ತು, ಅದರ ಮಾರನೆ ವರ್ಷ ನ್ಯಾಷನಲ್ ಬುಕ್ಸ್ ಕ್ರಿಟಿಕ್ಸ್ ಸರ್ಕಲ್ ಎಂಬ ಸಂಸ್ಥೆಯು ಅದೇ ಕೃತಿಯನ್ನು 2009 ಪುಸ್ತಕ ಪ್ರಶಸ್ತಿಗೆ ಆಯ್ಕೆ ಮಾಡಿಕೊಂಡಿತು. ಆಗಲೇ ಹಿಂದೂತ್ವವಾದಿಗಳು ತಕರಾರು ಶುರುಹಚ್ಚಿಕೊಂಡಿದ್ದು.

"ಡೋನಿಗರ್ ಓರ್ವ ಕ್ರಿಶ್ಚಿಯನ್ ಮಹಿಳೆಯಾಗಿದ್ದು ಕ್ರಿಶ್ಚಿಯನ್ ಚಿಂತನೆಯನ್ನು ಹರಡುವ ಉದ್ದೇಶದಿಂದಲೇ ಹಿಂದೂಗಳ ನಂಬಿಕೆಗಳನ್ನು ಅವಹೇಳನ ಮಾಡುವ ಈ ಪುಸ್ತಕವನ್ನು ಬರೆದಿದ್ದಾಳೆ. ಆಕೆಗೆ ಲೈಂಗಿಕ ವಿಷಯಗಳಲ್ಲೇ ಹೆಚ್ಚು ಆಸಕ್ತಿ ಇದೆ. ಆದ್ದರಿಂದ ಆಕೆ ಹಿಂದೂ ಪುರಾಣಗಳನ್ನು ಲೈಂಗಿಕ ದೃಷ್ಟಿಯಿಂದ ನೋಡಿದ್ದಾಳೆ" ಎಂದೆಲ್ಲಾ ಅಲ್ಲಿಯತನಕ ಯಾರೂ ಕೇಳರಿಯದಿದ್ದ ಶಿಕ್ಷಾ ಬಚಾವೋ ಆಂದೋಲನ ಎಂಬ ಹಿಂದೂತ್ವವಾದಿಗಳ ಸಂಘಟನೆ ದೆಹಲಿಯ ಸಾಕೇತ್ ನ್ಯಾಯಾಲಯದ ಮುಂದೆ ದೂರುಗಳನ್ನು ಗುಜರಾಯಿಸಿತ್ತು, ಆ ದೂರುಗಳ ವಿರುದ್ಧ ಡೋನಿಗರ್ ಅವರ ಪುಸ್ತಕವನ್ನು ಪ್ರಕಟಿಸಿದ್ದ ಪೆಂಗ್ವಿನ್ ಸಂಸ್ಥೆ ಕಾನೂನು ಹೋರಾಟವನ್ನು ನಡೆಸಿತ್ತು, ಆದರೀಗ ಇದ್ದಕ್ಕಿದ್ದಂತೆ ಪೆಂಗ್ವಿನ್ ಸಂಸ್ಥೆ ಕಾನೂನು ಹೋರಾಟವನ್ನು ಸ್ಥಗಿತಗೊಳಿಸಿ ಹಿಂದೂತ್ವವಾದಿಗಳ ದೂರಿಗೆ ತಲೆ ಬಾಗಿದೆ. "ಇನ್ನು ಮುಂದೆ 'ಭಾರತ್'ದಲ್ಲಿ ಈ ಪುಸ್ತಕವನ್ನು ಮಾರಾಟ ಮಾಡುವುದಿಲ್ಲ, ಜೊತೆಗೆ ನಮ್ಮಲ್ಲಿರುವ ಈ ಪುಸ್ತಕಗಳ ಪ್ರತಿಗಳನ್ನು ನಮ್ಮ ವೆಚ್ಚದಲ್ಲೇ ಸಂಪೂರ್ಣವಾಗಿ ಪುಡಿ ಮಾಡುತ್ತೇವೆ" ಎಂಬ ಪತ್ರಕ್ಕೆ ಸಹಿ ಹಾಕುವ ಮೂಲಕ ಹಿಂದೂತ್ವವಾದಿಗಳ ಬೆದರಿಕೆಗಳ ಮುಂದೆ ಶರಣಾಗಿದೆ.

ವಾಸ್ತವವಾಗಿ ಡೋನಿಗರ್ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಲ್ಲ, ಬದಲಾಗಿ ಆಕೆ ಯಹೂದಿ. ಅವರ ಬಗ್ಗೆ ಇಂತಹ ಪ್ರಾಥಮಿಕ ಅರಿವೂ ಇಲ್ಲದ ಹಿಂದೂತ್ವವಾದಿಗಳಿಗೆ ಇನ್ನು ಆಕೆ ಬರೆದಿರುವ ಕೃತಿಯಲ್ಲಿ ಏನಿದೆ ಎಂದು ಅರ್ಥವಾಗುವುದಾದರೂ ಹೇಗೆ? ಆ ಸಣ್ಣ ಅಂಶವನ್ನು ಬದಿಗಿಟ್ಟು ಡೋನಿಗರ್ ಅವರು ತಮ್ಮ ಪುಸ್ತಕದಲ್ಲಿ ಏನನ್ನು ಬರೆದಿದ್ದಾರೆ ಎಂದು ನೋಡಿದರೆ ಹಿಂದೂತ್ವವಾದಿಗಳ ವಿರೋಧಕ್ಕೆ ಕಾರಣಗಳೂ ಅರ್ಥವಾಗುತ್ತದೆ.

ಸುಮಾರು 700 ಪುಟಗಳ 'ಹಿಂದೂಗಳು: ಒಂದು ಪರ್ಯಾಯ ಇತಿಹಾಸ' ಎಂಬ ಪುಸ್ತಕದಲ್ಲಿ ಡೋನಿಗರ್ ಅವರು ಸಿಂಧೂ ಕಣಿವೆ ನಾಗರಿಕತೆಯಿಂದ ಪ್ರಾರಂಭಿಸಿ 1992ರಲ್ಲಿ ಹಿಂದೂತ್ವವಾದಿಗಳು ಧ್ವಂಸ ಮಾಡಿದ ಬಾಬ್ರಿ ಮಸೀದಿಯವರೆಗೂ 'ಹಿಂದೂ ಧರ್ಮ' ಸಾಗಿಬಂದಿರುವ ವಿವಿಧ ಮಜಲುಗಳನ್ನು ತೆರೆದಿಟ್ಟಿದ್ದಾರೆ. ಹಿಂದೂ ಸಂಸ್ಕೃತಿ ಮತ್ತು ಚಿಂತನೆಗಳನ್ನು ಅಧ್ಯಯಿಸಿರುವ ಡೋನಿಗರ್ ವಿವಿಧ ಕಾಲಘಟ್ಟಗಳಲ್ಲಿ ಹೇಗೆ ಕವಿಗಳು, ಬರಹಗಾರರು ಮತ್ತು ಸಂತರು ಪುರೋಹಿತಶಾಹಿಗಳನ್ನು ವಿರೋಧಿಸುತ್ತಾ ಹೊಸ ಪರಂಪರೆಗಳಿಗೆ ನಾಂದಿ ಹಾಡಿದ್ದಾರೆಂದು ತೆರೆದಿಟ್ಟಿದ್ದಾರೆ. ಅದರಲ್ಲೂ ಮನುವಿನ 'ಸಾಮಾಜಿಕ ವ್ಯವಸ್ಥೆಯ' ವಿರುದ್ಧ ತಿರುಗಿಬಿದ್ದ ಮಹಿಳೆಯರ, ದಲಿತರ ಮತ್ತು ಆದಿವಾಸಿಗಳ ಕತೆಗಳನ್ನು ಹೇಳಿದ್ದಾರೆ. ಉದಾಹರಣೆಗೆ ಏಕಲವ್ಯನ ಕತೆಯು ಹೇಗೆ ಜಾತಿ ವ್ಯವಸ್ಥೆಯನ್ನು ಕಾಪಾಡುವ ಉದ್ದೇಶವನ್ನು ಹೊಂದಿತ್ತೆಂದೂ ಡೋನಿಗರ್ ವಿಶ್ಲೇಷಿಸಿವ ಪುರೋಹಿತಶಾಹಿಗಳ ಕುತಂತ್ರವನ್ನು ವಿವರಿಸಿದ್ದಾರೆ.

ಆದರೆ ಜಾತಿ ವ್ಯವಸ್ಥೆಯ 'ಶ್ರೇಷ್ಠತೆ' ಯನ್ನು ಕಾಪಾಡುವ ಅಜೆಂಡಾವನ್ನು ಹೊಂದಿರುವ ಹಿಂದೂತ್ವವಾದಿಗಳು ಸಹಜವಾಗಿಯೂ ಈ ಪುಸ್ತಕದ ವಿರುದ್ಧ ತಿರುಗಿಬಿದ್ದರು.

ಡೋನಿಗರ್ ಅವರು ಇಂತಹ ಕೃತಿ ಬರೆಯಲು ಕಾರಣ ಅವರಿಗೆ ಹಿಂದೂ ಸಮಾಜದ ಬಗ್ಗೆ ಟೀಕೆ-ವಿಮರ್ಶೆಗಳು ಇವೆ ಎಂಬುದಲ್ಲ, ಬದಲಾಗಿ ಅವರಲ್ಲಿ ಈ ಸಮಾಜದ ಬಗ್ಗೆ ಅಪಾರ ಕಾಳಜಿ ಮತ್ತು ಅಧ್ಯಯನ ಇದೆ ಎಂಬುದೇ ಆಗಿದೆ. ಹಿಂದೂ ಧರ್ಮ ಎಂಬುದು ಒಂದು ಗ್ರಂಥ ಅಥವಾ ಸಿದ್ಧಾಂತದಲ್ಲಿಲ್ಲ, ಬದಲಾಗಿ ಅದು ಹಲವಾರು ರೆಂಬೆ ಮತ್ತು ಬೇರುಗಳನ್ನು ಹೊಂದಿರುವ ಒಂದು ದೊಡ್ಡ ಆಲದಮರ ಇದ್ದಂತೆ; ಹಲವಾರು ತತ್ವ ಸಿದ್ಧಾಂತಗಳ ಮಿಶ್ರಣವೇ ಹಿಂದೂ ಧರ್ಮ ಎಂಬ ನಂಬಿಕೆ ಡೋನಿಗರ್ ಅವರದ್ದು.

"ಹಿಂದೂ ಧರ್ಮ ಒಂದು ಅದ್ಭುತ ಧರ್ಮ. ಇಲ್ಲಿ ಯಾವ ಪೋಪ್ ಮತ್ತು ಮುಲ್ಲಾ ಇಲ್ಲದ್ದರಿಂದ ಯಾರೂ ಯಾರಿಗೂ ಇದೇ ಸರಿ ಎಂದು ಆದೇಶಿಸುತ್ತಿರಲಿಲ್ಲ, ಪರಿಣಾಮವಾಗಿ ವಿವಿಧ ಸಮುದಾಯಗಳು ತಮ್ಮದೇ ಆದ ಸಂಸ್ಕೃತಿ, ಇತಿಹಾಸ, ಸಂಪ್ರದಾಯಗಳನ್ನು ಕಟ್ಟಿಕೊಂಡು ಸಾಗಿಬಂದಿವೆ. ಈ ಕಾರಣಕ್ಕೇ ಇಲ್ಲಿ ಹಲವಾರು ತರಹದ ರಾಮಾಯಣಗಳು ಸಾಧ್ಯವಾಗಿದೆ. ಒಂದು ರಾಮಾಯಣದಲ್ಲಿ ಸೀತೆಯ ಬದಲಿಗೆ ಆಕೆಯ ನೆರಳು ಮಾತ್ರ ಲಂಕೆಗೆ ಹೋದರೆ, ಇನ್ನೊಂದು ರಾಮಾಯಣದಲ್ಲಿ ಸೀತೆ ರಾವಣನ ಪುತ್ರಿಯಾಗಿದ್ದಾಳೆ. ಆದರೀಗ ಅಂತಹ ಒಂದು ಸ್ವತಂತ್ರತೆಗೆ ಕಡಿವಾಣಗಳು ಬೀಳುತ್ತಿವೆ. ಒಂದು ವರ್ಗದ ಶ್ರೇಷ್ಠತೆಯನ್ನು ಕಾಪಾಡುವ ಕತೆಗಳನ್ನು ಮಾತ್ರ ಹೇಳಬೇಕು ಉಳಿದದ್ದನ್ನಲ್ಲ ಎಂದು ವಾದಿಸುವ ಧೋರಣೆ ಶುರುವಾಗಿದೆ. ಮಾತ್ರವಲ್ಲ ರಾಮಮಂದಿರ ಇದ್ದಲ್ಲೇ ಬಾಬ್ರಿ ಮಸೀದಿಯನ್ನು ಕಟ್ಟಿದ್ದರು ಎಂದೂ, ಕೋತಿಗಳು ಶ್ರೀಲಂಕೆಗೆ ಸೇತುವೆಯನ್ನು ನಿರ್ಮಿಸಿದ್ದವು ಎಂದೂ ಹೇಳಬೇಕು. ಅದಕ್ಕಿಂತ ಅಪಾಯಕಾರಿಯಾದದ್ದು ರಾಮ ಒಂದು ಐತಿಹಾಸಿಕ ವ್ಯಕ್ತಿಯಾಗಿರಲಿಲ್ಲ ಬದಲಾಗಿ ಆತ ಓರ್ವ ಕಲ್ಪಿತ ವ್ಯಕ್ತಿ ಎಂದರೆ ಅದು ಹಿಂದೂಗಳ ಧಾರ್ಮಿಕ ನಂಬಿಕೆಗೆ ಅವಹೇಳನ ಎಂದು ವಾದಿಸುತ್ತಾರಲ್ಲದೆ ರಾಮಾಯಣ ಒಂದು ಕಲ್ಪಿತ ಕೃತಿ ಎಂದು ಹೇಳುವುದೂ ಇವತ್ತು ಐಪಿಸಿ ಪ್ರಕಾರ ಕಾನೂನುಬಾಹಿರವೂ ಆಗಿದೆ. ಇದು ದುರದೃಷ್ಟಕರ" ಎಂದು ಡೋನಿಗರ್ ವಿಷಾದಿಸುತ್ತಾರೆ.

ನೆನಪಿಡಿ, ಡೋನಿಗರ್ ಅವರ ಪುಸ್ತಕದ ವಿರುದ್ಧ ಯಾವ ಸರ್ಕಾರವೂ ನಿಷೇಧ ಹೇರಿಲ್ಲ, ಯಾವ ನ್ಯಾಯಾಲಯವೂ ಅದರ ವಿರುದ್ಧ ತೀರ್ಪು ನೀಡಿಲ್ಲ. ಆದರೂ ಅವರ ಕೃತಿಯನ್ನು ಮಟ್ಟಹಾಕಲು ಅದನ್ನು ಪ್ರಕಟಿಸಿದ್ದ ಪ್ರಖ್ಯಾತ ಪೆಂಗ್ವಿನ್ ಸಂಸ್ಥೆ ಒಪ್ಪುತ್ತದೆ ಎಂದರೆ ಹಿಂದೂತ್ವವಾದಿಗಳ ಫ್ಯಾಸಿಸ್ಟ್ ಧೋರಣೆ ಯಾವ ಮಟ್ಟಕ್ಕೆ ಏರಿದೆ ಎಂಬುದನ್ನು ತೋರುತ್ತದೆ.


ಇನ್ನು ಹಿಂದೂತ್ವವಾದಿಗಳ ಎಲ್ಲಾ ರೀತಿಯ ದಮನಕಾರಿ ಸಿದ್ಧಾಂತಗಳ ಪ್ರತೀಕದಂತಿರುವ ನರೇಂದ್ರ ಮೋದಿ ಈ ದೇಶದ ಪ್ರಧಾನಿಯಾದರೆ ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮಾತ್ರವಲ್ಲ, ಎಲ್ಲ ತರಹದ ಸ್ವಾತಂತ್ರ್ಯಗಳೂ ದಮನವಾಗುತ್ತವೆ. ಇದು ಆಗಕೂಡದೆಂದರೆ ಎಲ್ಲಾ ಪ್ರಜಾತಂತ್ರವಾದಿಗಳು ಈಗಲಾದರೂ ಎಚ್ಚೆತ್ತುಕೊಂಡು ಹಿಂದೂತ್ವವಾದಿಗಳ ವಿರುದ್ಧ ಪ್ರಚಾರಾಂದೋಲನದಲ್ಲಿ ತಮ್ಮೆಲ್ಲ ಶಕ್ತಿಯನ್ನು, ಆಸಕ್ತಿ ಕಾಳಜಿಗಳನ್ನು ತೊಡಗಿಸಬೇಕಿದೆ. •

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಪಿ. ಲಂಕೇಶ್‌ರ ಮೊಮ್ಮಗ ಸಮರ್ಜಿತ್ ಇತ್ತೀಚೆಗೆ ಬರೆದ ಕವನಗಳು ನಿಮಗಾಗಿ



ಅಮ್ಮ

ನೀನೇ ನನ್ನ ಮನಸು, ನೀನೇ ನನ್ನ ಕನಸು
ನಿನ್ನಿಂದಲೇ ಹುಟ್ಟಿ ನಾನಿಲ್ಲಿಗೆ ಬಂದೆ
ನಿನ್ನ ಕಣ್ಣು ನೋಡಿ ನನಗೆ ನೀಡಿದೆ.
ಪ್ರೀತಿಯಿಂದ ಹುಟ್ಟಿಸಿ, ಪ್ರೀತಿಯಿಂದ ಬೆಳೆಸಿ
ನನ್ನನ್ನು ಖುಷಿ ಮಾಡಿದೆ.
ಕಷ್ಟವನ್ನು ಸುಖ ಮಾಡಲು ನೀನನಗೆ ತೋರಿಸಿದೆ.
ಇದೇ ಅಮ್ಮನ ಪ್ರೀತಿ ಎಂದು ಹೇಳುವೆ.

****

ಅಪ್ಪ

ಅಪ್ಪ ನೀನು ನನಗೆ ಎಲ್ಲವನ್ನೂ ಕೊಟ್ಟಿದ್ದಿ
ಒಂದರ ಹೊರತು
ಅದೇನೆಂದು ಯೋಚಿಸಿ ಹೇಳುವೆ
ಸ್ವಲ್ಪ ಹೊತ್ತು

ಇಲ್ಲ, ಆ ಒಂದನ್ನೂ ಕೊಟ್ಟಿದ್ದಿ ನನಗೆ
ಸ್ಟಡ್ ಶೂಗಳು!
ಫುಟ್‌ಬಾಲ್ ಆಡಲಿಕ್ಕೆ, ಓಡಲಿಕ್ಕೆ, ಜಾಗ್
ಮಾಡಲಿಕ್ಕೆ ಬಳಸಲಿಕ್ಕೆಂದು

ಸ್ಟಡ್ಸ್‌ಗಳನ್ನು ಕೊಟ್ಟಿದ್ದೀ ಹೌದು
ಅದರ ಜೊತೆ ಪ್ರೀತಿಯನ್ನು ಕೊಟ್ಟಿದ್ದೀಯ?
ಬಿಡು, ಅದನ್ನೂ ಕೊಡುತ್ತೀಯ ಎಂದೂ
ಹಲವೊಮ್ಮೆ ಬನ್ ಜೊತೆ!

ಈಗ ಗಂಟೆಗಟ್ಟಲೆ ಯೋಚಿಸಿದ ನಂತರ
ಗೊತ್ತಾಗುತ್ತಿದೆ ನನಗೆ
ನನ್ನಪ್ಪ ನೀನು ನನಗೆ ಎಲ್ಲವನ್ನೂ ಕೊಟ್ಟಿದ್ದಿ
ಪ್ರೀತಿಯ ಜೊತೆಗೆ!


• ಸಮರ್ಜಿತ್ ಲಂಕೇಶ್
(13 ವರ್ಷ)

ಉತ್ತರ ಕನ್ನಡ: ದಗಲುಬಾಜಿ ದೇಶಪಾಂಡೆಯ ಬಿನ್ ಶೇತ್ಕಿ ಬಿಸ್ನೆಸ್!!


ಉತ್ತರ ಕನ್ನಡ ಊಳಿಗ ಮಾನ್ಯದ ಪಳೆಯುಳಿಕೆಯಂತಿರುವ ಧಣಿಶಾಹಿ ಮಂತ್ರಿ ಆರ್.ವಿ. ದೇಶಪಾಂಡೆಯ ದಾದಾಗಿರಿಗೆ ದಿಕ್ಕುಟ್ಟು ಹೋಗಿದೆ! ಪಾಳೆಗಾರಿಕೆ ದೊರೆಯಂತೆ ಹಾರಾಡುತ್ತಿರುವ ಈತನ ಅಟ್ಟಹಾಸ-ಅನ್ಯಹಾರ-ಅಧಿಕ ಪ್ರಸಂಗ ಜಿಲ್ಲಾಡಳಿತವನ್ನು ಅಧ್ವಾನಕ್ಕೆ ಇಳಿಸಿದೆ. ಸಾವಿರಾರು ಕೋಟಿ ಅಕ್ರಮ ಆಸ್ತಿ ಮಾಡಿಕೊಂಡಿರುವ ದೇಶಪಾಂಡೆ ಗಲೀಜಿನಲ್ಲಿ ಬಿದ್ದ ಬಲ್ಲಿಗೂ ಬಹಿರಂಗವಾಗೇ ಬಾಯಿಹಾಕುವುದು ಕಂಡು ಜಿಲ್ಲೆಯ ಜನರು ದಂಗಾಗಿದ್ದಾರೆ. ಮಂತ್ರಿಗಿರಿ ಅಧಿಕಾರ ಯದ್ವಾ-ತದ್ವಾ ಚಲಾಯಿಸುತ್ತಿರುವ ದೇಶಪಾಂಡೆ ತನ್ನ ಹರಾಮಿ ಹಿಂಬಾಲಕರ ದೋ ನಂಬರ್ ದಂಧೆ ಪೋಷಿಸಲು ಮತ್ತು ಪೆದ್ದು ಮಗನನ್ನು ಸಂಸದನ ಮಾಡಲು ಅಧಿಕಾರಿಗಳಿಗೆ ಬೈದು- ಬಾರಿಸಿ ಕಾನೂನುಬಾಹಿರ ಕೆಲಸ ಮಾಡಿಸುತ್ತಿದ್ದಾರೆ.

1983ರಲ್ಲಿ ಶಾಸಕನಾದ ದೇಶಪಾಂಡೆ ನಿರಂತರ 25 ವರ್ಷ ಒಂದಿಲ್ಲೊಂದು ಆಯಕಟ್ಟಿನ ಅಧಿಕಾರ ಅನುಭವಿಸುತ್ತಲೇ ಬಂದಾತ. ಈ ಕಾಲುಶತಮಾನ ಅಕ್ರಮ ಹಣ ಕೂಡಿಸುತ್ತ ಮೆರೆದ ದೇಶಪಾಂಡೆ 2008ರ ನಂತರದ ಒಂದು ಅವಧಿ ಅಧಿಕಾರಾಧಾರಿತ ದಂಧೆ ಇಲ್ಲದೆ ಹಸಿದ ರಣಹದ್ದಿನಂತಾಗಿದ್ದರು. ಸಿದ್ದು ಸರ್ಕಾರದಲ್ಲಿ ಮಂತ್ರಿಯಾಗುತ್ತಲೇ ಮತ್ತೆ ಮೊದಲಿನ ವಸೂಲಿ-ಹಫ್ತಾ-ಕಮಿಷನ್-ದರ್ಪ-ದುರಹಂಕಾರ-ದೌಲತ್ತಿನ ದರ್ಬಾರು ಶುರು ಹಚ್ಚಿಕೊಂಡು ಬಿಟ್ಟ ದೇಶಪಾಂಡೆ ಸಾಹೇಬ! ದುಡ್ಡು ಕೊಡುವ ಅಡ್ಡ ಕಸುಬಿಗೆ ಅಧಿಕಾರಿಗಳ ಪಳಗಿಸಲು ಈ ಮಂತ್ರಿ ಏನು ಮಾಡಲಿಕ್ಕೂ ಹೇಸಲಾರ. ತನ್ನ ಮಾತು ಕೇಳೋದಿಲ್ಲವೆಂದು ಈಚೆಗೆ ಸ್ವ-ಕ್ಷೇತ್ರ ಹಳಿಯಾಳದ ಇಂಜಿನಿಯರ್ ಒಬ್ಬನಿಗೆ ಕಪಾಳಮೋಕ್ಷ ಮಾಡಿದ್ದ ದೇಶಪಾಂಡೆ ಅದಕ್ಕೂ ಮೊದಲು ಹೆಸ್ಕಾಮ್ ಅಧಿಕಾರಿಗೆ ಬಾಯಿಗೆ ಬಂದಂತೆ ಬೈದು ಬಲ ತೋರಿಸಿದ್ದರು. ಮೊನ್ನೆ ಹಳಿಯಾಳ ಪಕ್ಕದ ಖಾನಾಪುರ (ಉತ್ತರ ಕನ್ನಡ ಪಾರ್ಲಿಮೆಂಟ್ ಕ್ಷೇತ್ರದ ಅಸೆಂಬ್ಲಿ ಕಾನ್‌ಸ್ಟ್ಯೂಯೆನ್ಸ್)ದ ಅಸಿಸ್ಟೆಂಟ್ ಕಮಿಷನರ್‌ಗೆ ಮರಳು ಮಾಫಿಯಾಕ್ಕೆ ಸಹಕರಿಸುವಂತೆ ಧಮಕಿ ಹಾಕಿ 'ಖ್ಯಾತ'ರಾಗಿದ್ದಾರೆ.


ದೇಶಪಾಂಡೆ ಹುಟ್ಟಾ ಫ್ಯೂಡಲ್ ಪರಾಕ್ರಮಿ! ತಲೆ ಮಾಸಿದರೂ ಈ ಪುಂಡ ಪುಢಾರಿಗೆ ಬುದ್ಧಿ ಮಾತ್ರ ಬದಲಾಗಿಲ್ಲ. ತನ್ನ ಪಾಳೆಗಾರಿಕೆ ಪೊಗರು ತೋರಿಸಲು ಈತ ಪ್ರತಿ ವರ್ಷ ಹಳಿಯಾಳದಲ್ಲಿ ಕುಸ್ತಿ ಪ್ರದರ್ಶನ ಏರ್ಪಡಿಸುತ್ತಾರೆ. ಇದೊಂದು ಕೋಟ್ಯಾಂತರ ರೂ. ಪಾಲಿಟಿಕಲ್ ಶೋ! ಪ್ರತಿ ಬಾರಿ ಕುಸ್ತಿ ಸ್ಪರ್ಧೆ ಆರಂಭವಾಗುವಾಗ ದೀನದಲಿತರಿಂದ ಹಲಗೆ ಬಾರಿಸಿ ಉಳ್ಳವರ ಪ್ರಚೋದಿಸುವ ಗಿಮಿಕ್ ದೇಶಪಾಂಡೆ ಪಾಲಮ್ ಮಾಡುತ್ತದೆ. ಹಲಗೆ ಬಾರಿಸುವವರಿಗೆ ದೇಶಪಾಂಡೆ ಮತ್ತವನ ಬಳಗ ಹಣದ ನೋಟಿನ ಆಸೆ ತೋರಿಸಿ ಪ್ರಾಣಿಯಂತೆ ಕುಣಿಸುತ್ತಾರೆ. ಇದು ಥೇಟ್ ಜಮೀನ್ದಾರಿ ಕ್ರೌರ್ಯದ ಮನರಂಜನೆ! ಕೆಲದಿನಗಳ ಹಿಂದೆ ದೇಶಪಾಂಡೆ ಹಲಗೆ ಬಾರಿಸುವವನಿಗೆ 500ರ ನೋಟು ತೋರಿಸಿ, ಹಲಗೆ ಬಾರಿಸುತ್ತಲೇ ಅದನ್ನು ಹಾರಿ ಬಾಯಿಂದ ಪಡೆಯಲು ಕುಣಿಸಿ ದಣಿಸಿ ಮುದಗೊಂಡಿದ್ದು ಘೋರವಾಗಿತ್ತು! ಇಂಥ ಕಳ್ಳಕಾಸಿನ ಸೊಕ್ಕಿನ ಆಸಾಮಿ ಪ್ರಜಾಪ್ರಭುತ್ವದಲ್ಲಿ ಮಂತ್ರಿಯಾಗಿರುವುದೇ ದುರಂತ!!


ವಿಜಯ ಮಹಾಂತೇಶ್

ಸಮಾಜವಾದಿ ಸಿದ್ದುಗೆ ಈ ಪಾಳೆಗಾರ ದೊಡ್ಡ ಹೊರೆಯಾಗುತ್ತಾನೆಂಬ ಸೂಚನೆ 'ಪತ್ರಿಕೆ' ಹಿಂದೆಯೇ ಕೊಟ್ಟಿತ್ತು, ಅದೀಗ ಅಕ್ಷರಶಃ ಖರೆಯಾಗಿದೆ. ಮೆಡಿಕಲ್-ಇಂಜಿನಿಯರಿಂಗ್ ಸೀಟ್ ಗೊಂದಲದಿಂದ ಹಿಡಿದು ಉಪಕುಲಪತಿಗಳ ಆಯ್ಕೆವರೆಗೆ, ಉತ್ತರ ಕನ್ನಡದ ಉಂಡಾಡಿ ಉಸ್ತುವಾರಿಕೆಯಿಂದ ಪ್ರವಾಸೋದ್ಯಮ ಮಗನ ಬೀಚ್-ರೆಸಾರ್ಟ್ ಉದ್ಯಮಕ್ಕೆ ಅನುಕೂಲವಾದ ರಸ್ತೆಗೆ ಕೋಟ್ಯಾಂತರ ರೂ. ಸ್ಯಾಂಕ್ಷನ್ ಮಾಡಿಸಲು ಬಳಸುವತನಕ, ಅಕ್ರಮಕ್ಕೆ ಅಧಿಕಾರಿಗಳಿಗೆ ಅಪ್ಪಣೆ ಕೊಡುವುದರಿಂದ ಕಪ್ಪ ಕಾಣಿಕೆಗಾಗಿ ಪೀಡಿಸುವವರೆಗೆ, ಅಲ್ಲಿಂದ ದಲಿತರ ಕುಣಿಸಿ ಖುಷಿ ಪಡುವ ಕುಚೋದ್ಯದ ತನಕ 'ದೋಷ ಪಾಂಡೆ' ಸುದ್ದಿ ಮಾಡಿದ್ದಾರೆ.




ಜನತಂತ್ರದ ಭಯೋತ್ಪಾದಕನಂತೆ ಓಡಾಡುವ ದೇಶಪಾಂಡೆಯ ಧನ ದಾಹ ಉತ್ತರ ಕನ್ನಡದ ಅಸಹಾಯಕ ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ! ಜಿಲ್ಲಾಧಿಕಾರಿ ಕಚೇರಿಯೇ ಈ ಮಂತ್ರಿ ಮಾಂಡಲೀಕನ ವಸೂಲಿ ಅಡ್ಡೆಯಾಗಿ ಹೋಗಿದೆ!! ಕೃಷಿ ಜಮೀನನ್ನು ವಾಸ್ತವ್ಯ ಕೈಗಾರಿಕೆ ಅಥವಾ ವ್ಯಾಪಾರಕ್ಕೆ ಅರ್ಹವಾದ ಬಿನ್ ಶೇತ್ಕಿ (ನಾನ್ ಎಂಗ್ರಿಕಲ್ಚರ್ ಲ್ಯಾಂಡ್)ಯಾಗಿ ಪರಿವರ್ತಿಸುವ ಪ್ರಕ್ರಿಯೆ ದೇಶಪಾಂಡೆಯ ಪಟಾಲಮ್‌ಗೆ ಅರ್ಧ ಕೋಟಿಯ ತಿಂಗಳ ಬಿಸ್ನೆಸ್ ಆಗಿದೆ. ದೇಶಪಾಂಡೆ ಸದ್ರಿ ಬಿನ್ ಶೇತ್ಕಿ ದಂಧೆ ಮಳಿಗೆಗೆ ಮ್ಯಾನೇಜರ್ ಜಿಲ್ಲಾಧಿಕಾರಿ ಕಚೇರಿಯ ಹೆಡ್ ಕ್ವಾಟರ್ಸ್ ಅಸಿಸ್ಟೆಂಟ್ ಕಂ ಎಡಿಷನಲ್ ಡಿಸಿ ವಿಜಯ ಮಹಾಂತೇಶ್! ಈ ಗೋಲ್‌ಮಾಲ್ ಶೂರ ವಿನೋದ್ ಬೋಂಗಾಳೆ ಎಂಬ ದ್ವಿತೀಯ ದರ್ಜೆ ಗುಮಾಸ್ತನನ್ನು ಎನ್‌ಎ ಕನ್‌ವರ್ಶನ್ ವಿಭಾಗದ


ಇಂಕಾಂಗ್ಲೋ ಜಮೀರ್

ಮುಖ್ಯಸ್ಥನ್ನಾಗಿಸಿ ಆತನ ಮೂಲಕ ಕಮಾಯಿ ಮಾಡುತ್ತಿದ್ದಾನೆ.

ಸುಲಿಗೆ ತಂತ್ರಗಾರಿಕೆಯಲ್ಲಿ ನಿಪುಣನಾದ ವಿನೋದ್ ಬೋಂಗಾಳೆಗೆ ಜಿಲ್ಲಾಧಿಕಾರಿ ಕಚೇರಿಯ ವಿಶೇಷ ಕೊಠಡಿಯನ್ನು ಕೊಡಲಾಗಿದೆ. ಇದು ಜಿಲ್ಲೆಗೆ ಬರುವ ಐಎಎಸ್ ಗ್ಯಾಂಗಿನ ಅಧಿಕಾರಿಗಳಿಗೆಂದು ಮೀಸಲಿಟ್ಟಿರುವ ಮಹತ್ವದ ಕ್ಯಾಬಿನ್. ಅಲ್ಲಿ ಜುಜುಬಿ ಎಸ್‌ಡಿಎ ಒಬ್ಬ ಠಾಕು-ಠೀಕಿನಿಂದ ವಿರಾಜಮಾನನಾಗಿರುತ್ತಾನೆಂದರೆ ಏನರ್ಥ? ಅಷ್ಟೇ ಅಲ್ಲ, ಈ ಬೋಂಗಾಳೆ ತನ್ನ ಎನ್‌ಎ ದಂಧೆ ನಿಭಾಯಿಸಲು ಕಂಪ್ಯೂಟರ್ ಇಟ್ಟುಕೊಂಡಿದ್ದಾರೆ. ಅದನ್ನು ಆಪರೇಟ್ ಮಾಡಲು ಸಹಾಯಕಿ ನೇಮಿಸಿಕೊಂಡಿದ್ದಾನೆ. ನಿಮಗೆ ಗೊತ್ತಿರಲಿ, ಈಕೆ ಸರ್ಕಾರಿ ಸಿಬ್ಬಂದಿಯಲ್ಲ, ಬೋಂಗಾಳೆ ಪಗಾರ ಕೊಟ್ಟು ನೇಮಿಸಿಕೊಂಡಿರುವ ಖಾಸಗಿ ಚಾಕರಿ ಹುಡುಗಿ. ಜಿಲ್ಲಾಧಿಕಾರಿಣಿ ಇಂಕಾಂಗ್ಲೋ ಜಮೀರ್ ದಿನವೂ ಕಚೇರಿಗೆ ಬರುವಾಗ-ಹೋಗುವಾಗ ಬೋಂಗಾಳೆ 'ಸಾಹೇಬರ'ರ ಚೇಂಬರ್ ಎದುರಿಂದಲೇ ತಿರುಗಾಡಬೇಕು. ಹಾಗಂತ ಆಕೆ ಎಂದೂ ಐಎಎಸ್ ಕೇಡರಿನ ಅತಿಥಿ ಅಧಿಕಾರಿಗೆಂದು ಕಾಯ್ದಿರಿಸಿರುವ ಕೊಠಡಿಯಲ್ಲಿ ಕುಳಿತಿರುವ 'ದೊಡ್ಡವ' ಯಾರೆಂದು ಕೇಳಿದ್ದೇ ಇಲ್ಲ; ಅಷ್ಟೇ ಅಲ್ಲ; ಬೋಂಗಾಳೆ ಜತೆ ಇರುವ ಆಗಂತುಕಿ ಕಂಪ್ಯೂಟರ್ ಮುಂದೇಕೆ ಕುಂತಿರುತ್ತಾಳೆಂದು ಅಧೀನಾಧಿಕಾರಿಗೆ ಪ್ರಶ್ನೆ ಹಾಕಿದ್ದಿಲ್ಲ.

ಯಾಕೆ ಡೀಸಿಯಮ್ಮ ಸುಮ್ಮನಿದ್ದಾರೆ ಗೊತ್ತಾ? ಜಿಲ್ಲಾ ಮಹಾರಾಜ ದೇಶಪಾಂಡೆ ಆಣತಿಯಂತೆ ನಡೆಯುತ್ತಿರುವ ಈ ಅಡ್ಡ ಸುಲಿಗೆ ವಹಿವಾಟು ಕಂಡೂಕಾಣದಂತಿದ್ದಾರೆ. ಇನ್ನೊಂದು ಮೂಲದ ಪ್ರಕಾರ ಆಕೆಗೂ ಎನ್‌ಎ ದಂಧೆಯಲ್ಲಿ ಪಾಲಿದೆ. ಅದಕ್ಕೆ ಕಣ್ಮುಚ್ಚಿ ಕುಂತಿದ್ದಾರೆ. ಯಃಕಶ್ಚಿತ್ ಎಸ್‌ಡಿಸಿ



ಬೋಂಗಾಳೆ ಪುಟ್ ಅಪ್ ಮಾಡಿಡುವ ಯಾವ ಎನ್‌ಎ ಪ್ರಪೋಸಲ್ಲೂ ಡೀಸಿಯಮ್ಮ ತಿರಸ್ಕರಿಸುವುದಿಲ್ಲ. ಅದು ಅದೆಷ್ಟೇ ಕಾನೂನುಬಾಹಿರ- ಜನ ಸಾಮಾನ್ಯರ ಸತಾಯಿಸುವ ಪ್ರಕರಣವಾದರೂ ಇಂಕಾಂಗ್ಲೋ ಮೇಡಮ್ ಸಹಿ ಗುಜರಾಯಿಸುತ್ತಾರೆಂಬುದು ಜಿಲ್ಲಾಧಿಕಾರಿ ಕಚೇರಿಯ ಕಂಬ-ಕಂಬಕ್ಕೂ ಗೊತ್ತಿರುವ ಬಹಿರಂಗ ರಹಸ್ಯ. ಇದು ಮಹಾಂತೇಶನ ಮಹಿಮೆ! ಆತನೇ ಅಸಲಿ ಡಿಸಿ; ಮೇಡಮ್ ಡಮ್ಮಿ.

ಎಚ್‌ಕ್ಯೂಎ ವಿಜಯ ಮಹಾಂತೇಶ್ ಮತ್ತು ಎಸ್‌ಡಿಸಿ ವಿನೋದ್ ಬೋಂಗಾಳೆ ಮಂತ್ರಿ ದೇಶಪಾಂಡೆಯ ನಂಬಿಗಸ್ಥ ನೌಕರರು. ಇವರಿಬ್ಬರೂ ದೇಶಪಾಂಡೆಗೆ ಅನೇಕ ವಿಧದಲ್ಲಿ ಸಂಪರ್ಕ ಇರುವ ಆತನ ಹಳಿಯಾಳದ ಪಕ್ಕದ ಖಾನಾಪುರ ತಾಲ್ಲೂಕಿನವರು. ಸಾಹೇಬರಿಗೆ ಈ ಚೋರ ಜೋಡಿ ಪ್ರತಿ ತಿಂಗಳು ಎನ್‌ಎ ಕಪ್ಪ ಕಾಣಿಕೆ ಎಂದು ಸುಮಾರು ಮೂವತ್ತರಿಂದ ನಾಲ್ವತ್ತು ಲಕ್ಷ ನಿಷ್ಠೆಯಿಂದ ಒಪ್ಪಿಸುತ್ತಾರಂತೆ. ಇಷ್ಟು ದೊಡ್ಡ ಮೊತ್ತ ಸಂಗ್ರಹಿಸಲು ಮಹಾಂತೇಶ್-ಬೋಂಗಾಳೆ ಬೇರೆ-ಬೇರೆ ಬಿನ್ ಶೇತ್ಕಿ ಪರಿವರ್ತನೆಗೆ ಬೇರೆ-ಬೇರೆ ರೇಟ್ ಫಿಕ್ಸ್ ಮಾಡಿದ್ದಾರೆ. ಬಿನ್ ಶೇತ್ಕಿ ಪ್ರಸ್ತಾವನೆ ಮೂರು ಗುಂಟೆಗಿಂತ ಕಡಿಮೆ ಇದ್ದರೆ 5 ಸಾವಿರ ಏಜೆಂಟ್ ಕೊಡಬೇಕು. ಮೂರು ಗುಂಟೆಗಿಂತ ಮೇಲ್ಪಟ್ಟರೆ ಪ್ರತಿ ಗುಂಟೆಗೆ 3 ಸಾವಿರದಂತೆ ಮಾಮೂಲಿ ಇಡಬೇಕು; ಜತೆಗೆ 5 ಸಾವಿರ ಇನಾಮು ಕೊಡಲೇಬೇಕು. ಅಂದರೆ 5 ಗುಂಟೆ ಜಾಗ ಎನ್‌ಎ ಮಾಡಬೇಕೆಂದರೆ, ಬೋಂಗಾಳೆ ಬಾಯಿಗೆ ಒಟ್ಟು 20 ಸಾವಿರ ಹಾಕಬೇಕು!

ಏಜೆಂಟರ ಬಿಟ್ಟು ನೇರವಾಗಿ ಬರುವವರ ಎನ್‌ಎ ಬೇಡಿ[...] ಈಡೇರುವುದೇ ಇಲ್ಲ!!

ಇದರಲ್ಲಿ ಬೋಂಗಾಳೆ-ಮಹಾಂತೇಶ್-ಇಂಕಾಂಗ್ಲೋ ಎಷ್ಟೆಷ್ಟು ಹಂಚಿಕೊಳ್ಳುತ್ತಾರೋ ಗೊತ್ತಿಲ್ಲ, ಆದರೆ ಮಂತ್ರಿ ದೇಶಪಾಂಡೆಗೆ ಮಾತ್ರ ಪ್ರತಿ ಗುಂಟೆಗೆ ರೂ. 500 ರಂತೆ ತಲುಪಿಸಬೇಕು. ಇದು ಕಮ್ಮಿಯೆಂದರೂ 35-40 ಲಕ್ಷಗಳಾಗುತ್ತದೆ. ಬಿಜೆಪಿಯ ದೇಶಭಕ್ತ ಕಾಗೇರಿ ಜಿಲ್ಲಾ ಮಂತ್ರಿಯಾಗಿದ್ದಾಗ ಗುಂಟೆಯೊಂದಕ್ಕೆ ರೂ. 50ರಂತೆ ಸಂಗ್ರಹಿಸಿ ಆತನ ಕಲೆಕ್ಷನ್ ಪ್ರತಿನಿಧಿಯಾದ ಖಾಸ[...] ಸೋದರನಿಗೆ ಮುಟ್ಟಿಸಲಾಗುತ್ತಿತ್ತು, ದೇಶಪಾಂಡೆ ಜಿಲ್ಲಾ ಉಸ್ತುವಾರಿ ಆಗುತ್ತಿದ್ದಂತೆಯೇ ಎನ್‌ಎ ಅಪೇಕ್ಷಿತರ ಸುಸ್[...] ಹೊಡೆಸಿ ರೇಟ್ ಪ್ರತಿ ಗುಂಟೆಗೆ ರೂ. 500ಕ್ಕೆ ಏರಿಸಲಾಯ್ತು, ರೇಟು ಏರಿದರೂ ಜನರ ಕೆಲಸ ಮಾತ್ರ ಆಗುತ್ತಿಲ್ಲ, ಏಜೆಂಟರು ಅಸಹಾಯಕ ಎನ್‌ಎ ಅರ್ಜಿದಾರರ[...] ಗೋಳು ಹೊಯ್ದು ಕೊಳ್ಳುತ್ತಲೇ ಇರುತ್ತಾರೆ. 6-8 ತಿಂಗಳಾದರೂ ಇತ್ಯರ್ಥವಾಗದೇ ಹಾಗೇ ಸುಮ್ಮನ[...] ಬೋಂಗಾಳೆ ಟೇಬಲ್ ಮೇಲೆ ಸಾವಿರಾರು ಅರ್ಜಿಗಳು ಕೊಳೆಯುತ್ತಿವೆ. ಮಧ್ಯಮ ವರ್ಗದವರು ಮನೆ ಕಟ್ಟಿಕೊಳ್ಳಲು ಬಿನ್ ಶೇತ್ಕಿ ಅರ್ಜಿ ಹಾಕಿ ಕೆಲಸವಾಗದೇ ಎದೆಯೊಡೆದು ಸತ್ತಿದ್ದೂ ಇದೆ. ಎನ್‌ಎ ಆಗದೆ ಬ್ಯಾಂಕ್ ಸಾಲ ಕೊಡದು[...] ಎನ್‌ಎಗಾಗಿ ಏಜೆಂಟರಿಗೆ ಅರ್ಜಿದಾರರು, ಏಜೆಂಟರು ಬೋಂಗಾಳೆಗೆ, ಬೋಂಗಾಳೆ ಬಾಸ್‌ಗಳು ದೊರೆಗೆ ಲಂಚ ಕೊಟ್ಟು-ಕೊಟ್ಟೇ ಕಂಗಾಲಾಗಿಹೋಗಿದ್ದಾರೆ. ಎಚ್‌ಕ್ಯೂ[...] ಮಹಾಂತೇಶ್ ಮನಸ್ಸು ಮಾಡಿದರೆ ಸಿಆರ್‌ಝಡ್ (ಕರಾವ[...] ನಿಯಂತ್ರಣ ವಲಯ)ನಲ್ಲೂ ಎನ್‌ಎ ಮಾಡುತ್ತಾರೆ!!


'ಸಕಾಲ'ದಲ್ಲಿ ಎನ್‌ಎಗೆ ಕೊಟ್ಟ ಅರ್ಜಿಯನ್ನು ಬೋಂಗಾಳೆ ತಿರಸ್ಕರಿಸುತ್ತಾನೆ. ಒಮ್ಮೆ 'ಸಕಾಲ' ವಿಭಾಗದಲ್ಲಿ ಸ್ವೀಕರಿಸಿದ ಅರ್ಜಿಯನ್ನು ತಿರಸ್ಕರಿಸುವಂತೆಯೇ ಇಲ್ಲ. ಸಕಾಲ ಅರ್ಜಿ ಪಡೆಯುವಾಗಲೇ ಅಗತ್ಯ ದಾಖಲೆ ಜತೆಗೆ ಸ್ವೀಕರಿಸಬೇಕೆಂಬುದು ಸರ್ಕಾರದ ಜನಹಿತ ನಿಯಮ[...] ಆದರೆ ಸಕಾಲದಲ್ಲಿ ಬಂದ ಅರ್ಜಿಯಲ್ಲಿ ಸರಿಯಾದ ದಾಖಲೆ ಇಲ್ಲವೆಂದು ಎಚ್‌ಕ್ಯೂಎ-ಎಸ್‌ಡಿಸಿ ಗ್ಯಾಂಗು ಕಸದಬುಟ್ಟಿಗೆ ಬಡವರ ಎನ್‌ಎ ಅರ್ಜಿ ಎಸೆಯುತ್ತಿವೆ. ಒಂದು ಮಾಹಿತಿ ಪ್ರಕಾರ ಬೋಂಗಾಳೆ-ಮಹಾಂತೇಶ್ ಎದುರು ಎರಡು ಸಾವಿರ ಬಿನ್ ಶೇತ್ಕಿ ಪ್ರಸ್ತಾವನೆಗಳು ವಿಲೆಗಾಗಿ ಕಾದಿವೆ! ಸಕಾಲದಲ್ಲಿ ನಿಗದಿಸಿರುವ ದಾಖಲೆಗೆ ಹೊರತಾದ ಮಾಹಿತಿಯೂ ಕೇಳುವ ಎನ್‌ಎ ಮಾಫಿಯಾದ ಹಿಂ[...] ಹೇಳತೀರದು.

ಈ ಎನ್‌ಎ ಮಾಫಿಯಾದ ಕಿರುಕುಳ ತಾಳಲಾರದ ದೇಶಪಾಂಡೆಗೆ ದೂರು ಕೊಟ್ಟು ಬೇಸ್ತು ಬಿದ್ದವರೂ ಇದ್ದಾರೆ. ಈ ದೂರುದಾರರು ಅದೆಷ್ಟು ಮುಗ್ಧರೆಂದರೆ ಅಧಿಕಾರಿಗಳು ಭ್ರಷ್ಟರು, ದೇಶಪಾಂಡೆ ಸಾಹೇಬರು ಸಾಚಾ ಎಂದು ಭಾವಿಸಿದ್ದಾರೆ. ಎನ್‌ಎ ಆಗದೆ ನೊಂದವರು ಬಂದ[...] ದೇಶಪಾಂಡೆ ನಟ ಸಾರ್ವಭೌಮನಂತೆ ನಟಿಸಿ ಅವ[...] ಸಾಗ ಹಾಕುತ್ತಿದ್ದಾರೆ. "ನನ್ನ ಮಾತು ಯಾರೂ ಕೇಳಾಂಗಿಲ್ಲ[...] ಆ ಎಚ್‌ಕ್ಯೂಎ ಅದಾನಲ್ಲ ಅವ್ನ ಸಿದ್ದು ಹ್ಯಾಂಡು... ಆ[...] ಡಿಸಿ ಅದಾಳಲ್ಲ... ಆಕಿ ಮಾರ್ಗರೇಟ್ ಆಳ್ವಾ ಕಡೆಯೋಳು.[...] ನನ್ನ ಡೌನ್ ಮಾಡ್ಬೇಕು ಜಿಲ್ಲಾದೊಳ್ಗ ಅಂತಾನೇ... [...] ಇಬರ್ನ ಇಲ್ಲಿಟ್ಟಾರು...." ಎಂದು ಹುಬಾಹುಬ್ ಸುಳ[...] ಹೇಳಿ ಜನರ ಕಳಿಸುತ್ತಾರೆ.

ಇನ್ನಾದರೂ ಸಿಎಂ ಸಿದ್ದು ತಡುಗು ಮಂ[...] ದೋಷಪಾಂಡೆಗೆ ಅಂಕುಶ ಇಡಬಹುದಾ! ದೇಶಪಾಂಡೆಯ ಭ್ರಷ್ಟಾಚಾರ-ಭಂಡಾಟ-ಮಗನ ಸಂಸದನ ಮಾಡು[...] ಹಿಕಮತ್ತು-ಪಾರ್ಟಿ ಕಾರ್ಯಕರ್ತರ ಹಣಿದು ತನ್ನ ಕಳ್ಳ[...] ಕೊಳಕು ಶಿಷ್ಯರ ಸ್ವಾಹಾಕ್ಕೆ ಹಾದಿ ಸುಗಮ ಮಾಡಿಕೊಡು[...] ಕಾರ್ಯಾಚರಣೆಯಿಂದ ರೋಸತ್ತು ಹೋಗಿರುವ ಉತ್ತರ ಕನ್ನಡದ ಕಷ್ಟಕ್ಕೆ ಕೊನೆಯೆಂದು?

■ ವರದಿಗಾ[...]

ಮಂಡ್ಯ: ಮಿಮ್ಸ್ ವೈದ್ಯರುಗಳ ತಲೆದಂಡ


ಡಾ॥ ನರೇಂದ್ರಬಾಬು

ಒಂದು ಕಾಲಕ್ಕೆ ಅಕ್ರಮ ನೇಮಕಾತಿ, ಅಕ್ರಮ ಖರೀದಿ, ನಕಲಿ ಬೋಧನಾ ಪ್ರಮಾಣಪತ್ರದಿಂದ ರಾಜ್ಯದ ಗಮನ ಸೆಳೆದಿದ್ದ ಮಿಮ್ಸ್ ಅಲಿಯಾಸ್ ಮಂಡ್ಯ ವೈದ್ಯಕೀಯ ಕಾಲೇಜು ಒನ್ಸ್ ಎಗೇನ್ ಮತ್ತೆ ಸುದ್ದಿಯಲ್ಲಿದೆ. ಅಕ್ರಮ ಗಳಿಕೆ, ಆಸ್ತಿ ಖರೀದಿ, ಕರ್ತವ್ಯಲೋಪದ ಆರೋಪಗಳು ಈ ಬಾರಿ ಇಬ್ಬರು ವೈದ್ಯ ಮಹಾಶಯರಿಗೆ ಸಸ್ಪೆಂಡ್ ದಾರಿ ತೋರಿದ್ದರೆ ಮತ್ತೊಬ್ಬ ವೈದ್ಯನಿಗೆ ಡಿಸ್‌ಮಿಸ್ ದರ್ಶನ ಮಾಡಿಸಿದೆ.

ಆರೋಗ್ಯಸೇವೆ ಮರೆತು ಹಣ ಮಾಡುವುದಕ್ಕೆ ಅಡ್ಡ ದಾರಿ ಹಿಡಿದಿದ್ದ ಮಿಮ್ಸ್‌ನ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ವಿ.ಎಲ್. ನಂದೀಶ್ ಮೇಲೆ ದಾಳಿ ಮಾಡಿದ್ದ


ಮಂಡ್ಯ ಮೆಡಿಕಲ್ ಕಾಲೇಜು

ಲೋಕಾಯುಕ್ತ ಪೊಲೀಸರು ಅಕ್ರಮ ಗಳಿಕೆಯ ಅಪಾರ ಹಣ, ಆಭರಣ, ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರು. ಇದೇ ಕಾರಣಕ್ಕೆ ಡಾ. ನಂದೀಶ್‌ನನ್ನು ಬೀದರ್ ಮೆಡಿಕಲ್ ಕಾಲೇಜಿಗೆ ಎತ್ತಂಗಡಿ ಕೂಡಾ ಮಾಡಲಾಗಿತ್ತು. ಆದರೆ ಹುಲುಸಾದ ಮಂಡ್ಯ ಪೈರನ್ನು ಬಿಟ್ಟು ದೂರದ ಬೀದರ್‌ನತ್ತ ಆತ ಮುಖ ಮಾಡಿಲ್ಲ. ಬದಲಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ವರ್ಗಾವಣೆ ರದ್ದುಪಡಿಸಲು ಓಡಾಡಿದ್ದ. ಆದರೆ ಅಕ್ರಮ ಆಸ್ತಿ ಗಳಿಕೆ ಆರೋಪ ಕಂಡ ಹೈಕೋರ್ಟ್ ಡಾ. ನಂದೀಶ್‌ನ ಅರ್ಜಿ ತಿರಸ್ಕರಿಸಿ ಮುಖಕ್ಕೆ ಮಂಗಳಾರತಿ ಎತ್ತಿದೆ. ತೀರ್ಪು ಹೊರಬಿದ್ದು 15 ದಿನ ಕಳೆದರೂ ಡಾ.ನಂದೀಶ್ ಮಾತ್ರ ಮಂಡ್ಯದಲ್ಲೇ ಖಾಸಗಿ ನರ್ಸಿಂಗ್ ಹೋಮ್ ಸುತ್ತುವ ಕಾಯಕ ಮುಂದುವರೆಸಿದ್ದಾನೆ.

ಶೋಕಿ ಡಾಕ್ಟರ್ ನರೇಂದ್ರಬಾಬು ವಜಾ

ರಂಗೀಲಾ ಡಾಕ್ಟರ್ ಹೆಚ್.ವಿ.ನರೇಂದ್ರಬಾಬು ತನ್ನ ರಸಿಕತೆಯಿಂದಲೇ ಕುಖ್ಯಾತಿಗೆ ಬಂದವನು. ಮನೆಯಲ್ಲಿ ಮಡದಿಯಿದ್ದರೂ ಕಂಡೋರ ಹೆಣ್ಮಕ್ಕಳಿಗೆ ಜೊಲ್ಲು ಸುರಿಸುವ ಗಿರಾಕಿ. ಈ ಹಿಂದೆ ಮಯೂರಿ ಬ್ಯೂಟಿ ಪಾರ್ಲರ್‌ನ ಸುಕೋಮಲಳ ತೆಕ್ಕೆಯಲ್ಲಿ ವರ್ಷಗಟ್ಟಲೆ ಬಿದ್ದುಕೊಂಡಿದ್ದ ಈ ರಸಿಕ ಡಾಕ್ಟರ್ ಆಕೆಯ ಶಿಷ್ಯೆಯನ್ನೇ ಪಳಗಿಸಿ ಜುಮ್ಮ-ಚಕ್ಕ ಆಡಲು ಹೋಗಿ ಪೊಲೀಸರಿಗೆ ಸಿಕ್ಕಿಬಿದ್ದು ಕೇಸು ಜಡಿಸಿಕೊಂಡಿದ್ದ. ಮದುವೆಯಾಗುತ್ತೇನೆಂದು ನಂಬಿಸಿ [illegible]ಕೊಡುವ ಆವನ ಹುನ್ನಾರದ ಬಗ್ಗೆ ಗುಮಾನಿಯಿದ್ದ [illegible] ನರೇಂದ್ರಬಾಬು ಜೊತೆ ಕಳೆದಿದ್ದ ರಸಮಯ ಕ್ಷಣಗಳ [illegible]ಯೊಂದನ್ನು ಮಾಡಿಟ್ಟುಕೊಂಡು ಕೊನೆಗೆ ಪೊಲೀಸರಿಗೆ ದೂರು ನೀಡಿದ್ದಳು. ಲಕ್ಷಾಂತರ ದುಡ್ಡುಕೊಟ್ಟು ಕೇಸು [illegible] ಮಾಡಿಸಿಕೊಂಡಿದ್ದ ನರೇಂದ್ರ ಬಾಬುಗೆ ಇನ್ನಾದರೂ ಬುದ್ಧಿ ಬಂದಿಲ್ಲ, 55ರ ಇಳಿವಯಸ್ಸಿನಲ್ಲೂ ಕಣ್ಣಿಗೆ ಕೂಲಿಂಗ್ ಗ್ಲಾಸ್ ತಗುಲಿಸಿಕೊಂಡು ಬೀದಿಬೀದಿಗಳಲ್ಲಿ ಹರೆಯದ ಹುಡುಗರಂತೆ ಕುಣಿಯುತ್ತಾನೆ.

ಮಕ್ಕಳ ವೈದ್ಯ ವೃತ್ತಿ ಬಿಟ್ಟು ಚರ್ಮ ವೈದ್ಯ ವೃತ್ತಿಯಲ್ಲಿ [illegible] ಪಳಗಿದ್ದ ನರೇಂದ್ರಬಾಬು ಅದ್ಯಾರದ್ದೋ ಪ್ರಭಾವದಿಂದ ಮಿಮ್ಸ್‌ನಲ್ಲಿ ಮಕ್ಕಳ ವಿಭಾಗದಲ್ಲಿ [illegible] ಸೇವೆ ಮಾಡಿಕೊಂಡಿದ್ದ. 2012ರ ಮೇ 18ರಂದು ಮಂಡ್ಯ ತಾಲ್ಲೂಕಿನ ಎಲೆಚಾಕನಹಳ್ಳಿಗ್ರಾಮದ ಚಿಕ್ಕಪುಟ್ಟೇಗೌಡ ಹಾಗೂ ನಾಗಮ್ಮ ದಂಪತಿಯ ಒಂದೂವರೆ ವರ್ಷದ ಹೆಣ್ಮಗು ಹರ್ಷಿತಾಗೆ ಜ್ವರ ಬಂದಿದ್ದರಿಂದ ಜಿಲ್ಲಾಸ್ಪತ್ರೆಗೆ ಕರೆತಂದಿದ್ದರು. ಹರ್ಷಿತಾಳ ಎಡಗೈಗೆ ಮೊದಲು ಟ್ರಾಕ್ಸಿಮ್ ಇಂಜೆಕ್ಷನ್ ನೀಡಿದ ನರೇಂದ್ರಬಾಬು ಮರುದಿನ ಬಲಗೈಗೆ ಮತ್ತೊಂದು ಇಂಜೆಕ್ಷನ್ ನೀಡಿದ್ದ. ಇಂಜೆಕ್ಷನ್ ನೀಡಿದ ಕೆಲ ಸಮಯದಲ್ಲೇ ಹರ್ಷಿತಾಳ ಬಲಗೈ ಊದಿಕೊಂಡಿದ್ದಲ್ಲದೆ ಕಪ್ಪು ಬಣ್ಣಕ್ಕೆ ತಿರುಗಿತ್ತು. ನರೇಂದ್ರಬಾಬು ನೀಡಿದ ಆ ಒಂದೇ ಒಂದು ಇಂಜೆಕ್ಷನ್‌ನಿಂದಾಗಿ ಮಗುವಿನ ಬಲಗೈಗೆ ಗ್ಯಾಂಗ್ರಿನ್ ಆವರಿಸಿತು. ಕೊನೆಗೆ ಬೆಂಗಳೂರಿನ ಸೇಂಟ್‌ಜಾನ್ ಆಸ್ಪತ್ರೆಗೆ ಮಗುವನ್ನು ಕರೆತಂದು ಬಲಗೈ ಕತ್ತರಿಸಿ ಹರ್ಷಿತಾಳ ಜೀವ ಉಳಿಸಬೇಕಾಯಿತು. ಇದು ವೈದ್ಯಸಿಂಹ ನರೇಂದ್ರಬಾಬುವಿನ ವೃತ್ತಿಪೌರುಷ!

ಘಟನೆಗೆ ನರೇಂದ್ರ ಬಾಬುವಿನ ನಿರ್ಲಕ್ಷ್ಯವೇ ಕಾರಣ ಎಂಬ ನಿರ್ಧಾರಕ್ಕೆ ಬಂದಿದ್ದ ಕರ್ನಾಟಕ ವೈದ್ಯಕೀಯ ಪರಿಷತ್ 2013ರ ಫೆ.28ರಂದು ಆದೇಶವೊಂದನ್ನು ಹೊರಡಿಸಿ ಯಾವುದೇ ಆರ್ಥಿಕ ಸೌಲಭ್ಯ ನೀಡದೆ ನರೇಂದ್ರಬಾಬುವನ್ನು ಕೆಲಸದಿಂದ ತೆಗೆದುಹಾಕುವಂತೆ ಸೂಚಿಸಿತ್ತು. ಆದರೆ ಅದು ಇದುವರೆವಿಗೂ ಕಾರ್ಯರೂಪಕ್ಕೆ ಬಂದಿರಲಿಲ್ಲ. ಮೊನ್ನೆ ಅಂದರೆ 2014ರ ಜ.30ರಂದು ಮಿಮ್ಸ್ ನಿರ್ದೇಶಕಿ ಡಾ. ಪುಷ್ಪ ಸರ್ಕಾರ್, ಡಾ.ನರೇಂದ್ರಭಾಬು ಹಾಗೂ ನರ್ಸ್ ಸಂಯುಕ್ತರನ್ನು ವಜಾ ಮಾಡಿ ಹೊರಗಟ್ಟಿದ್ದಾರೆ. ಅಯೋಗ್ಯನೊಬ್ಬನನ್ನು ಹೊರಗಟ್ಟಲು ಒಂದು ಮುಗ್ಧ ಮಗುವಿನ ಕೈ ತುಂಡಾಗುವವರೆಗೂ ಕಾಯಬೇಕಾಯ್ತಲ್ಲ, ಆ ಮಗುವಿನ ಭವಿಷ್ಯಕ್ಕೆ ಯಾರು ಹೊಣೆ?

ಡಾ.ಯೋಗೀಂದ್ರ ಕುಮಾರ್ ಅಮಾನತು

ಕರ್ತವ್ಯಲೋಪದ ಹಿನ್ನೆಲೆಯಲ್ಲಿ ಮಿಮ್ಸ್‌ನ ತುರ್ತು ವಿಭಾಗದ ವೈದ್ಯಾಧಿಕಾರಿ ಡಾ.ಯೋಗೀಂದ್ರ ಕುಮಾರ್ ಕೂಡಾ ಸಸ್ಪೆಂಡ್ ರುಚಿ ಕಾಣುವಂತಾಗಿದೆ. ಆದರೆ ಯೋಗೀಂದ್ರ ಕುಮಾರ್‌ನದು 'ಸುಮ್ಮನಿರಲಾರದೆ ಅದೇನನ್ನೊ ಅದೆಲ್ಲಿಗೊ ಬಿಟ್ಟುಕೊಂಡಂತೆ' ಪರಿಸ್ಥಿತಿ. ಯಾಕೆಂದರೆ ತನ್ನ ಕೊಲೆಗಡುಕ ಸ್ನೇಹಿತ ಡಾ.ರಾಘವೇಂದ್ರ ಎಂಬ ಪತ್ನಿಪೀಡಕನನ್ನು ಬಚಾವು ಮಾಡಲು ಹೋಗಿ ಸಸ್ಪೆಂಡ್ ಆಗಿದ್ದಾನೆ.



ಯೋಗೀಂದ್ರ ಕುಮಾರ್ ಗೆಳೆಯ ಕಲ್ಲಹಳ್ಳಿಯ ಡಾ.ರಾಘವೇಂದ್ರ ಬೆಂಗಳೂರಿನ ಹಾಪ್‌ಕಾಮ್ಸ್‌ನ ಉನ್ನತ ಅಧಿಕಾರಿ ದೇವರಾಜು ಎಂಬುವರ ಮಗಳನ್ನು ಮದುವೆಯಾಗಿದ್ದ. ಕೆಜಿಗಟ್ಟಲೆ ಚಿನ್ನಾಭರಣ, ಕಾರು, ಮನೆ ಪಡೆದಿದ್ದರೂ ದುಡ್ಡಿನ ದುರಾಸೆಯ ಡಾ.ರಾಘವೇಂದ್ರ ಮತ್ತಷ್ಟು ವರದಕ್ಷಿಣೆ ತರುವಂತೆ ತೇಜಸ್ವಿನಿಗೆ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದ. ತೇಜಸ್ವಿನಿ ಸತ್ತಿರುವುದು ಖಾತ್ರಿಯಾಗುತ್ತಿದ್ದಂತೆಯೇ ವಿಕ್ರಂ ಆಸ್ಪತ್ರೆಯಲ್ಲಿ ಶವ ಇಟ್ಟು ಪರಾರಿಯಾಗಿದ್ದ. ಗೆಳೆಯನನ್ನು ಈ ಕೊಲೆ ಕೇಸಿನಿಂದ ಬಚಾವು ಮಾಡಲು ಮಿಮ್ಸ್‌ನಲ್ಲಿದ್ದ ತನ್ನ ಕರ್ತವ್ಯಬಿಟ್ಟು ವಿಕ್ರಂ ಆಸ್ಪತ್ರೆಗೆ ಭೇಟಿ ನೀಡಿದ್ದ ಯೋಗೀಂದ್ರ ಕುಮಾರ್ ಇದೊಂದು ಆತ್ಮಹತ್ಯೆ ಎಂಬ ಸುಳ್ಳು ಹೇಳಿದ್ದ. ಆಗಲೇ ತೇಜಸ್ವಿನಿ ಬಂಧುಗಳು ಈತನನ್ನು ಅಟ್ಟಾಡಿಸಿ ಬಡಿದಿದ್ದರು.

ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬ ಸ್ನೇಹಿತರಾದ ದೇವರಾಜು ಮಗಳು ತೇಜಸ್ವಿನಿಯ ಶವ ನೋಡಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರೇವಣ್ಣ ಸೇರಿದಂತೆ ಘಟಾನುಘಟಿಗಳೇ ಬಂದಿದ್ದರಿಂದ ಪ್ರಕರಣವನ್ನು ಕೊಂಚ ಸೀರಿಯಸ್ಸಾಗಿ ತೆಗೆದುಕೊಂಡ ಜಿಲ್ಲಾಧಿಕಾರಿ ಕೃಷ್ಣಯ್ಯ ಹಾಗೂ ತಹಸೀಲ್ದಾರ್ ಮಮತಾ, ಸರ್ಕಾರಿ ಆಸ್ಪತ್ರೆಯ ವೈದ್ಯ ಯೋಗೀಂದ್ರಕುಮಾರ್ ಖಾಸಗಿ ವಿಕ್ರಂ ಆಸ್ಪತ್ರೆಗೆ ಹೋಗಿದ್ದೇಕೆ ಎಂಬ ಅಂಶವನ್ನೂ ತನಿಖೆಗೊಳಪಡಿಸಿದ್ದರು. ತನ್ನ ಸರ್ಕಾರಿ ವೃತ್ತಿಯಿಂದ ಅಧಿಕೃತ ರಜಾ ಪಡೆಯದೆ ಖಾಸಗಿ ಆಸ್ಪತ್ರೆಗೆ ಹೋಗಿ ಆರೋಪಿಯೊಬ್ಬನನ್ನು ಬಚಾವು ಮಾಡಲು ಸುಳ್ಳು ಹೇಳಿದ ಡಾ.ಯೋಗೀಂದ್ರಕುಮಾರ್‌ನನ್ನು ಅಮಾನತ್ತುಗೊಳಿಸಿ 15 ದಿನಗಳ ಹಿಂದಷ್ಟೇ ಆದೇಶ ಹೊರಡಿಸಲಾಗಿದೆ.

ಅಂದಹಾಗೆ, ಎರಡು ವರ್ಷಗಳ ಹಿಂದೆ ಅಪಘಾತದಲ್ಲಿ ಗಾಯಗೊಂಡ ಆಯುರ್ವೇದ ವೈದ್ಯ ಅಶ್ವಕ್ ಅಹ್ಮದ್ ಎಂಬುವವರಿಗೆ ಸರಿಯಾದ ಅವಧಿಯಲ್ಲಿ ಚಿಕಿತ್ಸೆ ಸಿಗದೆ ಸಾವನ್ನಪ್ಪಿದ್ದ ಪ್ರಕರಣದಲ್ಲೂ ಡಾ.ಯೋಗೀಂದ್ರಕುಮಾರ್ ಮೇಲೆ ನಿರ್ಲಕ್ಷ್ಯ ತೋರಿದ ಆರೋಪ ಹೊರಿಸಿ ಕಡ್ಡಾಯ ರಜೆ ನೀಡಿ ಕಳುಹಿಸಲಾಗಿತ್ತು. ಆಯುರ್ವೇದ ವೈದ್ಯ ಅಶ್ವಕ್ ಅಹ್ಮದ್‌ಗೆ ಅಪಘಾತವಾದ ಕೂಡಲೇ ಅವರನ್ನು ಜಿಲ್ಲಾಸ್ಪತ್ರೆಗೆ ಕರೆತರಲಾಗಿತ್ತು. ಅಂದು ಶಸ್ತ್ರಚಿಕಿತ್ಸಾ ವಿಭಾಗದಲ್ಲಿರಬೇಕಾದ ಡಾ.ಯೋಗೀಂದ್ರಕುಮಾರ್, ಸರ್ಜರಿ ವಿಭಾಗದ ಡಾ.ಬಾಲಕೃಷ್ಣ ಮೂಳೆ ಮತ್ತು ಕೀಲು ವಿಭಾಗದ ಡಾ.ಶಿವಕುಮಾರ್, ಅನಸ್ತೇಷಿಯಾ ವೈದ್ಯ ಸೇರಿದಂತೆ ಯಾರೊಬ್ಬರೂ ಇರಲಿಲ್ಲ. ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ಪ್ರಮುಖವಾದ ಆಪರೇಷನ್ ಇದ್ದು ಅದರಲ್ಲಿ ಎಲ್ಲರೂ ಭಾಗಿಯಾಗಿದ್ದ ಕಾರಣ ಡಾ.ಅಶ್ವಕ್ ಅಹ್ಮದ್‌ರನ್ನು ನೋಡಲು ಆಗಲಿಲ್ಲ ಎಂದು ಸುಳ್ಳು ಹೇಳಿದ್ದರು. ಆದರೆ ಮಾಹಿತಿ ಪ್ರಕಾರ ಅಂದು ಇವರಲ್ಲಿ ಯಾರೊಬ್ಬ ಆಸ್ಪತ್ರೆಯಲ್ಲಿರಲೇ ಇಲ್ಲ. ಕೊನೆಗೆ ಮೈಸೂರಿಗೆ ಕರೆದುಕೊಂಡು ಹೋಗುವಾಗ ಅಶ್ವಕ್ ಅಹ್ಮದ್ ದಾರಿ ಮಧ್ಯದಲ್ಲೇ ಕೊನೆಯುಸಿರೆಳೆದಿದ್ದರು. ಜಿಲ್ಲಾಸ್ಪತ್ರೆ ವೈದ್ಯರ ಕರ್ತವ್ಯಲೋಪವೇ ಇದಕ್ಕೆಲ್ಲ ಕಾರಣವೆಂದು ಬೃಹತ್ ಪ್ರತಿಭಟನೆಗಳು ನಡೆದಿದ್ದರಿಂದ ಅಂದು ಇರಬೇಕಿದ್ದ ಎಲ್ಲ ವೈದ್ಯರನ್ನೂ ಕಡ್ಡಾಯ ರಜೆ ಮೇಲೆ ಕಳುಹಿಸಲಾಗಿತ್ತು.


ಡಾ॥ ನಂದೀಶ್

ಡಾ.ಅಶ್ವಕ್ ಅಹ್ಮದ್ ಸಾವಿನ ತನಿಖೆಗೆಂದು ಮೈಸೂರು ಮೆಡಿಕಲ್ ಕಾಲೇಜಿನ ಮೂಳೆ ಮತ್ತು ಕೀಲು ವಿಭಾಗದ ಮುಖ್ಯಸ್ಥ ಡಾ.ಸಾಗರ್ ಅವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಆಗ ಇದ್ದ ವೈದ್ಯಕೀಯ ಶಿಕ್ಷಣ ಸಚಿವ ರಾಮದಾಸ್ ಕರ್ತವ್ಯ ಲೋಪವೆಸಗಿದ ವೈದ್ಯರ ರಕ್ಷಣೆಗೆ ನಿಂತುಬಿಟ್ಟಿದ್ದರಿಂದ ಘಟನೆಯ ದಿನ ಎಲ್ಲ ವೈದ್ಯರೂ ಮುಖ್ಯ ಶಸ್ತ್ರ ಚಿಕಿತ್ಸೆಯೊಂದರಲ್ಲಿ ಪಾಲ್ಗೊಂಡಿದ್ದರೆಂದು ತಿಪ್ಪೆ ಸಾರಿಸಿ ವರದಿಯನ್ನು ನೀಡಿದ್ದರು. ಆದರೆ ಸರ್ಕಾರಿ ಆಸ್ಪತ್ರೆಯ 10 ಲಾಗ್ ಬುಕ್ ಪ್ರಕಾರ ಅಂದು ಯಾವುದೇ ಮುಖ್ಯ ಆಪರೇಷನ್ ನಡೆದಿರಲಿಲ್ಲ. ರಾಮದಾಸ್ ಅಪ್ಪಣೆಯ ಮೇರೆಗೆ ಕಳಂಕಿತ ವೈದ್ಯರೆಲ್ಲರಿಗೂ ಕ್ಲೀನ್‌ಚಿಟ್ ನೀಡಲಾಗಿತ್ತು.



ವೈದ್ಯರ ನಿರ್ಲಕ್ಷ್ಯಕ್ಕೊಳಗಾಗಿ ಕೈ ಕಳೆದುಕೊಂಡ ಹರ್ಷಿತಾ ತಾಯಿ ನಾಗಮ್ಮರೊಂದಿಗೆ

ಲಂಚಕ್ಕೆ ಕೈಚಾಚುವ ಡಾ.ರಾಜಶೇಖರ್

ಮಿಮ್ಸ್ ಶಸ್ತ್ರ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಕೆ.ಎ. ರಾಜಶೇಖರ್ ಸಂಬಳಕ್ಕಿಂತಲೂ ಲಂಚಕ್ಕೆ ಕೈ ಚಾಚುವ ಆಸಾಮಿ. ಶ್ರೀರಂಗಪಟ್ಟಣದ ದೊಡ್ಡಪಾಳ್ಯದ ಅಡುಗೆ ಸಹಾಯಕಿ ಮಂಜುಳಾ ಎಂಬಾಕೆ ಸುಟ್ಟಗಾಯಗಳೊಂದಿಗೆ ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ಲಂಚ ನೀಡದಿದ್ದರಿಂದಲೋ ಏನೊ ಸೂಕ್ತ ಚಿಕಿತ್ಸೆ ನೀಡಲು ನಿರಾಕರಿಸಿದ್ದ. ಈ ಬಗ್ಗೆ ಸಿಐಟಿಯು ಹಾಗೂ ಅಕ್ಷರ ದಾಸೋಹ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಡಾ. ರಾಜಶೇಖರ್‌ಗೆ ಮುಖದಲ್ಲಿ ನೀರಿಳಿಸಿದ್ದರು. ಅಲ್ಲದೆ ಮಾನವ ಹಕ್ಕುಗಳ ಆಯೋಗಕ್ಕೆ ದೂರನ್ನೂ ನೀಡಿದ್ದರು. ಈ ಕುರಿತು ವರದಿ ನೀಡುವಂತೆ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಯಾಗಿದ್ದ ಡಾ.ರಶ್ಮಿಯವರನ್ನು ಮಾನವಹಕ್ಕುಗಳ ಆಯೋಗ ಕೇಳಿತ್ತು. ಡಾ.ರಾಜಶೇಖರ್ ಲಂಚವಿಲ್ಲದೆ ಯಾವ ಕೆಲಸ ಮಾಡುವುದಿಲ್ಲ ಎಂಬ 2-3 ಆರೋಪಗಳು ಕೇಳಿ ಕಂಡುಬಂದಿದ್ದರಿಂದ ಅವರನ್ನು ಅಮಾನತುಗೊಳಿಸುವಂತೆ ತನಿಖೆಯ ನಂತರ ಮಿಮ್ಸ್ ನಿರ್ದೇಶಕಿ ಡಾ.ಪುಷ್ಪಸರ್ಕಾರ್‌ಗೆ ಶಿಫಾರಸ್ಸು ಮಾಡಲಾಗಿತ್ತು. ಇದೀಗ ಆತನೂ ಅಮಾನತುಗೊಂಡಿದ್ದಾನೆ.

ಫಾರ್ಮಾ ಕಾಲೇಜು ವಿಭಾಗದ ಸಹ ಪ್ರಾಧ್ಯಾಪಕ ಡಾ.ಶಶಿಕುಮಾರ್, ಉಪನ್ಯಾಸಕಿ ವಿದ್ಯಾ ಎಂಬಾಕೆಯ ಮಾವ ಮಳವಳ್ಳಿಯಲ್ಲಿ ನಡೆಸುವ ಫಾರ್ಮಸಿ ಕಾಲೇಜಿನಲ್ಲಿ ಕಾಪಿ ಹೊಡೆಸುವುದು ಸೇರಿದಂತೆ ಇತರ ವಿಷಯಗಳನ್ನು ಸೇರಿಸಿ ಸರ್ಕಾರದ ಗಮನಕ್ಕೆ ತನ್ನ ಕಂಪ್ಯೂಟರ್‌ನಿಂದ ಇ-ಮೇಲ್ ಮಾಡಿದ್ದ. ಈ ಬಗ್ಗೆ ವಿದ್ಯಾ ಸೈಬರ್ ಕ್ರೈಂ ಅಡಿ ಪ್ರಕರಣ ದಾಖಲಿಸಿದ್ದರು. ಬೆಂಗಳೂರಿನ ಕಲಾಸಿಪಾಳ್ಯ ಪೊಲೀಸರು ಶಶಿಕುಮಾರ್‌ನನ್ನು ಅರೆಸ್ಟ್ ಮಾಡಿದ್ದರು. ಈಗ ಆತ ಜಾಮೀನಿನ ಮೇಲೆ ಹೊರಬಂದಿದ್ದಾನೆ.


■ ಮಂಡ್ಯ ನಾಗೇಶ್

ಪ್ರಶ್ನಿಸುವ ನೈತಿಕತೆ ನಿರ್ದೇಶಕಿಗೇ ಇಲ್ಲ!

ಸರ್ಕಾರ ಕೊಡುವ ಲಕ್ಷಾಂತರ ದುಡ್ಡನ್ನು ಜೇಬಿಗಿಳಿಸುವ ಮಿಮ್ಸ್ ವೈದ್ಯರು ಸರ್ಕಾರದ ನಿಯಮಾವಳಿ ಹೆಚ್‌ಎಫ್ ಡಬ್ಲ್ಯೂ-21 ಎಂಎಂಪಿ 85- ಬೆಂಗಳೂರು ಪ್ರಕಾರ ಒಂದೇ ಒಂದು ಖಾಸಗಿ ನರ್ಸಿಂಗ್ ಹೋಂನಲ್ಲಿ ಕರ್ತವ್ಯ ನಿರ್ವಹಿಸಬಹುದು. ಇನ್ನು ನಾನ್ ಪ್ರಾಕ್ಟೀಸ್ ಅಲೋಯೆನ್ಸ್ ಪಡೆಯುವ ವೈದ್ಯರಂತೂ ಖಾಸಗಿ ಕ್ಲಿನಿಕ್ ತೆರೆಯುವಂತೆಯೇ ಇಲ್ಲ. ಇತರೆ ಖಾಸಗಿ ನರ್ಸಿಂಗ್ ಹೋಂಗಳಲ್ಲೂ ಕರ್ತವ್ಯ ಮಾಡುವಂತಿಲ್ಲ. ಆದರೆ ಜಿಲ್ಲಾಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ್, ವಿದ್ಯಾಪ್ರಕಾಶ್, ನಂದೀಶ್ ಒಂದಲ್ಲ- ಎರಡಲ್ಲ ಹಲವಾರು ಖಾಸಗಿ ನರ್ಸಿಂಗ್ ಹೋಂಗಳಿಗೆ ಭೇಟಿ ಕೊಡುತ್ತಾರೆ. ಇದು ಗೊತ್ತಿದ್ದರೂ ಮಿಮ್ಸ್ ನಿರ್ದೇಶಕಿ ಡಾ.ಪುಷ್ಪಸರ್ಕಾರ್ ಕಂಡೂಕಾಣದಂತೆ ಸುಮ್ಮನಿದ್ದಾರೆ. ಸರ್ಕಾರದ ನಿಯಮಾವಳಿ ಪ್ರಕಾರ ಇದು ತಪ್ಪೆಂದು ಹೇಳುವ ಧಮ್ ಡಾ.ಪುಷ್ಪಾಸರ್ಕಾರ್‌ಗೆ ಇಲ್ಲ. ಇವರ ಬಲಗೈ ಭಂಟನಂತೆ ಕೆಲಸ ನಿರ್ವಹಿಸುವ ಚರ್ಮ ವಿಭಾಗದ ಮುಖ್ಯಸ್ಥ ಡಾ.ಎಂ.ಆರ್.ಹರೀಶ್, ಸಾಂಜೋ ಆಸ್ಪತ್ರೆ, ವಿ.ವಿ.ರಸ್ತೆಯ ನಗರಸಭೆ ಬಿಲ್ಡಿಂಗ್‌ನಲ್ಲಿರುವ ಶ್ರೀನಿವಾಸ್ ಹಾಲಿ ಕ್ಲಿನಿಕ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಅಲ್ಲದೆ ಪ್ರತಿ ಭಾನುವಾರ ಕೆ.ಆರ್.ನಗರಕ್ಕೆ ಭೇಟಿ ಕೊಡುವ ಡಾ.ಹರೀಶ್ ಮೈಸೂರಿನ ಆಯುರ್ವೇದ ಕಾಲೇಜಿನ ಹಿಂಭಾಗದಲ್ಲಿರುವ ಪ್ರೈವೇಟ್ ಕ್ಲಿನಿಕ್‌ಗೂ ಭೇಟಿ ಕೊಡುವುದು ರಹಸ್ಯವೇನೂ ಅಲ್ಲ. ಇದು ಗೊತ್ತಿದ್ದರೂ ತನ್ನ ಶಿಷ್ಯನೆಂಬ ಕಾರಣಕ್ಕೆ ಡಾ.ಪುಷ್ಪಸರ್ಕಾರ್ ಸುಮ್ಮನಿದ್ದಾರೆ. ತನ್ನ ಆಪ್ತರ ಅಕ್ರಮಗಳನ್ನು ಮುಚ್ಚಿಸುವ ಪುಷ್ಪಸರ್ಕಾರ್ ಇತರ ವೈದ್ಯರ ಮೇಲೆ ಇನ್ನೇನು ಕ್ರಮ ಕೈಗೊಂಡಾರು?


ಡಾ.ಪುಷ್ಪಸರ್ಕಾರ್

ಹಸನ್ ಮನ್ಸೂರ್: ಮಾನವತೆಯ ಮತ್ತೊಂದು ಅರ್ಥ



ಖ್ಯಾತ ಮಾನವ ಹಕ್ಕು ಹೋರಾಟಗಾರ ಪ್ರೊ. ಹಸನ್ ಮನ್ಸೂರ್ ಇನ್ನಿಲ್ಲವಾಗಿದ್ದಾರೆ. ಪತ್ನಿ ಹಸನತ್ ಮನ್ಸೂರ್ ಜೊತೆಗೂಡಿ ಎಂಟು ದಶಕಗಳ ತಮ್ಮ ಬದುಕಿನ ಬಹುಪಾಲು ಅವಧಿಯನ್ನು ಅಲ್ಪಸಂಖ್ಯಾತರು, ಮಹಿಳೆಯರು, ದಲಿತರು, ಆದಿವಾಸಿಗಳು, ಕೊಳಚೆ ನಿವಾಸಿಗಳ ಪರ ಹೋರಾಡುವುದಕ್ಕಾಗಿಯೇ ಮೀಸಲಿಟ್ಟ ಚೇತನ ಅವರದ್ದು. 'ನಷ್ಟ' ಎಂಬ ಎರಡೂವರೆ ಅಕ್ಷರದ ಪದವೊಂದು ಅವರ ಅಗಲಿಕೆಯನ್ನು ಸರಿದೂಗಿಸುವಂತದ್ದಲ್ಲ ಎಂಬುದು ಅವರನ್ನು ಬಲ್ಲ ಎಲ್ಲರಿಗೂ ತಿಳಿದಿರುವಂತದ್ದೇ. ಸಮಾಜಕ್ಕೆ ಅವರ ಅಗತ್ಯ ಅಷ್ಟು ಅನಿವಾರ್ಯವಾಗಿತ್ತು. ಆದರೂ ತಮ್ಮ ವ್ಯಕ್ತಿತ್ವದ ಛಾಪನ್ನು ನಮ್ಮೊಟ್ಟಿಗೆ ಉಳಿಸಿ ಭೌತಿಕವಾಗಿ ಅವರು ಎದ್ದುಹೋಗಿದ್ದಾರೆ. ಈ ಸಂದರ್ಭದಲ್ಲಿ ಸುಮಾರು ನಲವತ್ತು ವರ್ಷಗಳ ಕಾಲ ಅವರೊಂದಿಗೆ ಮಾನವ ಹಕ್ಕು ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ, ಅವರ ಅತ್ಯಾಪ್ತ ಮಿತ್ರರಲ್ಲಿ ಒಬ್ಬರಾದ ನಗರಿ ಬಾಬಯ್ಯನವರು 'ಪತ್ರಿಕೆ'ಯೊಂದಿಗೆ ತಮ್ಮೀರ್ವರ ಒಡನಾಟದ ಮೆಲುಕುಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ...

****

ಹಸನ್ ಮನ್ಸೂರ್ ಬಗ್ಗೆ ಏನೆಲ್ಲವನ್ನು ಹೇಳಬಹುದೊ ಅದೆಲ್ಲವನ್ನು ಹೇಳುವುದಕ್ಕಿಂತ ಮೊದಲು ನಾನು ಒಂದು ಮಾತು ಹೇಳಬಯಸುತ್ತೇನೆ. **`He is one of the finest persons I have met'.** ಈ ಮಾತು ಕೇವಲ ಹಸನ್‌ರ ವ್ಯಕ್ತಿತ್ವವನ್ನು ಮಾತ್ರ ಬಿಂಬಿಸುವುದಿಲ್ಲ, ಜೊತೆಗೆ ನನ್ನ-ಅವರ ಬಾಂಧವ್ಯವನ್ನೂ ಬಿಚ್ಚಿಡುತ್ತದೆ. 1964-65ರಲ್ಲಿ ನಾನು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬಿ.ಎ ವಿದ್ಯಾರ್ಥಿಯಾಗಿದ್ದಾಗ ಹಸನತ್ ಮನ್ಸೂರ್ ಮತ್ತು ಹಸನ್ ಮನ್ಸೂರ್ ಇಬ್ಬರೂ ನನಗೆ ಇಂಗ್ಲಿಷ್ ಟೀಚರ್‌ಗಳಾಗಿದ್ದರು. ಅದೇ ನನ್ನ ಅವರ ಮೊದಲ ಪರಿಚಯ. ಈ ನಮ್ಮ ಗುರು-ಶಿಷ್ಯ ಅವಧಿ ದೀರ್ಘವಾದದ್ದೇನೂ ಅಲ್ಲ ಗಂಡ-ಹೆಂಡತಿ ಒಟ್ಟಾರೆಯಾಗಿ ನನಗೆ ಒಂದು ತಿಂಗಳು ಪಾಠ ಮಾಡಿದ್ದರೆ ಹೆಚ್ಚು. ಆದರೂ ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾಗಿದ್ದ ನನಗೆ ಅವರ ಆಂಗ್ಲ ಉಚ್ಚಾರಣೆ, ಮಾತುಗಾರಿಕೆಯ ಶೈಲಿಗಳು ತುಂಬಾ ಇಷ್ಟವಾಗಿದ್ದವು. ಅಲ್ಲಿಂದಾಚೆಗೆ ಮೂರ್ನಾಲ್ಕು ವರ್ಷ ನಮ್ಮ ನಡುವಿನ ಸಂಪರ್ಕಕ್ಕೆ ಅಲ್ಪವಿರಾಮ ಬಿದ್ದಿತ್ತು.

ಎಂ.ಎ ಓದನ್ನು ಪೂರೈಸಿ ನಾನು ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಇಂಗ್ಲಿಷ್ ಬೋಧಕನಾಗಿ ಸೇರಿಕೊಂಡ ನಂತರ ಹಸನ್ ಜೊತೆಗಿನ ನನ್ನ ಒಡನಾಟ ಮತ್ತೆ ಶುರುವಾಯಿತು. ಅಷ್ಟರಲ್ಲಾಗಲೆ ಅವರು ಪಕ್ಕದ ಯುವಿಸಿಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಗ್ಲಿಷ್ ಪಾಠ ಹೇಳುತ್ತಿದ್ದರು. ಮೊದಲಿದ್ದ ಪರಿಚಯ, 'ಇಷ್ಟ'ಗಳು ನಮ್ಮನ್ನು ಬಹುಬೇಗ ಆತ್ಮೀಯರನ್ನಾಗಿಸಿದವು. ಅವರ ಆಲೋಚನೆಗಳು, ಚಿಂತನೆಗಳು, ಮಾನವೀಯ ಮೌಲ್ಯಗಳು ನಮ್ಮನ್ನು ಹತ್ತಿರಕ್ಕೆ ತಂದವು ಎಂಬುದು ಎಷ್ಟು ಸತ್ಯವೋ ನಮ್ಮಿಬ್ಬರಲ್ಲೂ ಇದ್ದ ಎರಡು 'ಕಾಮನ್ ಫ್ಯಾಕ್ಟರ್'ಗಳು ಈ ಆತ್ಮೀಯತೆಗೆ ಕಾರಣವಾಗಿರಬಹುದೆನ್ನುವುದು ನನ್ನ ಅನಿಸಿಕೆ. ಮೊದಲನೆಯದು, ತೆಲುಗು ಇಬ್ಬರಿಗೂ ಕಾಮನ್ ಭಾಷೆಯಾಗಿದ್ದದ್ದು. ಅವರು ಇಂಗ್ಲಿಷ್ ಮೇಷ್ಟ್ರಾಗಿದ್ದರೂ ತೆಲುಗು ಸಾಹಿತ್ಯ ಸಂಗೀತಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದವರು. ನಾನು ತೆಲುಗು ಸಾಹಿತ್ಯದ ಬಗ್ಗೆ ಮಾತನಾಡುವುದನ್ನು ತುಂಬಾ ಇಷ್ಟಪಟ್ಟು ಕೇಳಿಸಿಕೊಳ್ಳುತ್ತಿದ್ದರು. ಅನೇಕ ಬಾರಿ ನಾನೆ ಅವರಿಗೆ ತೆಲುಗು ಗೀತೆಗಳ ಕ್ಯಾಸೆಟ್‌ಗಳನ್ನೂ ನೀಡಿದ್ದೆ. ಇನ್ನು ಎರಡನೆಯ ಕಾರಣವೆಂದರೆ, ನಾವಿಬ್ಬರೂ ಮುಸ್ಲಿಂ ಸಂಗಾತಿಗಳನ್ನು ಮದುವೆಯಾದದ್ದು!

ಅವರು ಹಸನತ್ ಮನ್ಸೂರ್ ಅವರನ್ನು ಪ್ರೀತಿಸಿ ಮದುವೆಯಾಗಿ ಮುಸ್ಲಿಂಗೆ ಮತಾಂತರವಾಗಿದ್ದರ ಕುರಿತು ವಿವಿ ಅಂಗಳದಲ್ಲಿ ಒಂಥರಾ ಮಾತಾಡಿಕೊಳ್ಳುತ್ತಿದ್ದರು. ಹಾಗಂತ ಅದನ್ನೇನು ಮನ್ಸೂರ್ ಹಸನ್‌ರು ಗಂಭೀರವಾಗಿ ತೆಗೆದುಕೊಂಡವರಲ್ಲ. ಅಪಾರ Sense of Humourನ ಮನುಷ್ಯ ಅವರು. ಅಂತಹ ಕೊಂಕು ಮಾತುಗಳು ಕಿವಿಗೆ ಬಿದ್ದರೂ ಅಂತವರ ಬಗ್ಗೆ ಕನಿಕರದ ಕಮೆಂಟ್ ಮಾಡಿ ಸಮಸ್ಯೆಯನ್ನು ತಿಳಿಯಾಗಿಸಿ ಬಿಡುತ್ತಿದ್ದರು. ಅಂತಹ ಪರಿಸರದಲ್ಲಿ ಸಮಾನ ಮನಸ್ಸಿನ ನನ್ನ ಒಡನಾಟ ಅವರಿಗೆ ಇಷ್ಟವಾಗಲು ಅದೂ ಒಂದು ಕಾರಣವಾಗಿರಬಹುದು. 1971-72ರ ವೇಳೆಗಾಗಲೆ ನಮ್ಮ ಸ್ನೇಹ ಕೇವಲ ವೈಯಕ್ತಿಕ ವ್ಯಾಪ್ತಿಗಷ್ಟೆ ಸೀಮಿತವಾಗದೆ ನಾವಿಬ್ಬರೂ ನಮ್ಮ ನಮ್ಮ ಕುಟುಂಬಗಳಿಗೂ ಉತ್ತಮ ಸ್ನೇಹಿತರಾದೆವು. ಹಸನತ್ ಮನ್ಸೂರ್ ಅವರೂ ತಮ್ಮ ಪತಿಯಷ್ಟೇ ಸ್ವಚ್ಛ ಮತ್ತು ನಿರ್ಮಲ ಹೆಣ್ಣು ಮುಂದೆಯೂ ಮಾನವ ಹಕ್ಕು ಹೋರಾಟದಲ್ಲಿ ಪತಿಗೆ ಅವರು ನೀಡಿದ ಸಾಥ್ ಅದ್ಭುತವಾದದ್ದು.

ಆಮೇಲಿಂದ ಹಸನ್ ಮನ್ಸೂರರು ನನಗೆ ಆಳವಾಗಿ ಅರ್ಥವಾಗತೊಡಗಿದರು. ಅವರ ವೈಯಕ್ತಿಕ ಬದುಕಿನ ಪರಿಚಯವಾದದ್ದೂ ಆಗಲೆ. ಚಿಕ್ಕ ವಯಸ್ಸಿನಲ್ಲೇ ಮಾರ್ಕ್ಸ್‌ವಾದದ ಬಗ್ಗೆ ಅಪಾರ ಒಲವು ಬೆಳೆಸಿಕೊಂಡಿದ್ದ ಅವರು ಕಮ್ಯುನಿಸ್ಟ್ ಚಳವಳಿಯಲ್ಲಿ ಭಾಗಿಯಾಗಿ ಎರಡು ವರ್ಷ ಜೈಲು ಶಿಕ್ಷೆಯನ್ನೂ ಅನುಭವಿಸಿದ್ದಂತೆ. ಮತಾಂತರ ಆಗುವುದಕ್ಕೂ ಮುನ್ನ ಅವರು ರಾಮಾಮೃತಂ ಆಗಿದ್ದವರು. ಎಸ್.ಎಸ್. ಸುಬ್ಬರಾಯ ಎನ್ನುವವರ ಮಗಳು ಲಕ್ಷ್ಮಿ ಎಂಬಾಕೆಯೊಂದಿಗೆ ರಾಮಾಮೃತಂಗೆ ಮದುವೆಯೂ ಆಗಿತ್ತು. ಆದರೆ ಅವರಿಬ್ಬರಿಗೆ ಮಕ್ಕಳಾಗಿರಲಿಲ್ಲ. ಅಷ್ಟರಲ್ಲಾಗಲೆ ರಾಮಾಮೃತಂಗೆ ಹಸನತ್‌ರ ಮೇಲೆ ಪ್ರೀತಿ ಅಂಕುರಿಸಿತ್ತು. ಅದೊಂದು ದೊಡ್ಡ ಕೌಟುಂಬಿಕ ವಿವಾದವಾಗುವ ಸಾಧ್ಯತೆ ಇತ್ತಾದರೂ ರಾಮಾಮೃತಂರ ಸ್ನೇಹಮಯ ವ್ಯಕ್ತಿತ್ವ ಅದನ್ನು ತುಂಬಾ ಅಚ್ಚುಕಟ್ಟಾಗಿ ನಿಭಾಯಿಸಿತೆಂದರೆ ತಪ್ಪಾಗಲಿಕ್ಕಿಲ್ಲ. ಯಾಕೆಂದರೆ ಲಕ್ಷ್ಮಿ ಮತ್ತು ರಾಮಾಮೃತಂ ಗಂಡಹೆಂಡತಿಗಿಂತ ಹೆಚ್ಚು ಸ್ನೇಹಿತರಂತೆ ಬಾಳಿದವರು. ತಮ್ಮ ಬಾಂಧವ್ಯವನ್ನು ವಿಶಾಲಾರ್ಥದಲ್ಲಿ ನೋಡಿದ ಸ್ವತಃ ಲಕ್ಷ್ಮಿಯವರೆ ಕೋರ್ಟ್‌ಗೆ ಬಂದು ತನ್ನ ಪತಿ ಮತ್ತೊಂದು ಮದುವೆಯಾಗಲು ಯಾವ ಅಭ್ಯಂತರವೂ ಇಲ್ಲವೆನ್ನುವ ಒಪ್ಪಿಗೆ ಕೊಟ್ಟಿದ್ದರು. ನಂತರವೇ ಹಸನತ್ ಮನ್ಸೂರ್‌ರನ್ನು ಮದುವೆಯಾದ ರಾಮಾಮೃತಂ ಇಸ್ಲಾಮ್‌ಗೆ ಮತಾಂತರ ಹೊಂದಿ ಹಸನ್ ಮನ್ಸೂರ್ ಆಗಿ ಬದಲಾದದ್ದು. ಆದಾದಮೇಲೂ ಲಕ್ಷ್ಮಿ ಮತ್ತು ಹಸನ್ ಮನ್ಸೂರ್ ಯಾವುದೇ ಮನಸ್ತಾಪಗಳಿಲ್ಲದೆ ಪರಸ್ಪರ ಭೇಟಿಯಾಗುತ್ತಿದ್ದದುಂಟು. ಈಗ್ಗೆ ಮೂರು ವರ್ಷಗಳ ಹಿಂದೆ ಲಕ್ಷ್ಮಿ ಅವರು ತೀರಿಕೊಂಡಾಗಲು ಹಸನ್ ಮನ್ಸೂರ್ ತುಂಬಾ ವ್ಯಥೆ ಪಟ್ಟುಕೊಂಡಿದ್ದರು. ಅವರೊಳಗಿದ್ದ ಮನುಷ್ಯತ್ವದ ಸೆಲೆಯೇ ಅಂತದ್ದು. ಈ ಹಂತದಲ್ಲಿ ಸ್ಮರಿಸಿಕೊಳ್ಳಲೇಬೇಕಾದ ಮತ್ತೊಂದು ಗುಣವೆಂದರೆ ಅವರ ತಾರ್ಕಿಕತೆ. ಅದು ಯಾವಾಗಲು ಕಡಿಮೆಯಾಗಲೇ ಇಲ್ಲ. ಸಾಮಾನ್ಯವಾಗಿ ಯಾವುದೇ ಮನುಷ್ಯ ಒಂದು ಧರ್ಮ ಬಿಟ್ಟು ಮತ್ತೊಂದು ಧರ್ಮಕ್ಕೆ ಪರಿವರ್ತನೆಯಾದಾಗ ಆ ಧರ್ಮವನ್ನು ಒಪ್ಪಿಕೊಂಡು ಅದರ ಆಶೋತ್ತರಗಳಿಗೆ ಸ್ಪಂದಿಸಿದರೆ ಸಾಕು ಎನ್ನುವ ಚೌಕಟ್ಟಿಗೆ ಸೀಮಿತನಾಗಿಬಿಡುತ್ತಾನೆ. ಆದರೆ ಹಸನ್ ಮನ್ಸೂರ್ ಯಾವತ್ತೂ ಅಂತಹ ಅಸಹಾಯಕತೆಗೆ ಬಲಿಯಾದವರಲ್ಲ. ಯಾವ ಧರ್ಮದಲ್ಲೇ ಇದ್ದರೂ ಮನುಷ್ಯ ಮನುಷ್ಯನಾಗಿ ಬಾಳಬಹುದು, ಬಾಳಬೇಕು ಎಂಬುದು ಅವರ ನಿಲುವಾಗಿತ್ತು. ಅದು ಅವರ ಹೋರಾಟದಲ್ಲಿ ವ್ಯಕ್ತವಾಗುತ್ತದೆ. ಅವರು ಕೇವಲ ಮುಸ್ಲಿಂರಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಹೋರಾಡಿದವರಲ್ಲ. ಜಾತಿ, ಧರ್ಮಗಳನ್ನು ಮೀರಿ ಯಾವುದೇ ಮನುಷ್ಯನೊಬ್ಬನ ಹಕ್ಕಿಗಾಗಿ ಹೋರಾಡುತ್ತಾ ಬಂದಂತವರು.

ಹಸನ್ ಮನ್ಸೂರ್‌ರಿಗೆ ಓದುವುದೆಂದರೆ ಅಚ್ಚುಮೆಚ್ಚು. ಅದರಲ್ಲೂ ಮಾರ್ಕ್ಸ್‌ವಾದದ ಸಾಹಿತ್ಯಗಳನ್ನು ತುಂಬಾ ಓದುತ್ತಿದ್ದರು. ಕೆಲವೊಂದನ್ನು ಸಾಂದರ್ಭಿಕವಾಗಿ ಟೀಕೆಯನ್ನೂ ಮಾಡುತ್ತಿದ್ದರು. ಅವರು ಇಂಗ್ಲಿಷ್ ಲೆಕ್ಚರರ್ ಆಗಿದ್ದರೂ ಹೆಚ್ಚು ಜನರು ಓದಿರದ ಆದರೆ ಆಧುನಿಕ ಸಾಹಿತ್ಯ ಮತ್ತು ಸಾಮಾಜಿಕ ಸಂಚಲನೆಗಳ ಮಹತ್ವದ ಕೃತಿಯೆಂಬ ಹೆಗ್ಗಳಿಕೆ ಪಡೆದ ಜೇಮ್ಸ್ ಜಾಯ್ಸ್ ಬರೆದ 'ಯುಲಿಸಿಸ್' ಪುಸ್ತಕವನ್ನು ಅವರು ಓದಿ ಪಟಪಟವನ್ನೂ ಅರಗಿಸಿಕೊಂಡಿದ್ದರು. ಅನೇಕ ಸಂದರ್ಭಗಳಲ್ಲಿ ಆ ಪುಸ್ತಕದ ಹೇಳಿಕೆಗಳನ್ನು ಉಲ್ಲೇಖಗಳಾಗಿಯೂ ನೀಡುತ್ತಿದ್ದರು. ಅವರ ಓದಿನ ದಾಹ ಎಂತಹದ್ದಾಗಿತ್ತೆಂದರೆ ವೈದ್ಯೆಯಾಗಿದ್ದ ಅವರ ಅಕ್ಕ ಎಚ್.ಎ. ಅಂಬುಜಾ ಅಧ್ಯಯನಕ್ಕೆಂದು ತಂದು ಮನೆಯಲ್ಲಿರಿಸಿ ಕೊಂಡಿದ್ದ ಅಲೋಪತಿ ಚಿಕಿತ್ಸಾ ಪುಸ್ತಕಗಳನ್ನೆಲ್ಲ ಇವರು ಓದಿ ಮುಗಿಸಿಬಿಟ್ಟಿದ್ದರು. ಆರೋಗ್ಯದ ಬಗ್ಗೆ ಅಪಾರ ಕಾಳಜಿ ಉಳ್ಳವರಾಗಿದ್ದ ಹಸನ್ ಮನ್ಸೂರ್ ಆಯುರ್ವೇದ, ಹೋಮಿಯೋಪತಿ ಇತರೆ ಚಿಕಿತ್ಸಾ ವಿಧಾನಗಳನ್ನು ಒಪ್ಪಿಕೊಳ್ಳದೆ ಅಲೋಪತಿ ಚಿಕಿತ್ಸೆಗಳನ್ನು ಮಾತ್ರ ಒಪ್ಪಿಕೊಳ್ಳುತ್ತಿದ್ದದಕ್ಕೆ ಇದೇ ಕಾರಣ ಎಂಬುದು ಹಲವರಿಗೆ ತಿಳಿದಿರಲಿಕ್ಕಿಲ್ಲ.

ಹೀಗೆ ಓದಿನ ವ್ಯಾಮೋಹ ಬೆಳೆಸಿಕೊಂಡಿದ್ದ ಅವರು ಒಮ್ಮೆ "ಮಾರ್ಕ್ಸ್‌ವಾದದ ಖ್ಯಾತ ಕವಿ, ಚಿಂತಕ ಕ್ರಿಸ್ಟೋಫರ್ ಕಾಡ್‌ವೆಲ್ ಬಗ್ಗೆ ಪಿಎಚ್.ಡಿ ಮಾಡು. ನಾನೇ ನಿನಗೆ ಗೈಡ್ ಆಗಿರುತ್ತೇನೆ. ಅಗತ್ಯವಿರುವ ಮತ್ತು ನನ್ನ ಬಳಿ ಲಭ್ಯವಿರುವ ಪುಸ್ತಕಗಳನ್ನೂ ನೀಡುತ್ತೇನೆ" ಎಂದು ನನಗೆ ಸಲಹೆ ನೀಡಿದ್ದರು. ಅದರಂತೆ ನಾನು ಪಿಎಚ್.ಡಿ ಯನ್ನೂ ತೆಗೆದುಕೊಂಡೆ. ಮಾರ್ಕ್ಸ್‌ವಾದ, ಸೋವಿಯತ್ ಚಳವಳಿ, ಸ್ಪೇನ್ ನಾಗರಿಕ ಯುದ್ಧ-ಹೀಗೆ ಹಲವಾರು ವಿಷಯಗಳನ್ನು ಅವರು ನನ್ನೊಂದಿಗೆ ಹಂಚಿಕೊಳ್ಳಲು ಅದು ಒಂದು ಕಾರಣವಾಯಿತು. ಅಷ್ಟರಲ್ಲಾಗಲೆ ಮಾನವ ಹಕ್ಕುಗಳ ಉಲ್ಲಂಘನೆಯಿಂದಾಗಿ ದಲಿತರು, ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿದ್ದ ದೌರ್ಜನ್ಯಗಳಿಂದ ರೋಸಿ ಹೋಗಿದ್ದ ನಾವು 1984ರಲ್ಲಿ ಕರ್ನಾಟಕ ನಾಗರಿಕ ಹಕ್ಕುಗಳ ಸಮಿತಿಯನ್ನು (ಕೆಸಿಎಲ್‌ಸಿ) ಹುಟ್ಟುಹಾಕಿ ಅದರಲ್ಲಿ ಹೆಚ್ಚೆಚ್ಚು ಸಕ್ರಿಯರಾಗಿಬಿಟ್ಟೆವು. ಅಂತಹದ್ದೊಂದು ಸಮಿತಿಯ ಅಸ್ತಿತ್ವಕ್ಕೆ ಹಸನ್ ಮನ್ಸೂರರೆ ಮೂಲ ಪ್ರೇರಣೆ.

ಒಂದೇ ವರ್ಷದಲ್ಲಿ ನಾವು ಆ ಸಮಿತಿಯ ಮೂಲಕ ಹಲವಾರು ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಹಚ್ಚಿ ಬೆಳಕಿಗೆ ತಂದಿದ್ದೆವು. ಅದರಲ್ಲಿ ಮೂರು ಪ್ರಮುಖವಾದವು. ಮೊದಲನೆಯದು ಗೌರಿಬಿದನೂರು ಬಳಿಯಿರುವ ಹುದೂತಿ ನಾಗೇಸಂದ್ರದಲ್ಲಿ ನಡೆಯುತ್ತಿದ್ದ ಜೀತಪದ್ಧತಿಯನ್ನು ಪತ್ತೆ ಮಾಡಿದ್ದು. ಎರಡನೆಯದು ಶಿವಾಜಿನಗರದಲ್ಲಿ ಪೊಲೀಸರು ಗೋಲಿಬಾರ್ ನಡೆಸಿ 22 ಜನರನ್ನು ಹಾಡುಹಗಲೇ ಹತ್ಯೆಮಾಡಿದ್ದು. ಮೂರನೆಯದು ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರನ್ನು ಒಕ್ಕಲೆಬ್ಬಿಸುವ ಯೋಜನೆಯನ್ನು ವಿರೋಧಿಸಿದ್ದು. ನಮ್ಮ ಪಾಲಿಗೆ ಇವು ಹಕ್ಕುಗಳ ಹೋರಾಟವಾಗಿದ್ದರೆ ಆಳುವವರ ಕಣ್ಣಿಗೆ ಇವು ನಾವು ಮಾಡಿದ ಮೂರು 'ಮಹಾಪಾಪ'ಗಳಾಗಿದ್ದವು. ಹಾಗಾಗಿ ಕಮ್ಯುನಿಸ್ಟ್ ನಾಯಕ ಕೊಂಡಪಲ್ಲಿ ಸೀತಾರಾಮಯ್ಯನಿಗೆ ಆಶ್ರಯ ಕೊಟ್ಟ ಆರೋಪವನ್ನು ನನ್ನ ಮೇಲೆ ಹೊರಿಸಿ 1986ರಲ್ಲಿ ನನ್ನನ್ನು ಪೊಲೀಸರು ಅರೆಸ್ಟ್ ಮಾಡಿದ್ದರು.

ಆ ಬಂಧನ ನನಗಿಂತಲೂ ಹೆಚ್ಚಾಗಿ ದೊಡ್ಡ ಆಘಾತ ನೀಡಿದ್ದು ಮನ್ಸೂರ್ ದಂಪತಿಗಳಿಗೆ. ಅವರು ನನ್ನ ಬಗ್ಗೆ ಎಂತಹ ಬಾಂಧವ್ಯ ಇಟ್ಟುಕೊಂಡಿದ್ದರೆಂದರೆ ನಾನು ಅರೆಸ್ಟ್ ಆದ ಸುದ್ದಿ ಕೇಳಿ ಹಸನ್ ಮತ್ತು ಹಸನತ್ ಮನ್ಸೂರ್ ಇಬ್ಬರೂ ಅಳುತ್ತಾ ಕೂತಿದ್ದರು ಎಂಬ ಸಂಗತಿ ನನಗೆ ಆಮೇಲೆ ತಿಳಿದುಬಂತು. ಸುಮಾರು ಮೂರು ತಿಂಗಳ ಕಾಲ ಜೈಲಿನಲ್ಲಿದ್ದ ನನ್ನನ್ನು ನಕ್ಸಲೈಟ್ ಎಂದು ಬಿಂಬಿಸುವುದು ಮತ್ತು ನಮ್ಮ ಕೆಸಿಎಲ್‌ಸಿ ತಂಡವನ್ನು ಪೀಪಲ್ಸ್‌ವಾರ್ ಪಕ್ಷದ ಅಂಗಪಕ್ಷವೆಂದು ನಿಷ್ಕ್ರಿಯಗೊಳಿಸುವುದು ಆ ಬಂಧನದ ಉದ್ದೇಶವಾಗಿತ್ತು. ಆದರೆ ನನಗೆ ನಿಜಕ್ಕೂ ಆಘಾತವಾದದ್ದೆಂದರೆ ಇಂಟರಾಗೇಶನ್‌ಗೆಂದು ಬಂದ ಪೊಲೀಸ್ ಅಧಿಕಾರಿಗಳು 'ಹಸನ್ ಮನ್ಸೂರ್ ಪಾಕಿಸ್ತಾನದ ಏಜೆಂಟ್ ಎಂಬುದನ್ನು ಒಪ್ಪಿಕೊಂಡು ಬಿಡು, ನಿನ್ನನ್ನು ಬಿಟ್ಟುಬಿಡುತ್ತೇವೆ' ಎಂಬ ಆಮಿಷವೊಡ್ಡಿದಾಗ. ಹಸನ್ ಮನ್ಸೂರರ ಮಾನವೀಯ ಮೌಲ್ಯಗಳ ಬಗ್ಗೆ, ಸಾಮಾಜಿಕ ಕಳಕಳಿಯ ಬಗ್ಗೆ ತಿಳಿಯದ ಪೊಲೀಸರಿಗೆ ಮನ್ಸೂರರ ನಿಜವಾದ ವ್ಯಕ್ತಿತ್ವ ಅರ್ಥ ಮಾಡಿಸುವ ಪ್ರಯತ್ನಕ್ಕೂ ನಾನು ಮುಂದಾಗಲಿಲ್ಲ. ಯಾಕೆಂದರೆ ಅದೊಂದು ವ್ಯರ್ಥ ಪ್ರಯತ್ನವಾಗುತ್ತದೆಂದು ನನಗೆ ಚೆನ್ನಾಗಿ ಗೊತ್ತಿತ್ತು. ಕೊನೆಗೆ ಮೂರು ಕೇಸುಗಳನ್ನು ಹೇರಿ ನನ್ನನ್ನು ಬಿಟ್ಟರು. ಹತ್ತು ವರ್ಷ ಆ ಕೇಸು ನಡೆದು ಕೊನೆಗೆ ಬಿದ್ದು ಹೋದವು.

ಆಮೇಲೆ ನಮ್ಮ ಕೆಸಿಎಲ್‌ಸಿ ತಂಡ ಸ್ಥಬ್ದವಾಯಿತು. ಆದರೂ ಹಸನ್ ಮನ್ಸೂರ್ ಹಾಗೂ ನನ್ನ ಮಾನವ ಹಕ್ಕು ಹೋರಾಟ ನಿರಂತರವಾಗಿ ಮುಂದುವರೆಯುತ್ತಲೇ ಬಂತು. 1993ರಲ್ಲಿ ಮತ್ತೆ ಹಸನ್ ಮನ್ಸೂರ್‌ರವರ ಮಾರ್ಗದರ್ಶನದಲ್ಲಿ ಪೀಪಲ್ಸ್ ಡೆಮಾಕ್ರಟಿಕ್ ಫೋರಮ್ (ಪಿಡಿಎಫ್) ಅನ್ನು ಹುಟ್ಟುಹಾಕಿ ವ್ಯವಸ್ಥಿತ ಹೋರಾಟಕ್ಕೆ ಮುಂದಾದೆವು. ಈಗಲೂ ಪಿಡಿಎಫ್ ಸಕ್ರಿಯವಾಗಿದ್ದು ಹಲವಾರು ಮಾನವ ಹಕ್ಕು ಉಲ್ಲಂಘನೆಗಳ ವಿರುದ್ಧ ಧ್ವನಿ ಎತ್ತುತ್ತಲೇ ಇದ್ದೇವೆ.


ಹಸನ್ ಮನ್ಸೂರ್ ಮೂಲತಃ ಮೃದು ಸ್ವಭಾವದ, ಮೆದು ಮಾತಿನ, ಕಷ್ಟ-ಬಿಡಿತನಗಳಿಗೆ ಬಲು ಸುಲಭವಾಗಿ ವಿಚಲಿತರಾಗಿಬಿಡುವ ಸ್ವಭಾವದವರು. ದಬ್ಬಾಳಿಕೆಯ ವಿರುದ್ಧ ಗಟ್ಟಿ ಧ್ವನಿ ಎತ್ತಿ ಹೆದರದೆ ದಿಟ್ಟತನದಿಂದ ಹೋರಾಡುತ್ತಿದ್ದರೇನೋ ಸರಿ, ಆದರೆ ತನ್ನವರ, ಆತ್ಮೀಯರ, ಪ್ರೀತಿಪಾತ್ರರ ತಪ್ಪುಗಳನ್ನು ಧಿಕ್ಕರಿಸುವ ನಿಷ್ಠುರತೆ ಅವರಲ್ಲಿರಲಿಲ್ಲ. ಮತ್ತು ಅದೇ ಅವರ ಬಹು ದೊಡ್ಡ ದುರ್ಬಲತೆ ಆಯಿತೇನೊ ಅಂತ ನನ್ನಗನ್ನಿಸುತ್ತದೆ. ಅಂತಹ ತಪ್ಪನ್ನು ನನ್ನ ವಿಚಾರದಲ್ಲೂ ಮಾಡಿದ್ದರು. ಅವರ ಸಲಹೆಯಂತೆಯೇ ನಾನು ಪಿಎಚ್.ಡಿ ತೆಗೆದುಕೊಂಡಿದ್ದೆನಾದರೂ ನಾನು ಅದನ್ನು ಸರಿಯಾಗಿ ಮಾಡುತ್ತಿದ್ದೇನೆಯೇ, ಅಧ್ಯಯನದ ಪ್ರಗತಿ ಯಾವ ಹಂತದಲ್ಲಿದೆಯೆಂದು ಅವರು ಎಂದೂ ಕೇಳಲೇ ಇಲ್ಲ. ಅದು ಅವರ ನಿರ್ಲಕ್ಷ್ಯವಲ್ಲ, ಅಷ್ಟರಲ್ಲಾಗಲೆ ನಾನು ಕೆಸಿಎಲ್‌ಸಿಯಲ್ಲಿ ಸಕ್ರಿಯನಾಗಿ ಹೋರಾಡುತ್ತಿದ್ದದ್ದು, ಮೂರು ಮಕ್ಕಳ ನನ್ನ ಸಂಸಾರವನ್ನು ಸಾಕಲು ಕಷ್ಟಪಡಬೇಕಾದದ್ದೆಲ್ಲವನ್ನು ಕಣ್ಣಾರೆ ಕಾಣುತ್ತಿದ್ದ ಅವರು ಪಿಎಚ್.ಡಿ ಯನ್ನು ಗಂಭೀರವಾಗಿಸಿ ನನಗೆ ಮತ್ತೊಂದು ಹೊರೆ ನೀಡಬಾರದೆನ್ನುವ ಭಾವದಿಂದಲೇ ಸುಮ್ಮನಾಗಿಬಿಟ್ಟಿದ್ದರು. ಕೊನೆಗೂ ನನ್ನ ಪಿಎಚ್.ಡಿ ಮುಗಿಯಲಿಲ್ಲ. ಈ ಬಗ್ಗೆ ಅವರು ಒಳಗೊಳಗೇ ವ್ಯಥೆ ಪಟ್ಟಿರಬಹುದೇನೊ ಆದರೆ ನನ್ನ ಮುಂದೆ ಹೇಳಿಕೊಳ್ಳಲೇ ಇಲ್ಲ. ಖಂಡಿತವಾಗಿಯೂ ಅದಕ್ಕೆ ನನ್ನ ನಿರ್ಲಕ್ಷ್ಯ ಅಥವಾ ಬದಲಾದ ಆದ್ಯತೆಗಳು ಕಾರಣವೇ ಹೊರತು ಮನ್ಸೂರರಲ್ಲ. ಆದರೆ ಪ್ರೀತಿಪಾತ್ರರನ್ನು ನಿಷ್ಠುರವಾಗಿ ಧಿಕ್ಕರಿಸಲಾಗದ ಅವರ ದೌರ್ಬಲ್ಯತೆಗೆ ಒಂದು ಉದಾಹರಣೆಗಾಗಿ ಅದನ್ನಿಲ್ಲಿ ಹೇಳಿಕೊಂಡೆ ಅಷ್ಟೆ.


ಅವರ ಈ ದೌರ್ಬಲ್ಯತೆಯನ್ನು ಚೆನ್ನಾಗಿ ಬಳಸಿಕೊಂಡದ್ದು ಎನ್.ಜಿ.ಓ.ಗಳು. ಆಳುವ ಸರ್ಕಾರಗಳ ಆಶೋತ್ತರಗಳಿಗೆ ತಕ್ಕಂತೆ ಮಾತ್ರ ವರ್ತಿಸಬಲ್ಲ ಕೆಲ ಎನ್‌ಜಿಓಗಳೇ ಅವರನ್ನು ಇತ್ತೀಚಿನ ದಿನಗಳಲ್ಲಿ ಆವರಿಸಿಬಿಟ್ಟಿದ್ದವು. ಅವರ ಹೆಸರು, ವರ್ಚಸ್ಸು, ಉಪಸ್ಥಿತಿಗಳು ಅಂತಹ ಎನ್‌ಜಿಓಗಳಿಂದ 'ಉಪಯೋಗಿಸಲ್ಪಡುತ್ತಿದ್ದದ್ದು' ನನಗೆ ಇಷ್ಟವಾಗಲಿಲ್ಲ. ಈ ಕುರಿತು ಹಲವಾರು ಬಾರಿ ಹಸನ್ ಮನ್ಸೂರರೊಂದಿಗೆ ಚರ್ಚಿಸಿದ್ದೂ ಆಯಿತು. ನನ್ನ ನಿಲುವನ್ನು ಹೌದು ಎಂದು ಒಪ್ಪಿಕೊಂಡರೂ 'ನಮ್ಮವರನ್ನು ಧಿಕ್ಕರಿಸಲಾಗದ ಅವರ ದೌರ್ಬಲ್ಯತೆ' ಅಂತವರನ್ನು ದೂರ ಮಾಡಲು ಅವರಿಗೆ ಅಡ್ಡಿಯಾಯಿತು. ಬರಬರುತ್ತಾ ಅಂತಹ ಎನ್‌ಜಿಓಗಳ ನಡುವೆಯೇ ಅವರು ಏಕಾಂಗಿ ಆಗಲಾರಂಭಿಸಿದರು. ವೈಯಕ್ತಿಕವಾಗಿ ನಾವಿಬ್ಬರೂ ಮೊದಲಿನಷ್ಟೇ ಆತ್ಮೀಯ ಸ್ನೇಹಿತರಾಗಿದ್ದರೂ ಇದೊಂದು ವಿಚಾರದಿಂದಾಗಿ ನಮ್ಮ ನಡುವೆ ಸ್ವಲ್ಪ ಅಂತರವೇರ್ಪಟ್ಟಿತ್ತು. ನಮ್ಮದೇ ವಿಭಿನ್ನ ವಿಧಾನಗಳಲ್ಲಿ ನಾವು ಮಾನವ ಹಕ್ಕು ಹೋರಾಟವನ್ನು ಮುಂದುವರೆಸಿಕೊಂಡೇ ಬಂದೆವು.

ನನಗೂ ವಯಸ್ಸಾಗಿತ್ತಾದ್ದರಿಂದ ಮೊದಲಿನಷ್ಟು ಪದೇಪದೇ ಅವರ ಮನೆಗೆ ಹೋಗಲು ಆಗುತ್ತಿರಲಿಲ್ಲ. ಆದರೂ ಪ್ರತಿ ಮೂರು-ನಾಲ್ಕು ತಿಂಗಳಿಗೊಮ್ಮೆ ಮನೆಗೆ ಹೋಗುವುದನ್ನು ಮಿಸ್ ಮಾಡಿರಲಿಲ್ಲ. ಅದರ ನಡುವೆ ನಮ್ಮ ವೇದಿಕೆಯ ಮೀಟಿಂಗ್‌ನಲ್ಲಂತೂ ನಾವು ಭೇಟಿಯಾಗುತ್ತಲೇ ಇದ್ದೆವು. ಕಳೆದ ಬಾರಿ ನಾನು, ನನ್ನ ಹೆಂಡತಿ ಅವರ ಮನೆಗೆ ಹೋದಾಗ ಅವರು ಆಸ್ಪತ್ರೆ ಸೇರಿದ್ದರು. ಮನೆಯಲ್ಲಿ ಇರಲಿಲ್ಲ. ಹಾಗಾಗಿ ಹಸನ್ ಮನ್ಸೂರರನ್ನು ನೋಡಲು ಆಗಿರಲಿಲ್ಲ.

ಅವರ ವಿದಾಯ ಯಾವುದೋ ಒಂದು ವರ್ಗ ಅಥವಾ ಸಮುದಾಯಕ್ಕೆ ಆದ ನಷ್ಟ ಅಲ್ಲ. ಒಟ್ಟಾರೆಯಾಗಿ ಇಡೀ ಮನುಷ್ಯತ್ವಕ್ಕೇ ತಗುಲಿದ ಭಾರೀ ಹಾನಿ. ಅವರು ಇಡೀ ಮಾನವತೆಗೆ ಮತ್ತೊಂದು ಅರ್ಥವಾಗಿ ಹೋರಾಡಿದವರು. ಅವರ ಅಂತ್ಯಸಂಸ್ಕಾರದ ಕಡೇ ಘಳಿಗೆಯವರೆಗೂ ನಾನಿದ್ದೆ. ನನ್ನೆದುರಿಗೇ ಆತನ ದೇಹ ಪ್ರಕೃತಿಯಲ್ಲಿ ಬೆರೆತುಹೋಯಿತು. ಆದರೂ ಪ್ರತಿ ಮೂರು ತಿಂಗಳಿಗೊಮ್ಮೆ ಅವರ ಮನೆಗೆ ಹೋದರೆ ಸಿಗುವಂತೆ ಈಗಲೂ ಅವ ಮತ್ತೆ ಸಿಗುತ್ತಾನೆ ಅಂತಲೇ ಎನಿಸುತ್ತದೆ. ಭೌತಿಕವಾಗಿ ಇಲ್ಲವಾದರೂ ಆತ ತನ್ನ ವ್ಯಕ್ತಿತ್ವದ ಛಾಯೆಯನ್ನು ಉಳಿಸಿಹೋಗಿರುವ ಪ್ರಭಾವ ಅಂತದ್ದು. ಮಾನವ ಹಕ್ಕು ಉಲ್ಲಂಘನೆಯ ಸವಾಲುಗಳು ಈ ಸಮಾಜದಲ್ಲಿ ಇದ್ದಷ್ಟೂ ದಿನ ಹಸನ್ ಮನ್ಸೂರ್ ನಮ್ಮೆಲ್ಲರಲ್ಲಿ ಹೋರಾಟದ ಪ್ರೇರಕನಾಗಿ ಇದ್ದೇ ಇರುತ್ತಾರೆ.

● ನಿರೂಪಣೆ: ಗಿರೀಶ್ ತಾಳಿಕಟ್ಟೆ








ಇಂಗಳೆ ಮಾರ್ಗ

ಅಂಬೇಡ್ಕರ್ ಯುಗದ ಕನ್ನಡ ಕಾವ್ಯ


ಸುಭಾಷ್ ನರೇಂದ್ರ


ಸರಜೂ ಕಾಟ್ಕರ್


ವಿ. ಮನೋಹರ್


ಸುಚೇಂದ್ರ ಪ್ರಸಾದ್

ಅಂಬೇಡ್ಕರ್ ಕುರಿತಂತೆ ಕನ್ನಡದಲ್ಲಿ ಈತನಕ ಬಂದ ಸಿನಿಮಾಗಳ ಕತೆ ಮತ್ತು ಗುಣಮಟ್ಟಕ್ಕೆ ಹೋಲಿಸಿದರೆ ಇದು ಕೊಂಚ ಭಿನ್ನ ಧಾಟಿಯ ಪ್ರಯತ್ನವೇ.

1990ರಲ್ಲಿ ಐಎಎಸ್ ಅಧಿಕಾರಿ ಪೆರುಮಾಳ್ ನಿರ್ಮಿಸಿದ್ದ 'ಬಾಲಕ ಅಂಬೇಡ್ಕರ್' ಮೂಲದಲ್ಲಿ ಕನ್ನಡದ್ದಾಗಿರಲಿಲ್ಲ ಎಂಬ ಕಾರಣಕ್ಕಾಗೇ ವಿವಾದಕ್ಕೆ ಸಿಲುಕಿತ್ತು. ಇಲ್ಲಿಗೆ ಐದು ವರ್ಷದ ಹಿಂದೆ ಕೆಂಗೇರಿಯ ವಿಷ್ಣುಕಾಂತ್ ಎಂಬುವವರು ಡಾ. ಬಿ.ಆರ್. ಅಂಬೇಡ್ಕರ್ ಎಂದೇ ಮಾಡಿದ್ದ ಚಿತ್ರ ಥೇಟರುಗಳಿಗೆ ಬರುವ ಮುನ್ನವೇ ಪ್ರಶಸ್ತಿ ಸಮಿತಿಯ ಪಾಲಾಗಿ ಹೋಗಿತ್ತು. ಇದು ಹಾಗಲ್ಲ. ವಿಷಯ ಅಂಬೇಡ್ಕರ್ ಕುರಿತಾಗಿದ್ದರೂ ಕತೆ ಮಾತ್ರ ಕನ್ನಡನಾಡಿನ ಮೊದಲ ದಲಿತ ಹೋರಾಟಗಾರನದ್ದು.

ಘನಶ್ಯಾಮ್ ಭಾಂಡಗೆ ಎಂಬ ವಿಕಲ ಚೇತನರೊಬ್ಬರು ಕನ್ನಡದಲ್ಲಿ ನಿರ್ಮಿಸುತ್ತಿರುವ 'ಇಂಗಳೆ ಮಾರ್ಗ' ಎಂಬ ವಿಲಕ್ಷಣ ಹೆಸರಿನ ಚಿತ್ರದ ಕುರಿತಂತೆ ಇಂಟರ್‌ನೆಟ್‌ನ ಸಾಮಾಜಿಕ ಜಾಲತಾಣಗಳಲ್ಲಿ ವಾದ-ವಿವಾದ ಚರ್ಚೆಗಳ ಮೂಲವೇ ಕುತೂಹಲಕರ. ಸ್ವಾತಂತ್ರಪೂರ್ವದಲ್ಲಿ ಅಂಬೇಡ್ಕರ್ ಹಚ್ಚಿದ ಹೋರಾಟದ ಕಿಚ್ಚು ಕನ್ನಡನಾಡಿನಲ್ಲಿ ಬೇರೆಯದೇ ಪರಿಸ್ಥಿತಿಯೊಂದಕ್ಕೆ ಕಾರಣವಾಯಿತು. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ಮಹಾರಾಷ್ಟ್ರದ ಗಡಿಗುಂಟ ಸ್ವಾತಂತ್ರ ಸಂಗ್ರಾಮಕ್ಕೆ ಪರ್ಯಾಯವಾಗಿ ತಲೆಎತ್ತಿದ ದಲಿತ ಸಂಘರ್ಷದ ಮೂಲ ಪುರುಷನಾದ ದೇವರಾಯ ಇಂಗಳೆಯನ್ನು ಇತಿಹಾಸ ಮರೆತಿರಬಹುದು. ಕರ್ನಾಟಕದ ಸಾಮಾಜಿಕ ಸಂಘರ್ಷಗಳ ಚರಿತ್ರೆಯಲ್ಲಿ ಇಂಗಳೆಯ ಉಲ್ಲೇಖವೇ ನಶಿಸಿರಬಹುದು.

ಅಂಥಾದ್ದೊಂದು ಪ್ರಯತ್ನದ ಫಲವಾಗಿಯೇ 'ಇಂಗಳೆ ಮಾರ್ಗ' ಎಂಬ ಚಿತ್ರ ರೂಪುಗೊಂಡಿದೆ. ಈ ಚಿತ್ರದ ವಿಶೇಷವೆಂದರೆ ಇದರ ಕಥಾನಾಯಕನದ್ದು ಅಂಬೇಡ್ಕರ್‌ಗೆ ಮಾರ್ಗದರ್ಶಕನಾಗುವ ಪಾತ್ರ. ಕನ್ನಡಿಗನೊಬ್ಬ ಆ ಕಾಲಕ್ಕೆ ಹೇಗೆಲ್ಲ ಅಂಬೇಡ್ಕರ್‌ಗೆ ನೆರವಾದ, ಅದರ ಫಲವಾಗಿ ಬೆಳಗಾವಿ ಸುತ್ತಮುತ್ತಲ ಪ್ರದೇಶಗಳ ದಲಿತರಲ್ಲಿ ಏನೆಲ್ಲ ಪರಿವರ್ತನೆಗಳಾದವು, ಅಂಬೇಡ್ಕರ್ ಆತನ ಸಹಾಯದಿಂದಾಗಿ ಏನೆಲ್ಲ ಸಾಧಿಸುವಂತಾಯ್ತು, ಹೀಗೆ ಶೋಷಿತ ಸಮೂಹವೊಂದರ ಪರ ಹೋರಾಟಕ್ಕಿಳಿದಿದ್ದರಿಂದಾಗಿ ಆತನ ಬದುಕಿನಲ್ಲಾದ ದುರಂತಗಳ ಕಥಾನಕವೇ ಇಂಗಳೆ ಮಾರ್ಗ.

ವಿಶಾಲ್‌ರಾಜ್ ನಿರ್ದೇಶನದ ವಿ. ಮನೋಹರ್ ಸಂಗೀತವಿರುವ 'ಇಂಗಳೆ ಮಾರ್ಗ' ಚಿತ್ರದ ಹಾಡುಗಳ ಸುರುಳಿ ಬಿಡುಗಡೆಗೆಂದು ಬಂದಿದ್ದ ಸ್ವಾತಂತ್ಯ ಹೋರಾಟಗಾರ ದೊರೆಸ್ವಾಮಿ, ಮಾಜಿ ಲೋಕಾಯುಕ್ತ ಸಂತೋಷ ಹೆಗ್ಡೆ ಮತ್ತು ದಲಿತ ಕವಿ ಸಿದ್ದಲಿಂಗಯ್ಯ ವಿಶೇಷವಾಗಿ ಸ್ಮರಿಸಿದ್ದೇ ದೇವರಾಯ ಇಂಗಳೆ ಎಂಬ ಮೊಟ್ಟ ಮೊದಲ ಕನ್ನಡ-ಮರಾಠಿ ದಲಿತ ಲೇಖಕನ ಬದುಕಿನ ದುರಂತವನ್ನು. ಕಥೆ ನಮ್ಮನ್ನು ಅಂಬೇಡ್ಕರ್ ಯುಗಕ್ಕೆ ಕರೆದೊಯ್ಯುತ್ತದೆ. ಸ್ವಾತಂತ್ರ್ಯ ಪೂರ್ವ ಅಂದರೆ 1930ರ ದಶಕದಲ್ಲಿ ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರೇರಿತನಾದ ದೇವರಾಯ ಹೊಲೆಯರ್ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಇಂಗಳೆ ಎಂಬ ಗ್ರಾಮವೊಂದರ ಶಾಲಾ ಶಿಕ್ಷಕ.

ಕನ್ನಡ ಮತ್ತು ಮರಾಠಿಯಂತೆ ಇಂಗ್ಲಿಷ್‌ನಲ್ಲೂ ಪಾಂಡಿತ್ಯವಿದ್ದ ದೇವರಾಯನಿಗೆ ಅಂಬೇಡ್ಕರ್ ವಿಚಾರಧಾರೆಯೇ ಜೀವಾಳ. ಅಂಬೇಡ್ಕರ್‌ಗಿಂತಲೂ ಎರಡು ವರ್ಷ ಹಿರಿಯರಾದ ದೇವರಾಯನ ಜೊತೆ ಆ ಕಾಲಕ್ಕೇ ಅಂಬೇಡ್ಕರ್ ಪತ್ರ ವ್ಯವಹಾರವಿರಿಸಿಕೊಂಡಿರುತ್ತಾರೆ. ಒಮ್ಮೆ ಕೊಲ್ಲಾಪುರಕ್ಕೆ ಹೋದಾಗ ತನ್ನ ಕ್ಷೌರಕ್ಕೆಂದು ಕ್ಷೌರದಂಗಡಿಗೆ ಹೋಗುತ್ತಾರೆ. ಕ್ಷೌರಿಕ ಅದೂಇದೂ ಮಾತಾಡುತ್ತ ನಿನ್ನ ಹೆಸರೇನೆಂದು ಕೇಳುತ್ತಾನೆ. ತನ್ನ ಹೆಸರು ಹೇಳಿದ ನಂತರವೂ ಆ ಕ್ಷೌರಿಕ ಪೂರ್ತಿ ಸಂತೃಪ್ತನಾಗದೆ ಅಡ್ಡ ಹೆಸರೇನೆಂದು ಕೇಳುತ್ತಾನೆ. ಸಹಜವಾಗೇ ತನ್ನ ಹೆಸರನ್ನು 'ದೇವರಾಯ ಹೊಲೆಯರ್' ಎಂದಿದ್ದೇ ತಡ ಕೆಂಡಾಮಂಡಲನಾದ ಕ್ಷೌರಿಕ ವಾಚಾಮಗೋಚರ ಬೈದಿದ್ದೇ ಅರ್ಧ ಮುಗಿಸಿದ್ದ ಕ್ಷೌರದಲ್ಲೇ ಅವರನ್ನು ಅಂಗಡಿಯಿಂದ ಹೊರದಬ್ಬುತ್ತಾನೆ.

ಇದರಿಂದ ಆಘಾತಗೊಂಡ ದೇವರಾಯ ಮತ್ತೊಂದು ಅಂಗಡಿಗೆ ಹೋಗಿ ಅಲ್ಲಿ ತನ್ನ ಹೆಸರಿನ ಹಿಂದಿದ್ದ ಹೊಲೆಯರ್ ಪದಕ್ಕೆ ಬದಲಾಗಿ ಊರಿನ ಹೆಸರಾದ ಇಂಗಳೆಯನ್ನು ಸೇರಿಸಿ ಹೇಳುತ್ತಾರೆ. ಏಕೆಂದರೆ ಇಂಗಳೆ ಎಂಬ ಅಡ್ಡ ಹೆಸರನ್ನು ಜೈನರು, ಬ್ರಾಹ್ಮಣರನೇಕರು ಇಟ್ಟುಕೊಂಡಿರುತ್ತಾರೆ. ಯಾರೋ ಉಚ್ಚ ಕುಲದವನೆಂದು ಭಾವಿಸಿದ ಕ್ಷೌರಿಕನಿಗೆ ಅರ್ಧ ಕತ್ತರಿಸಿದ್ದ ತಲೆಗೂದಲಿಗೆ ಇಲಿ ಕಚ್ಚಿದ್ದೆಂಬ ನೆಪವೊಡ್ಡಿ ದೇವರಾಯ ಕ್ಷೌರ ಮುಗಿಸಿಕೊಳ್ಳುತ್ತಾರೆ.


ರೂಪಿಕಾ

ಅಲ್ಲಿಂದಾಚೆಗೆ ಊರಿಗೆ ಬಂದಿದ್ದೇ ದೇವರಾಯ ಅಸ್ಪೃಶ್ಯತೆ ವಿರುದ್ಧ ದಲಿತರನ್ನು ಸಂಘಟಿಸತೊಡಗುತ್ತಾರೆ. ಈ ಕಾರಣಕ್ಕಾಗೇ ಊರಿನ ಭೂ ಮಾಲಿಕರು ಅವರ ವಿರುದ್ಧ ತಿರುಗಿಬಿದ್ದು ಶಾಲಾ ಶಿಕ್ಷಕನ ಉದ್ಯೋಗವನ್ನೂ ಕಳೆದುಕೊಳ್ಳುತ್ತಾರೆ. ಅದೇ ಹೊತ್ತಿಗೆ ಅಂಬೇಡ್ಕರ್ ಕೂಡ ತನ್ನ 'ಸಖಪಾಲ್' ಎಂದಿದ್ದ ಅಡ್ಡ ಹೆಸರನ್ನು ಬದಲಾಯಿಸಿಕೊಂಡು 'ಅಂಬೇಡ್ಕರ್' ಎಂದಿಟ್ಟುಕೊಂಡಿದ್ದನ್ನು ಗಮನಿಸಿದ ದೇವರಾಯ ಚಿಕ್ಕೋಡಿ ಸುತ್ತಮುತ್ತಲ ದಲಿತರ ಹೆಸರಿಗಂಟಿದ ಜಾತಿಸೂಚಕ ಹೊಲೆಯರ್, ಮಾದರ್, ಕಾಂಬಳೆ, ಚಲವಾದಿ-ಇತ್ಯಾದಿ ಅಡ್ಡ ಹೆಸರುಗಳನ್ನು ಬದಲಾಯಿಸುವ ಚಳವಳಿ ಹಮ್ಮಿಕೊಳ್ಳುತ್ತಾರೆ.

ಇದು ಎಷ್ಟೊಂದು ವ್ಯಾಪಕವಾಗುತ್ತದೆಯೆಂದರೆ ಸಹಸ್ರಾರು ದಲಿತ ಕುಟುಂಬಗಳು ಯಾವ್ಯಾವ ಭೂಮಾಲಿಕರ ಮನೆಯಲ್ಲಿ ಜೀತಕ್ಕಿರುತ್ತಾರೋ ಅವರ ಅಡ್ಡ ಹೆಸರಿನ ಬದಲಿಗೆ ತಮ್ಮ ಹೆಸರಿಗೆ ಜೋಡಿಸಿಕೊಳ್ಳುತ್ತಾರೆ. ಹೊಲೆಯರ್, ಮಾದರ್, ಚಲವಾದಿಗೆ ಬದಲಾಗಿ ದೊಡ್ಮನಿ, ಹಾದಿಮನಿ, ಹಿರೇಮಠ, ಜಾಗಿರ್‌ದಾರ್ ಇತ್ಯಾದಿ ಅಡ್ಡ ಹೆಸರುಗಳು ಈ ಭಾಗ ದಲಿತರಿಗೆ ಪ್ರಾಪ್ತಿಯಾಗಿದ್ದೇ ದೇವರಾಯನಿಂದ. ಸಾಮೂಹಿಕವಾಗಿ ಹೆಸರು ಬದಲಾಯಿಸಿಕೊಳ್ಳುವ ಚಳವಳಿಗೆ ಆ ಕಾಲದ ಬ್ರಿಟಿಷ್ ಕಲೆಕ್ಟರ್ ಕೂಡ ಬೆಂಬಲಿಸುತ್ತಾರಾದ್ದರಿಂದ ಕ್ರಮೇಣ ದೇವದಾಸಿ ಪದ್ಧತಿ ವಿರುದ್ಧವೂ ದೇವರಾಯ ಹೋರಾಟ ಆರಂಭಿಸುತ್ತಾರೆ.

ಹೀಗೆ ಶುರುವಾದ ದೇವರಾಯ ಇಂಗಳೆಯ ಸಾಮಾಜಿಕ ಸಂಘರ್ಷ 1935ರ ಹೊತ್ತಿಗೆ ಕೊಲ್ಲಾಪುರದ ಸಾಹು ಮಹಾರಾಜರ ಗಮನ ಸೆಳೆದು ಕ್ರಮೇಣ ಸಾಹು ಮಹಾರಾಜ್ ಮತ್ತು ಇಂಗಳೆ ಮಧ್ಯೆ ಸ್ನೇಹ ಸಂಬಂಧವೇರ್ಪಡುತ್ತದೆ. ಆ ಹೊತ್ತಿಗಾಗಲೇ ಜ್ಯೋತಿಬಾ ಪುಲೆಯವರ ವೈಚಾರಿಕತೆಯಿಂದ ಪ್ರೇರೇಪಿತರಾಗಿದ್ದ ಸಾಹು ಮಹಾರಾಜ್‌ಗೆ ಅಂಬೇಡ್ಕರ್‌ರನ್ನು ಪರಿಚಯಿಸಿಕೊಟ್ಟದ್ದೇ ಇಂಗಳೆ. ಅಂಬೇಡ್ಕರ್‌ರನ್ನು ಪದೇಪದೇ ಚಿಕ್ಕೋಡಿ, ನಿಪ್ಪಾಣಿ ಭಾಗಕ್ಕೆ ಕರೆಸಿಕೊಳ್ಳುವ ಇಂಗಳೆಯಿಂದಾಗಿ ವಿದೇಶಿ ವಿದ್ಯಾಭ್ಯಾಸಕ್ಕೆ ಅಂಬೇಡ್ಕರ್‌ಗೆ ಸಾಹು ಮಹಾರಾಜರ ನೆರವು ಸಿಗುತ್ತದೆ. ಹಾಗೆ ವಿದೇಶಿ ವಿದ್ಯಾಭ್ಯಾಸ ಮುಗಿಸಿಬಂದ ಅಂಬೇಡ್ಕರ್‌ಗೆ ಸಾಹು ಮಹಾರಾಜರೇ ನಿಂತು ತಮ್ಮ ಸಂಬಂಧಿಕರಾದ ಬರೋಡಾ ಮಹಾರಾಜರ ಸಂಸ್ಥಾನದಲ್ಲಿ ದಿವಾನ ಪದವಿಗೆ ನೇಮಿಸುವಂತಾಗುತ್ತದೆ. ಸಾಹು ಮಹಾರಾಜರಿಂದ ತಾನು ಅನುಕೂಲ ಪಡೆಯುವ ಬದಲು ತನಗಿಂತ ಕಿರಿಯರಾದ ಅಂಬೇಡ್ಕರ್ ಪರ ನಿಂತು ಅವಕಾಶ ಕಲ್ಪಿಸುವ ದೇವರಾಯ ಇಂಗಳೆ ತನ್ನ ದಲಿತ ಕಾಳಜಿ ಮತ್ತು ಪ್ರಾಮಾಣಿಕ ಹೋರಾಟದ ಫಲವಾಗೇ ವೈಯಕ್ತಿಕ ಬದುಕಿನಲ್ಲಿ ಕಷ್ಟಕ್ಕೀಡಾಗುತ್ತಾರೆ. ಅಂತಿಮವಾಗಿ ದಲಿತ ವಿರೋಧಿಗಳ ಕುತಂತ್ರ ಪಿತೂರಿಗೆ ಬಲಿಯಾಗುತ್ತಾರೆ.

ಅಂಬೇಡ್ಕರ್ ಯುಗದ ಸಾಮಾಜಿಕ, ಸಾಂಸ್ಕೃತಿಕ ಸಂಘರ್ಷದ ಫಲವಾಗಿ ತಮ್ಮ ಬದುಕನ್ನೇ ದುರಂತಕ್ಕೊಡ್ಡಿದ ಇಂಥ ಅದೆಷ್ಟು ಉದಾಹರಣೆಗಳಿವೆಯೋ. ಕರ್ನಾಟಕ ಏಕೀಕರಣ ಚಳವಳಿ, ಸ್ವಾತಂತ್ರ ಹೋರಾಟಗಳ ಬಗ್ಗೆ ಸಾಕಷ್ಟು ದಾಖಲೆ ಇತಿಹಾಸಗಳಿವೆ ನಿಜ. ಆದರೆ ಅಸ್ಪೃಶ್ಯತೆ ಮತ್ತು ದೇವದಾಸಿ ಪದ್ಧತಿ ವಿರುದ್ಧ ಹೋರಾಡುತ್ತಲೇ ಅಂಬೇಡ್ಕರ್ ಪಾಲಿಗೆ ಮಾರ್ಗದರ್ಶಕರಾಗಿದ್ದ ದೇವರಾಯ ಇಂಗಳೆಯಂಥವರ ಬಗ್ಗೆ ಐತಿಹಾಸಿಕ ಉಲ್ಲೇಖವಿರಲಿಲ್ಲ.

ಇದನ್ನು ಮೊದಲ ಬಾರಿಗೆ ಹುಡುಕಿ ಹೆಕ್ಕಿ ದಾಖಲಿಸಿದವರು ಬೆಳಗಾವಿಯ ಜನಪರ ಪತ್ರಕರ್ತ ಸರಜೂ ಕಾಟ್ಕರ್. 1936ರಲ್ಲಿ ಅಡ್ಡ ಹೆಸರು ಬದಲಾಯಿಸುವಂತೆ ಇಂಗಳೆ ಹೊರಡಿಸಿದ್ದ ಕರಪತ್ರ, ಅಂಬೇಡ್ಕರ್ ಇಂಗಳೆಗೆ ಬರೆದಿದ್ದ ಪತ್ರಗಳು, ಸಾಹು ಮಹಾರಾಜರ ಆಸ್ಥಾನದ ದಾಖಲೆಗಳು ಇತ್ಯಾದಿಗಳನ್ನೆಲ್ಲ ಕೆದಕಿ ತೆಗೆದ ಸರಜೂ ಕಾಟ್ಕರ್ ಇಂಗಳೆಯ ಬದುಕನ್ನಾಧರಿಸಿಯೇ 'ದೇವರಾಯ' ಎಂಬ ಕಾದಂಬರಿ ಬರೆಯುತ್ತಾರೆ. ಅದಕ್ಕೆ ಮುನ್ನ ನಡೆದ ಅನೇಕ ವಿಚಾರ ಸಂಕಿರಣಗಳಲ್ಲಿ ದೇವರಾಯ ಇಂಗಳೆಯೇ ಮೊದಲ ಕನ್ನಡ ಮತ್ತು ಮರಾಠಿ ದಲಿತ ಲೇಖಕನೆಂಬ ಬಗ್ಗೆ ಒಮ್ಮತಕ್ಕೆ ಬರಲಾಗಿತ್ತು.


ಈಗ ಬರುತ್ತಿರುವ 'ಇಂಗಳೆ ಮಾರ್ಗ' ಇದೇ ಸರಜೂ ಕಾಟ್ಕರ್ ಬರೆದ ದೇವರಾಯ ಕಾದಂಬರಿಯನ್ನಾಧರಿಸಿದ ಚಿತ್ರ. ವಿಶಾಲ್ ರಾಜ್ ನಿರ್ದೇಶನದ ಈ ಚಿತ್ರ ವಿಶಿಷ್ಟ ಎನಿಸಿಕೊಳ್ಳುವುದು ಇದರಲ್ಲಿ ಬರುವ ಅಂಬೇಡ್ಕರ್ ಪಾತ್ರದಿಂದಾಗಿ. ಏಕೆಂದರೆ ಇದರಲ್ಲಿ ಅಂಬೇಡ್ಕರ್ ಇದ್ದಾರಾದರೂ ಕತೆಯಿರುವುದು ಕನ್ನಡಿಗನೊಬ್ಬನ ಕುರಿತಂತೆ. ಅಂಬೇಡ್ಕರ್ ಕ್ರಾಂತಿಗೆ ಓಗೊಟ್ಟು ಅವರಿಗಾಗಿ ತನ್ನೆಲ್ಲ ಅವಕಾಶವನ್ನೂ ಧಾರೆಯೆರೆದ ತನ್ನ ಬದುಕನ್ನೇ ದುರಂತವಾಗಿಸಿಕೊಂಡ ಕನ್ನಡದ ಮೊಟ್ಟಮೊದಲ ದಲಿತ ಹೋರಾಟಗಾರನೊಬ್ಬನ ಬಗ್ಗೆ ಈ ಕಾಲದ ದಲಿತ ನಾಯಕರನೇಕರಿಗೆ ಗೊತ್ತೇ ಇರಲಿಲ್ಲ. ಹೀಗಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿನಿತ್ಯ ವಾದ-ವಿವಾದ ಚರ್ಚೆಗಳೇ ಹೆಚ್ಚಲಾರಂಭಿಸಿವೆ.

ಹಿಂದಿನ ಬಹುತೇಕ ಅಂಬೇಡ್ಕರ್ ಸಿನಿಮಾಗಳು ಯಥಾವತ್ ಅಂಬೇಡ್ಕರ್ ಬದುಕಿನ ಪುಟಗಳಿಂದ ತುಂಬಿರುತ್ತಿದ್ದರೆ 'ಇಂಗಳೆ ಮಾರ್ಗ' ಅಂಬೇಡ್ಕರ್ ಕುರಿತಂತೆ ಬೇರೆಯದೇ ಕಥಾನಕವೊಂದನ್ನು ತೆರೆದಿಡುತ್ತದೆ. ಆ ಕಾರಣಕ್ಕೇ ಇದೊಂದು ವಿಶಿಷ್ಟ ಪ್ರಯೋಗವಾಗಿ ಪರಿಗಣಿಸಲ್ಪಟ್ಟಿದೆ. ಅಂಬೇಡ್ಕರ್ ಮತ್ತು ಅಸ್ಪೃಶ್ಯತೆಯನ್ನು ಬದಿಗಿಟ್ಟು ನೋಡಿದರೂ ಕತೆಯಾಗಿ 'ಇಂಗಳೆ ಮಾರ್ಗ' ತನ್ನ ಅಸ್ತಿತ್ವವನ್ನು ಪ್ರತ್ಯೇಕವಾಗಿಸಿಕೊಳ್ಳಲಿದೆ.

ಘನಶ್ಯಾಮ್ ಭಾಂಡಗೆಯಂಥ ವಿಕಲ ಚೇತನರೊಬ್ಬರು ಕಟ್ಟಿಕೊಡುವ 'ಇಂಗಳೆ ಮಾರ್ಗ'ದ ಇನ್ನೂ ಒಂದು ವೈಶಿಷ್ಟ್ಯವೆಂದರೆ ಅಂಬೇಡ್ಕರ್ ಪಾತ್ರಧಾರಿಯಾಗಿ ಸುಭಾಷ್ ನರೇಂದ್ರ ಎಂಬ ರಂಗಭೂಮಿ ನಟ ಕಾಣಿಸಿಕೊಂಡರೆ ದೇವರಾಯ ಇಂಗಳೆಯಾಗಿ ನಟಿಸಿರುವುದು ಪ್ರತಿಭಾವಂತ ಸುಚೇಂದ್ರ ಪ್ರಸಾದ್. ಬೇರೆ ಯಾವುದಕ್ಕಲ್ಲದೇ ಹೋದರೂ ಅಂಬೇಡ್ಕರ್ ಸಂಘರ್ಷದ ಕನ್ನಡೀಕರಣದ ಕಾರಣಕ್ಕಾದರೂ 'ಇಂಗಳೆ ಮಾರ್ಗ' ವಿಶಿಷ್ಟ ಪ್ರಯೋಗವೇ.

● ರಾ. ಸೋಮನಾಥ್


ಇಂಗಳೆ ಮಾರ್ಗ ಸಿನಿಮಾದ ಒಂದು ದೃಶ್ಯ....


ಇಂಗಳೆ ಮಾರ್ಗ (ಸಿನಿಮಾ ಪೋಸ್ಟರ್)



ಘನಶ್ಯಾಮ್ ಭಾಂಡಗೆ

ನೀವು ಯಾಕೆ ಭಯಗೊಂಡಿರಿ ಎಂದು ನಮಗೆ ಹೇಳಲೇ ಬೇಕು- ಅರುಂಧತಿ ರಾಯ್

ವೆಂಡಿ ಡೋನಿಗೆರ್ ಅವರ 'ದಿ ಹಿಂದೂಸ್: ಆಲ್ಟರ್ನೆಟಿವ್ ಹಿಸ್ಟರಿ' ಎಂಬ ಪುಸ್ತಕವನ್ನು ಪೆಂಗ್ವಿನ್ ಸಂಸ್ಥೆ ಹಿಂದೆ ಪಡೆಯಲು ನಿರ್ಧರಿಸಿರುವ ಹಿನ್ನೆಲೆಯಲ್ಲಿ ಆ ಸಂಸ್ಥೆಗೆ ಖ್ಯಾತ ಲೇಖಕಿ ಅರುಂಧತಿ ರಾಯ್ ಅವರು ಬರೆದಿರುವ ಬಹಿರಂಗ ಪತ್ರದ ಅನುವಾದ ಇಲ್ಲಿದೆ...

ಹಿಂದೂ ಮೂಲಭೂತ ಸಂಘಟನೆಯೊಂದಿಗೆ ನೀವು ನ್ಯಾಯಾಲಯದ ಹೊರಗೆ ಮಾಡಿಕೊಂಡಿರುವ ಒಪ್ಪಂದವನ್ನು ಕಂಡು ಎಲ್ಲರಿಗೂ ಆಘಾತವಾಗಿದೆ. ಆ ಒಪ್ಪಂದದಲ್ಲಿ ನೀವು 'ಭಾರತ್'ನಲ್ಲಿ ವೆಂಡಿ ಡೋನಿಗರ್ ಅವರ 'ದಿ ಹಿಂದೂಸ್: ಆಲ್ಟರ್ನೆಟಿವ್ ಹಿಸ್ಟರಿ' ಪುಸ್ತಕವನ್ನು ಅಂಗಡಿಗಳಿಂದ ವಾಪಸ್ ಪಡೆದು ಪುಡಿ ಮಾಡುವುದಾಗಿ ಹೇಳಿದ್ದೀರಿ. ಸದ್ಯದಲ್ಲೇ ನಿಮ್ಮ ಕಚೇರಿಯ ಮುಂದೆ ಈ ನಿರ್ಧಾರದ ವಿರುದ್ಧ ಪ್ರತಿಭಟನಾಕಾರರು ಜಮೆ ಆದರೆ ಅಚ್ಚರಿ ಇಲ್ಲ.

ದಯವಿಟ್ಟು ಹೇಳಿ ನೀವು ಯಾವ ಕಾರಣಕ್ಕೆ ಭಯಭೀತಿಗೊಂಡಿರಿ? ನೀವು ಯಾರೆಂದು ಮರೆತುಬಿಟ್ಟಿರಾ? ನೀವು ಈ ಜಗತ್ತಿನಲ್ಲೇ ಅತಿ ಪ್ರಸಿದ್ಧ ಮತ್ತು ದೀರ್ಘಕಾಲದಿಂದ ಅಸ್ತಿತ್ವದಲ್ಲಿರುವ ಪ್ರಕಾಶನ ಸಂಸ್ಥೆ. ಪ್ರಕಾಶನವು ಒಂದು ವ್ಯವಹಾರ ಆಗುವ ಮುಂಚಿನ ಕಾಲದಿಂದಲೂ; ಪುಸ್ತಕಗಳೂ ಕೂಡ ಸುಗಂಧಭರಿತ ಸೋಪ್ ಮತ್ತು ಸೊಳ್ಳೆ ಓಡಿಸುವ ತೈಲಗಳಂತೆ ಕೇವಲ ಮಾರಾಟದ ವಸ್ತುಗಳಾಗುವ ಹಿಂದಿನಿಂದಲೂ ನೀವು ಕಾರ್ಯನಿರ್ವಹಿಸುತ್ತಾ ಬಂದಿದ್ದೀರಿ. ಇತಿಹಾಸದಲ್ಲೇ ಪ್ರಮುಖರಾದ ಬರಹಗಾರರ ಕೃತಿಗಳನ್ನು ನೀವು ಮುದ್ರಿಸಿದ್ದೀರಿ. ಅದೆಷ್ಟೇ ಕಷ್ಟಗಳು ಎದುರಾದರೂ, ಸಮಸ್ಯೆಗಳು ಅಡ್ಡಿಯಾದರೂ ನೀವು ಲೇಖಕರನ್ನು ಬೆಂಬಲಿಸಿದ್ದೀರಿ, ಅವರ ಅಭಿವ್ಯಕ್ತಿ ಸ್ವಾತಂತ್ರಕ್ಕೆ ಹೋರಾಡಿದ್ದೀರಿ. ಆದರೀಗ, ಯಾವುದೇ ಒಂದು ಫತ್ವಾ ಹೊರಡಿಸದಿದ್ದರೂ, ಯಾವ ನಿಷೇಧವನ್ನು ಘೋಷಿಸದಿದ್ದರೂ, ಯಾವ ನ್ಯಾಯಾಲಯ ಒಂದು ಆದೇಶವನ್ನು ನೀಡಿರದಿದ್ದರೂ ನೀವು ಶರಣಾಗಿದ್ದೀರಲ್ಲದೆ, ಹೇಳಹೆಸರಿಲ್ಲದ ಸಂಘಟನೆಯೊಂದಿಗೆ ಇಂತಹ ಒಂದು ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ನೀವು ನಿಮಗೇ ಅವಮಾನ ಮಾಡಿಕೊಂಡಿದ್ದೀರಿ; ಯಾಕೆ?





ಒಂದು ಕಾನೂನು ಹೋರಾಟಕ್ಕೆ ಬೇಕಾದಷ್ಟು ಆರ್ಥಿಕ ಶಕ್ತಿ ನಿಮಗಿದೆ. ಆದ್ದರಿಂದ ನೀವು ಶರಣಾಗದೆ ಗಟ್ಟಿಯಾಗಿ ನಿಂತಿದ್ದರೆ ನಿಮ್ಮ ಬೆಂಬಲಕ್ಕೆ ಅರಿವಿರುವ ಸಾರ್ವಜನಿಕರು ನಿಂತಿರುತ್ತಿದ್ದರು. ಜೊತೆಗೆ ನೀವು ಇಲ್ಲಿಯತನಕ ಪ್ರಕಟಿಸಿರುವ ಎಲ್ಲಾ ಬರಹಗಾರರು ಇಲ್ಲದಿದ್ದರೂ ಅವರಲ್ಲಿ ಹೆಚ್ಚಿನವರು ನಿಮ್ಮ ಜೊತೆ ಇರುತ್ತಿದ್ದರು. ಏನಾಯಿತು ಮತ್ತು ಯಾತಕ್ಕೆ ನೀವು ಭಯಗೊಂಡಿರಿ ಎಂಬುದನ್ನು ನೀವು ನಮಗೆ ಹೇಳಬೇಕು. ನಿಮ್ಮ ಬರಹಗಾರರಾದ ನಮಗೆ ನೀವು ಅಷ್ಟನ್ನಾದರೂ ವಿವರಿಸುವ ನೈತಿಕತೆಯನ್ನು ತೋರಬೇಕು.

ಸಂಸತ್ ಚುನಾವಣೆಗೆ ಇನ್ನೂ ಹಲವು ತಿಂಗಳುಗಳಿವೆ. ಇಲ್ಲಿಯತನಕ ಫ್ಯಾಸಿಸ್ಟರು ಪ್ರಚಾರದಲ್ಲಿ ತೊಡಗಿದ್ದಾರಷ್ಟೇ. ಹೌದು, ಸದ್ಯದ ಭವಿಷ್ಯ ಆತಂಕಕಾರಿಯಾಗಿ ಕಾಣಿಸುತ್ತಿದೆ. ಆದರೂ ಅವರಿನ್ನೂ ಅಧಿಕಾರದ ಗದ್ದುಗೆಯನ್ನು ಏರಿಲ್ಲ, ಇನ್ನೂ ಇಲ್ಲ, ಆದರೂ ನೀವು ಅವರ ಮುಂದೆ ಶರಣಾಗಿದ್ದೀರಿ ಯಾಕೆ?

ಇದನ್ನು ಕಂಡು ನಾವು ಏನೆಂದುಕೊಳ್ಳಬೇಕು? ಇನ್ನು ಮುಂದೆ ನಾವೆಲ್ಲರೂ ಹಿಂದೂತ್ವವಾದಿಗಳ ಪರವಾದ ಪುಸ್ತಕಗಳನ್ನು ಮಾತ್ರ ಬರೆಯಬೇಕೆ? ಹಾಗೆ ಮಾಡದಿದ್ದರೆ ನಮ್ಮ ಕೃತಿಗಳನ್ನು ನೀವು (ಒಪ್ಪಂದದಲ್ಲಿ ಹೇಳಿರುವಂತೆ) 'ಭಾರತ್' ನಲ್ಲಿ ಮಾರಾಟ ಮಾಡುವ ಬದಲಾಗಿ ಪುಡಿಮಾಡಿ ಹಾಕುತ್ತೀರಿ ಎಂದು ನಿರೀಕ್ಷಿಸಬೇಕೆ? ಅಥವಾ ಇನ್ನು ಮುಂದೆ ಪೆಂಗ್ವಿನ್ ಸಂಸ್ಥೆ ಪ್ರಕಟಿಸಲಿರುವ ಪುಸ್ತಕಗಳನ್ನು ಹೇಗೆ ಬರೆಯಬೇಕು ಎಂಬುದನ್ನು ಕುರಿತು ಒಂದು ಸಂಪಾದಕೀಯ ನಿರ್ಧಾರವನ್ನು ತೆಗೆದುಕೊಳ್ಳುತ್ತೀರೋ?

ಇಂತಹದ್ದೊಂದು ಘಟನೆ ಘಟಿಸಿದೆ ಎಂಬುದನ್ನೇ ನಂಬಲು ನನ್ನಿಂದ ಸಾಧ್ಯವಾಗುತ್ತಿಲ್ಲ, ಇದು ಸತ್ಯವಲ್ಲ, ಬದಲಾಗಿ ವೈರಿ ಪ್ರಕಾಶನ ಸಂಸ್ಥೆಯೊಂದು ಮಾಡಿರುವ ಹುನ್ನಾರವಿದು ಎಂದು ನಮಗೆ ಹೇಳಿ ಸಂತೈಸಿಸಿ ಅಥವಾ ಇದೊಂದು ಮುಂಚಿತವಾಗಿಯೇ ಸೋರಿಕೆಯಾಗಿರುವ ಏಪ್ರಿಲ್ ಫೂಲ್ ಜೋಕ್ ಎಂದಾದರೂ ಘೋಷಿಸಿ. ಏನನ್ನಾದರೂ ಹೇಳಿ, ಆದರೆ ಇಂತಹ ಒಂದು ಒಪ್ಪಂದವನ್ನು ಮಾಡಿಕೊಂಡಿಲ್ಲ ಎಂದಷ್ಟೇ ನಮಗೆ ಭರವಸೆ ನೀಡಿ.

ಇಲ್ಲಿಯತನಕ ನನ್ನ ಬರಹಗಳನ್ನು ಪೆಂಗ್ವಿನ್ ಪ್ರಕಟಿಸುತ್ತಿದ್ದುದರ ಬಗ್ಗೆ ನನಗೆ ಸಂತೋಷವಿತ್ತು. ಆದರೆ ಇನ್ನು ಮುಂದೆ?

ನೀವು ಮಾಡಿರುವ ಈ ಕೃತ್ಯ ನಮ್ಮೆಲ್ಲರ ಮೇಲೆ ಒಂದಲ್ಲ ಒಂದು ರೀತಿಯ ಪರಿಣಾಮವನ್ನು ಬೀರುತ್ತದೆ.

● ಅರುಂಧತಿ ರಾಯ್

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಒಂದು ಮನವಿ

ಮಾನ್ಯರೆ,

ವಿಷಯ: ವೈಚಾರಿಕತೆ, ವೈಜ್ಞಾನಿಕ ದೃಷ್ಟಿಕೋನ ಮತ್ತು ಸೆಕ್ಯುಲಾರಿಸಂ ವಿಚಾರ ಪ್ರಣಾಳಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು "ಡಾ.ಎಚ್ಚೆನ್ ವಿಚಾರವಾದಿ ಅಧ್ಯಯನ ಸಂಸ್ಥೆ"ಯನ್ನು (DR. H.N. INSTITUTE OF RATIONALIST STUDIES) ಪ್ರಾರಂಭಿಸುವಂತೆ ಕೋರಿ ಮನವಿ-


1. ಸ್ವಾತಂತ್ರ್ಯಪೂರ್ವದ ಆಚೀಚಿನ ಶತಮಾನಗಳಲ್ಲಿ ಆಧುನಿಕತೆಗೆ ಮುಖಾಮುಖಿಯಾದ ನಮ್ಮ ದೇಶವು ಹಲವು ಸವಾಲುಗಳನ್ನು ಎದುರಿಸುತ್ತ ಬಂದಿದೆಯಾದರೂ ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಅವೈಚಾರಿಕವೂ ಅವೈಜ್ಞಾನಿಕವೂ ಆದ ಬಹುತೇಕ ಆಚಾರವಿಚಾರಗಳು ಮುಂದುವರಿಯುತ್ತಿವೆ. ಮೂಢನಂಬಿಕೆಗಳು ಮತ್ತು ಕಂದಾಚಾರಗಳು ನಮ್ಮ ದೈನಂದಿನ ಜೀವನದಲ್ಲಿ ಬೇರುಬಿಟ್ಟಿವೆ. ಅವುಗಳನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಲೇ ಇವೆ. ತಾಂತ್ರಿಕ ಪರಿಣತಿಯ ಈ ದಿನಗಳಲ್ಲಿ ಊಹೆಗೂ ಮೀರಿದ ಪ್ರಮಾಣದಲ್ಲಿ ಪ್ರಭಾವ ಬೀರುವಂತಹ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಸಾಮಾಜಿಕವಾಗಿ ಅನಾರೋಗ್ಯಕಾರಿಯಾದ ಇಂತಹ ಹಲವಾರು ವಿಷಯಗಳನ್ನು ವ್ಯಾಪಕವಾಗಿ ಬಿತ್ತಿ ಜನರನ್ನು ಅವೈಚಾರಿಕ ಲೋಕಕ್ಕೆ ದಬ್ಬುತ್ತಿವೆ. ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ಬೇಕಾದ ಅಗತ್ಯಗಳಲ್ಲಿ ಒಂದಾದ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ದುರ್ಬಲಗೊಳಿಸಲಾಗುತ್ತಿದೆ. ಸರ್ಕಾರಗಳೇ ಕೆಲವೊಮ್ಮೆ ಅವೈಚಾರಿಕವೂ ಅವೈಜ್ಞಾನಿಕವೂ ಆದ ಆಚಾರವಿಚಾರಗಳಿಗೆ ಪ್ರೋತ್ಸಾಹ ನೀಡಿರುವ ಘಟನೆಗಳು ಕೂಡ ನಡೆದಿರುವ ಉದಾಹರಣೆಗಳು ನಮ್ಮೆದುರಿಗಿವೆ.

2. "ಅವೈಚಾರಿಕ ಜೀವನ ವಿಧಾನವನ್ನು ರೂಪಿಸಿರುವ ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು ಹಾಗೂ ಪೂರ್ವಾಗ್ರಹಗಳನ್ನು ಪ್ರಶ್ನಿಸುವ ಮೂಲಕ ವೈಯಕ್ತಿಕ ಮತ್ತು ಸಾಮಾಜಿಕ ಮಟ್ಟದಲ್ಲಿ ದೇಶದ ಸುಧಾರಿತ ಜೀವನ ವಿಧಾನವನ್ನು ರೂಪಿಸುವುದು ಸಾಧ್ಯ" ಎಂಬ ನೆಹರೂ ಅವರ ಹೇಳಿಕೆಯನ್ನು ಈ ಸಂದರ್ಭದಲ್ಲಿ ಅನಿವಾರ್ಯವೆಂಬಂತೆ ನೆನಪಿಸಿಕೊಳ್ಳಬೇಕಾಗಿದೆ. ದೇಶದ ಒಟ್ಟು ಜೀವನ ವಿಧಾನದ ಪರಿವರ್ತನೆಯ ಪ್ರಕ್ರಿಯೆಯಲ್ಲಿ ವೈಚಾರಿಕತೆಗೂ ವೈಜ್ಞಾನಿಕ ದೃಷ್ಟಿಕೋನಕ್ಕೂ ಸೌಹಾರ್ದತೆಯ ಜೀವನಕ್ಕೂ ಪ್ರಮುಖ ಪಾತ್ರವಿರುವುದಷ್ಟೇ ಅಲ್ಲದೆ ಮುಕ್ತಚಿಂತನೆಯ ಹೊಸ ಯುಗಕ್ಕೆ ವೈಜ್ಞಾನಿಕ ದೃಷ್ಟಿಕೋನವು ಮೆಟ್ಟಿಲಾಗುತ್ತದೆ ಎಂಬ ಅಚಲ ನಂಬಿಕೆ ಅವರದಾಗಿತ್ತು. ಸಂವಿಧಾನದ 51ಎ ಅಧ್ಯಾಯದಲ್ಲಿ (ಮೂಲಭೂತ ಕರ್ತವ್ಯಗಳು) ನೆಹರೂ ಅವರ ಈ ಆಶಯವನ್ನು ಬಿಂಬಿಸುವ ಅನುಸೂಚಿಯೊಂದನ್ನು (51ಎ-ಎಚ್) ಅಳವಡಿಸಿ ಸಂವಿಧಾನಿಕವಾಗಿ ಮೌಲ್ಯಾಂಕನಗೊಳಿಸಲಾಗಿದೆ. ಒಂದು ರೀತಿಯಲ್ಲಿ "ಮೂಲಭೂತ ಹಕ್ಕುಗಳಿಗೂ ಸರ್ಕಾರದ ನೀತಿ ನಿರ್ದೇಶಕ ಸೂತ್ರಗಳಿಗೂ ನೈತಿಕ ಕುಣಿಕೆಯಂತಿರುವ" ಈ ಅಧ್ಯಾಯದ ಅನುಸೂಚಿಯ ಅಂಶಗಳನ್ನು ಸರ್ಕಾರಗಳು ಸಂವಿಧಾನಸಮ್ಮತ ಕಾನೂನುಗಳನ್ನು ರಚಿಸುವ ಮೂಲಕ ಜಾರಿಗೆ ತರಬೇಕಾಗಿದೆ ಎಂಬುದಾಗಿ ಸರ್ವೋಚ್ಚನ್ಯಾಯಾಲಯವೂ ಅಭಿಪ್ರಾಯಪಟ್ಟಿದೆ.

3. ಮೌಢ್ಯ ಕಂದಾಚಾರ ಮುಂತಾದ ಅವೈಚಾರಿಕ ಮತ್ತು ಅವೈಜ್ಞಾನಿಕ ಚಟುವಟಿಕೆಗಳ ವಿರುದ್ಧ ಕರ್ನಾಟಕದಲ್ಲಿ ಹಲವು ವೈಯಕ್ತಿಕ ಹಾಗೂ ಸಂಘಟನಾತ್ಮಕ ಪ್ರಯತ್ನಗಳು ನಡೆದಿವೆ/ನಡೆಯುತ್ತಿವೆ. ಡಾ. ಎಚ್ಚೆನ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಬೂದಿ ಪವಾಡವನ್ನು ಅಧ್ಯಯನ ಮಾಡಲು ರಚಿಸಿದ ಸಮಿತಿ ಮತ್ತು ಬಾನಾಮತಿ ಪ್ರಕರಣವನ್ನು ಅಧ್ಯಯನ ಮಾಡಲು ಅವರ ಮಧ್ಯಪ್ರವೇಶದಿಂದಾಗಿಯೇ ರಚಿಸಲಾದ ಸಮಿತಿ- ಇವು ನಿರ್ದಿಷ್ಟ ವಸ್ತು ಮತ್ತು ವ್ಯಾಪ್ತಿಯ ಸೀಮಿತ ಅರ್ಥದಲ್ಲಿ ಸಾಂಸ್ಥಿಕ ಪ್ರಯತ್ನಗಳು ಎನ್ನಬಹುದು. ಆದರೂ ಒಟ್ಟಾರೆಯಾಗಿ ಹೇಳುವುದಾದರೆ, ಕರ್ನಾಟಕದಲ್ಲಿ ನಡೆದಿರುವ/ನಡೆಯುತ್ತಿರುವ ಇಂತಹ ಹಲವಾರು ಪ್ರಯತ್ನಗಳು ಸಂಶೋಧನೆ/ ಅಧ್ಯಯನ ಶಿಸ್ತಿನ ಆಯಾಮವಿಲ್ಲದ ಪ್ರತಿಕ್ರಿಯಾತ್ಮಕ ನೆಲೆಯಲ್ಲಿ ನಡೆದಂತಹವಾಗಿರುತ್ತವೆ. ಅಧಿಕೃತ ಸಾಂಸ್ಥಿಕ ನೆಲೆಯಿಲ್ಲದ ಈ ಪ್ರಯತ್ನಗಳ ಫಲವನ್ನು ಸಮಾಜದಲ್ಲಿ ಸುಸ್ಥಿರಗೊಳಿಸುವುದು ಸಾಧ್ಯವಾಗಿಲ್ಲ.

4. ಮೊದಲ ಪ್ಯಾರಾದಲ್ಲಿ ತಮ್ಮ ಗಮನಕ್ಕೆ ತಂದಿರುವಂತೆ ಇತ್ತೀಚಿನ ಬೆಳವಣಿಗೆಗಳು ಸಂವಿಧಾನವು ಅಪೇಕ್ಷಿಸುವ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ನಿಷ್ಫಲಗೊಳಿಸುವ ದಿಕ್ಕಿನಲ್ಲಿ ಆಘಾತಕಾರಿ ಹೆಜ್ಜೆಗಳನ್ನಿಡುತ್ತಿವೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಪೋಷಿಸುವ ದಿಕ್ಕಿನಲ್ಲಿ ಒಂದು ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿ ಈ ಪ್ರಯತ್ನಗಳಿಗೆ ಸಾಂಸ್ಥಿಕ ಸ್ವರೂಪ ನೀಡುವ ಅಗತ್ಯವಿದೆ.

5. ಡಾ. ಎಚ್ಚೆನ್‌ರವರು ನಾಡಿನ ಪ್ರಖ್ಯಾತ ವಿಚಾರವಾದಿಗಳಾಗಿದ್ದುದೂ ಆ ದಿಕ್ಕಿನಲ್ಲಿ 'ಕೊಶ್ಚನ್ ಮಾರ್ಕ್ ಎಂದರೆ ಎಚ್ಚೆನ್ ಮಾರ್ಕ್' ಎನ್ನುವಷ್ಟರಮಟ್ಟಿಗೆ ವೈಯಕ್ತಿಕವಾಗಿಯೂ ಸಂಘಟನಾತ್ಮಕವಾಗಿಯೂ ತಮ್ಮನ್ನು ತೊಡಗಿಸಿಕೊಂಡದ್ದೂ ರಾಜ್ಯದ ಜನತೆಗೆ ತಿಳಿದಿರುವ ವಿಷಯವೇ ಆಗಿದೆ. ಡಾ.ಎಚ್ಚೆನ್‌ರವರು ಮೇಲ್ಮನೆಯಲ್ಲಿ ಮೂಢನಂಬಿಕೆಗಳ ಆಚರಣೆಗಳನ್ನು ಅತ್ಯಂತ ಕಠಿಣ ಮಾತುಗಳಲ್ಲಿ ಖಂಡಿಸುವುದರ ಜೊತೆಗೆ ಸರ್ಕಾರವು ಆಡಳಿತದಲ್ಲಿ ಮೂಢಾಚಾರಣೆಗಳನ್ನು ಪಾಲಿಸದಂತೆ ಜನಪ್ರತಿನಿಧಿಗಳಿಗೆ ಮನದಟ್ಟು ಮಾಡಿಸಲು ಅವಿರತವಾಗಿ ಶ್ರಮಿಸುತ್ತಿದ್ದರು ಎಂಬುದು ತಮಗೂ ತಿಳಿದಿದೆ. ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ಸ್ಥಾಪಿತವಾಗಿರುವ ಸಂಶೋಧನಾ ಕೇಂದ್ರದ ಮಾದರಿಯಲ್ಲಿ 'ಪ್ರಕೃತಿ ನಿಯಮಗಳನ್ನು ಉಲ್ಲಂಘಿಸುವ ಸುದ್ದಿಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ಜನರಿಗೆ ತಿಳಿವಳಿಕೆ ಕೊಡುವಂತಹ "ಪ್ರಕೃತ್ಯಾತೀತ ಘಟನೆಗಳ ವೈಜ್ಞಾನಿಕ ಸಂಶೋಧನಾ ವಿಭಾಗ"ವನ್ನು ನಮ್ಮಲ್ಲೂ..... ಸ್ಥಾಪಿಸಬೇಕು' ಹಾಗೂ 'ವೈಜ್ಞಾನಿಕ ಮನೋಭಾವವನ್ನು ಶಿಕ್ಷಣಕ್ರಮದಲ್ಲಿ ಸೇರಿಸಬೇಕು' ಎಂಬುದಾಗಿ 1985ಲ್ಲಿ ನಡೆದ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನದಲ್ಲಿಯೂ ಅವರು ಕರೆಕೊಟ್ಟಿದ್ದರು. ಅಲ್ಲದೆ ವೈಚಾರಿಕತೆ, ವೈಜ್ಞಾನಿಕ ಮನೋಭಾವ ಮತ್ತು ಜ್ಞಾತ್ಯತೀತ ತತ್ವಗಳನ್ನು ಶಿಕ್ಷಣದ ಮೂಲಕ ಅನುಷ್ಠಾನಗೊಳಿಸುವ ತುರ್ತಿನ ಬಗ್ಗೆ ಅವರಿಗಿದ್ದ ಕಾಳಜಿ ಮತ್ತು ಖಚಿತ ಅಭಿಪ್ರಾಯಗಳು 1980ರಿಂದ 1986ರವರೆಗಿನ ವಿಧಾನ ಪರಿಷತ್ ನಡವಳಿಕೆಗಳಲ್ಲಿ ದಾಖಲಾಗಿವೆ. 1984ರಲ್ಲಿ ಅವರಿಗೆ ನೀಡಲಾದ ಪದ್ಮಭೂಷಣ ಪ್ರಶಸ್ತಿಯನ್ನು ಕುರಿತು, 'ಇದು ವೈಚಾರಿಕತೆ, ವೈಜ್ಞಾನಿಕ ಮನೋಭಾವದ ನಿಲುವಿಗೆ ಸಿಕ್ಕ ಮನ್ನಣೆ' ಎಂದೇ ಎಚ್ಚೆನ್ ಪ್ರತಿಕ್ರಿಯಿಸಿದ್ದು ಜಾಗೃತ ಸಮಾಜ ನಿರ್ಮಾಣದ ಬಗ್ಗೆ ಅವರಿಗಿದ್ದ ಜೀವಮಾನದ ಬದ್ಧತೆಯನ್ನು ಎತ್ತಿ ತೋರಿಸುತ್ತದೆ.



6. ಕರ್ನಾಟಕ ವಿಧಾನಮಂಡಲವು (2005) ಅವರಿಗೆ ನೀಡಿದ ಶ್ರದ್ಧಾಂಜಲಿಯಲ್ಲಿ ಆಗಿನ ಉಪಮುಖ್ಯಮಂತ್ರಿಗಳಾಗಿದ್ದ ತಾವು, ಅವರ ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಕೋನವು ಇಡೀ ಸಮಾಜಕ್ಕೆ ಮಾರ್ಗದರ್ಶಕವಾಗುವಂತಹದ್ದು ಎಂದು ಶ್ಲಾಘಿಸಿದರೆ, ಶಾಸನಸಭೆಯ ಸದಸ್ಯರಾಗಿದ್ದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರು, ವೈಜ್ಞಾನಿಕ ಮತ್ತು ವೈಚಾರಿಕ ವಿಚಾರಗಳನ್ನು ಸಂಶೋಧನೆ ಮಾಡತಕ್ಕಂಥ ಒಂದು ಸ್ವಾಯತ್ತ ಸಂಶೋಧನಾ ಸಂಸ್ಥೆಯನ್ನು ಕರ್ನಾಟಕ ಸರ್ಕಾರವು ಅವರ ಹೆಸರಿನಲ್ಲಿ ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದರು ಎಂಬ ಸಂಗತಿಯನ್ನು ಈ ಸಂದರ್ಭದಲ್ಲಿ ತಮ್ಮ ನೆನಪಿಗೆ ತರಲು ಇಚ್ಛಿಸುತ್ತೇನೆ.

7. ಹೀಗೆ ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಕರ್ನಾಟಕದಲ್ಲಿ ವಿಚಾರವಾದಿ ಆಂದೋಲನಕ್ಕೆ ಮಹತ್ವದ ಕೊಡುಗೆ ನೀಡಿರುವ ಡಾ.ಎಚ್ಚೆನ್ ಅವರ ಹೆಸರಿನಲ್ಲಿ ಒಂದು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವುದು ಕರ್ನಾಟಕವು ಅವರಿಗೆ ಸಲ್ಲಿಸುವ ಅತ್ಯಂತ ಕ್ರಿಯಾಶೀಲ ಸ್ಮಾರಕವೆಂದು ನಾವು ಭಾವಿಸುತ್ತೇವೆ. ಈ ಸಂಸ್ಥೆಗೆ ಎಚ್ಚೆನ್‌ರವರಿಗೆ ಪ್ರಿಯವಾದ ಹಾಗೂ ಸಾಮಾಜಿಕವಾಗಿ ಅರ್ಥಗರ್ಭಿತ ಸಾಂಕೇತಿಕ ಸಂದೇಶದಂತಿರುವ ಪ್ರಶ್ನಾರ್ಥ ಚಿಹ್ನೆಯನ್ನು ಲಾಂಛನವಾಗಿ ಬಳಸಬಹುದಾಗಿದೆ ಎಂಬ ಸಲಹೆಯನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ.

8. ಈ ಹಿನ್ನೆಲೆಯಲ್ಲಿ "ಡಾ.ಎಚ್ಚೆನ್ ವಿಚಾರವಾದಿ ಅಧ್ಯಯನ ಸಂಸ್ಥೆ"ಯನ್ನು ,ಅವರ ಹುಟ್ಟೂರಾದ ಹೊಸೂರಿನಲ್ಲಿ ಅಥವಾ ತಾಲ್ಲೂಕು ಕೇಂದ್ರವಾದ ಗೌರಿಬಿದನೂರಿನಲ್ಲಿ ಸ್ಥಾಪಿಸುವಂತೆ ಸರ್ಕಾರವು ನಿರ್ಧಾರವನ್ನು ಕೈಗೊಂಡು 2014-15ರ ಆಯವ್ಯಯದಲ್ಲಿ ಹಣವನ್ನು ನಿಗದಿಗೊಳಿಸುವ ಮೂಲಕ ರಾಜ್ಯವನ್ನು ಸಾಮಾಜಿಕವಾಗಿ ಗುಣಮುಖಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಮನವಿಯನ್ನು ವೈಯಕ್ತಿಕವಾಗಿ ಸಲ್ಲಿಸುತ್ತಿರುವೆನಾದರೂ ಇದನ್ನು ಸಾರ್ವಜನಿಕ ಹಿತಾಸಕ್ತಿಯ ಪ್ರಾತಿನಿಧಿಕ ಮನವಿಯಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.


ವಂದನೆಗಳೊಂದಿಗೆ,

ಬಿ.ಗಂಗಾಧರಮೂರ್ತಿ, ಗೌರಿಬಿದನೂರು

ರಾಮದಾಸನ ಲೈಂಗಿಕ ಕಿರುಕುಳ ಪ್ರಕರಣ ತನಿಖೆ ಆಗಬೇಕು

ಮಾಜಿ ಸಚಿವ ರಾಮದಾಸ್ ಅವರು ಲೈಂಗಿಕ ಕಿರುಕುಳ ೀಡುತ್ತಾ ಅನಧಿಕೃತವಾಗಿ ಮದುವೆಯಾಗಿದ್ದಾರೆಂದು ್ರೇಮಕುಮಾರಿಯವರು ಹೇಳುತ್ತಿದ್ದು ಈ ಕುರಿತ ಸಮಗ್ರ ನಿಖೆ ಆಗಬೇಕಿದೆ.

ಪ್ರೇಮಕುಮಾರಿಯವರೊಡನೆ ಸಂಬಂಧವನ್ನು ಾಮದಾಸ್‌ರವರು ಸ್ಪಷ್ಟ ಪಡಿಸಬೇಕಿತ್ತು, ಇಲ್ಲವೇ ಾನೂನಾತ್ಮಕವಾಗಿ ಎದುರಿಸಬೇಕಿತ್ತು, ಇವೆರಡನ್ನೂ ಮಾಡದೆ ್ಮಹತ್ಯೆಗೆ ಯತ್ನಿಸಿ ಅನುಕಂಪದ ಅಲೆಗಳ ನಡುವೆ ್ರಕರಣವನ್ನು ದಿಕ್ಕು ತಪ್ಪಿಸಲು ಪ್ರಯತ್ನಿಸುತ್ತಿರುವುದು



ತ್ಯಂತ ಬೇಜವಾಬ್ದಾರಿತನದ್ದು ಆಗಿದೆ. ಬಿಜೆಪಿ ಪಕ್ಷದೊಳಗಿನ ಜನ್‌ಗಟ್ಟಲೆ ಮಾಜಿ ಸಚಿವರು ಮತ್ತು ಹಾಲಿ ಶಾಸಕರುಗಳ ವರ್ತನೆಗಳು ಕೋಮುವಾದಿ ಪಕ್ಷ ಮಹಿಳೆಯರನ್ನು ರಿತಂತೆ ಹೊಂದಿರುವ ಕೀಳುಮಟ್ಟದ ಧೋರಣೆಯನ್ನು ್ಪಪಡಿಸುತ್ತದೆ. ಇದು ಬಿಜೆಪಿಯ ಪ್ರಧಾನ ಮಂತ್ರಿ ಭ್ಯರ್ಥಿಯೆನಿಸಿಕೊಂಡವರು ಇತ್ತೀಚೆಗಷ್ಟೇ ಪ್ರತಿಪಾದಿಸಿರುವ ವರ 'ಮಳೆಬಿಲ್ಲಿನ ಕಣ್ಣೋಟ'ದ ನಿಜಹೂರಣವನ್ನು ಕೂಡ ಯಲು ಮಾಡಿದೆ. ಈ ಕಣ್ಣೋಟದ 'ಏಳು ಆಧಾರ ಭಗಳಲ್ಲಿ' ಭಾರತದ ಸಾಂಪ್ರದಾಯಿಕ 'ಕುಟುಂಬ ೌಲ್ಯ'ವೂ ಒಂದು. ಆದರೆ ಈ 'ಕುಟುಂಬ ಮೌಲ್ಯ'ದ ಜವಾದ ಅರ್ಥ ಪುರುಷಪ್ರಧಾನ ಸಮಾಜ ವ್ಯವಸ್ಥೆಯನ್ನು ುತ್ತಷ್ಟು ಗಟ್ಟಿಗೊಳಿಸುವುದಲ್ಲದೆ ಬೇರೇನೂ ಅಲ್ಲ ಎಂಬ ೀಕೆಯನ್ನು ಬಿಜೆಪಿ ಮುಖಂಡರುಗಳ ಇಂತಹ ವರ್ತನೆಗಳು ುತ್ತೆ-ಮತ್ತೆ ದೃಢೀಕರಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಲೈಂಗಿಕ ಕಿರುಕುಳ ಮತ್ತು ಅನಧಿಕೃತ ುದುವೆ ಪ್ರಕರಣವನ್ನು ಸಮಗ್ರ ತನಿಖೆಗೆ ಒಳಪಡಿಸಬೇಕು ಾಗೂ ಕಾನೂನಾತ್ಮಕ ಹೋರಾಟ ಮಾಡುತ್ತಿರುವ ್ರೇಮಕುಮಾರಿಗೆ ಅಗತ್ಯ ರಕ್ಷಣೆಯನ್ನು ನೀಡಬೇಕೆಂದು ಒತ್ತಾಯಿಸುತ್ತಿದ್ದೇವೆ.

ಗೀತಾ ಮತ್ತು ಕೆ.ಎಸ್.ಲಕ್ಷ್ಮೀ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ,
ಕರ್ನಾಟಕ ರಾಜ್ಯ ಸಮಿತಿ

ಮಂಡ್ಯ ಸಾಹಿತ್ಯ ಜಾತ್ರೆಗೆ ಮೀರಾ ಗ್ರಹಣ



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಫೆ.15 ಮತ್ತು 16ರಂದು ಮಂಡ್ಯದಲ್ಲಿ ನಡೆಯಲಿರುವ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧಿಕಾರಿ ಹಾಗೂ ರಾಜಕಾರಣಿಗಳದ್ದೇ ದರ್ಬಾರ್ ನಡೆಯುವ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಸ್ಥಳೀಯ ಪ್ರತಿಭಾವಂತರಿಗೆ ಉತ್ತೇಜನ ನೀಡಬೇಕಿದ್ದ ಯುವಕವಿಗಳಿಗೆ ವೇದಿಕೆಯಾಗ ಬೇಕಿದ್ದ ಕನ್ನಡ ಸಾಹಿತ್ಯ ಸಮ್ಮೇಳನ ಜಿಲ್ಲಾಧ್ಯಕ್ಷೆ ಮೀರಾ ಶಿವಲಿಂಗಯ್ಯನ ದುರಾಲೋಚನೆಗೆ ಬಲಿಯಾಗುವ ಸಾಧ್ಯತೆಯೇ ಹೆಚ್ಚು.

ಹಿಂದೆಂದೂ ಜಿಲ್ಲಾ ಕಸಾಪ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳು ಹಾಗೂ ರಾಜಕಾರಣಿಗಳಿಗೆ ಮಣೆ ಹಾಕಿದ್ದಿಲ್ಲ. ಆದರೆ ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿ ಮಾಜಿ ಅಧ್ಯಕ್ಷ ಬಿ.ಶಿವಲಿಂಗಯ್ಯನ ಪತ್ನಿ ಮೀರಾ ಶಿವಲಿಂಗಯ್ಯ ಕಸಾಪ ಜಿಲ್ಲಾಧ್ಯಕ್ಷೆಯಾದ ನಂತರ ತಾಲ್ಲೂಕು ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತಿಗಳಿಗಿಂತ ಅಧಿಕಾರಿಗಳು ಹಾಗೂ ರಾಜಕಾರಣಿಗಳದ್ದೇ ದರ್ಬಾರ್ ಶುರುವಾಗಿದೆ. ಆರ್ಥಿಕವಾಗಿ ಸೊರಗಿದ್ದ ಜಿಲ್ಲಾ ಕಸಾಪಕ್ಕೆ ಹಣವಂತೆ ಮೀರಾ ಮೇಡಮ್ ಬಂದದ್ದರಿಂದ ಖುಷಿಯಾಗಿದ್ದ ಒಂದಷ್ಟು ಕಸಾಪ ಸದಸ್ಯರು ಕೂಡಾ ಈಗ ಮೀರಕ್ಕನ ಸರ್ವಾಧಿಕಾರಕ್ಕೆ ಲಬೊಲಬೋ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಆಕೆಯ ಅಂಧಾ ದರ್ಬಾರ್ ಬಗ್ಗೆ ಪ್ರಶ್ನೆ ಮಾಡಿದವರನ್ನು ಹೊರಕ್ಕೆ ದಬ್ಬುವ ಪ್ರಕ್ರಿಯೆ ಸುಗಮವಾಗಿ ನಡೆಯುತ್ತಿದೆ. ಈಗಾಗಲೇ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಲೋಕೇಶ್, ಪತ್ರಿಕಾ ಕಾರ್ಯದರ್ಶಿ ಎಂ.ಎಸ್.ಕೆಂಪೇಗೌಡ ಮೊದಲಾದವರು ರಾಜೀನಾಮೆ ಬಿಸಾಕಿ ತಮ್ಮ ಅಸಮಾಧಾನ ಹೊರಗೆಡವಿದ್ದರೂ ಮೀರಾ ಬಜಾರ್‌ನ ವಿಜೃಂಭಣೆ ಕುಂದಿಲ್ಲ.

ಹಣಬಲದ ಅಧ್ಯಕ್ಷೆ

ಜಿಲ್ಲಾ ಕಸಾಪ ಚುನಾವಣೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಹಣದ ಅಬ್ಬರದಿಂದ ಅರ್ಭಟಿಸಿದವರು ಮೀರಾ ಶಿವಲಿಂಗಯ್ಯ, ಎನ್‌ಜಿಓ ಹಣದಿಂದ ಸಂಘ-ಸಂಸ್ಥೆ ನಡೆಸುತ್ತಾ, ಪತಿಯ ಸಂಪಾದನೆಯಿಂದ ಕಟ್ಟಿಕೊಂಡ ಶಿಕ್ಷಣ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದ ಮೀರಾ ಶಿವಲಿಂಗಯ್ಯಗೆ ಅದ್ಯಾವ ಪುಣ್ಯಾತ್ಮ ಕಸಾಪ ಅಧ್ಯಕ್ಷರಾಗಲು ಐಡಿಯಾ ಕೊಟ್ಟನೋ ಗೊತ್ತಿಲ್ಲ. ನಯ-ನಾಜೂಕಿನಿಂದಲೇ ಅಧಿಕಾರಿಗಳು, ರಾಜಕಾರಣಿಗಳು, ತನ್ನ ಸುತ್ತಲಿನ ಜನರನ್ನು ಮೋಡಿ ಮಾಡಿ ಹಣಬಲದಿಂದ ಗೆದ್ದು ಅಧ್ಯಕ್ಷರಾದವರು ಈ ಮೀರಾ ಮೇಡಂ. ತಮ್ಮ ವಂಶಸ್ಥರ ಇತಿಹಾಸ ತಿಳಿಸುವ ಯಾರೂ ಓದದ 'ಆಲದ ಮರ' ಎಂಬ ಪುಸ್ತಕ ಬರೆದಿದ್ದು ಬಿಟ್ಟರೆ ಮೀರಾ ಮೇಡಮ್‌ರ ಸಾಹಿತ್ಯಸೇವೆ ಶೂನ್ಯ ಮಾತ್ರ. ಆಗಿನ ಶಾಸಕ ಎಂ.ಶ್ರೀನಿವಾಸ್ ಹಾಗೂ ಕರ್ನಾಟಕ ಸಂಘದ ಜಯಪ್ರಕಾಶ್‌ಗೌಡ ಕೂಡ ಮೀರಾರನ್ನು ಬೆಂಬಲಿಸಿದ್ದರಿಂದ ಆಕೆ ಅನಾಯಾಸವಾಗಿ .ಪ್ರೊ.ಮುದ್ದೇಗೌಡರನ್ನು ಮಣಿಸಿ ಕಸಾಪ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಅಟಕಾಯಿಸಿಕೊಂಡಿದ್ದರು.


ತಾನು ಅಧಿಕಾರದ ರುಚಿ ಕಾಣುತ್ತಿದ್ದಂತೆಯೇ ಪತಿ ಬಿ.ಶಿವಲಿಂಗಯ್ಯನನ್ನೂ ಅಧಿಕಾರಕ್ಕೆ ತರಬೇಕೆನ್ನುವ ಉಮೇದಿ ಆಕೆಗೆ ಶುರುವಾಗಿತ್ತು, ಅದಕ್ಕಾಗಿ ಆರಿಸಿಕೊಂಡಿದ್ದು ಒಕ್ಕಲಿಗರ ಸಂಘದ ಚುನಾವಣೆಯನ್ನು, ಒಕ್ಕಲಿಗ ಜನಾಂಗಕ್ಕೆ ಏನೊಂದು ಸಹಾಯ ಮಾಡದ ಬಿ.ಶಿವಲಿಂಗಯ್ಯ ವೋಟಿಗೆ 500 ಕೊಟ್ಟೇ ಚುನಾವಣೆಯಲ್ಲಿ ಗೆದ್ದು ಬಂದದಲ್ಲದೆ ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷನಾಗಿಯೂ ಠಳಾಯಿಸಿದ್ದಾನೆ. ಇತ್ತ ತಾನು ಕಸಾಪ ಅಧ್ಯಕ್ಷೆಯಾಗಲು ಸಹಕರಿಸಿದ್ದ ಮಾಜಿ ಶಾಸಕ ಎಂ.ಶ್ರೀನಿವಾಸ್‌ಗೇ ಟಾಂಗ್ ಕೊಟ್ಟ ಮೀರಾ, ತನ್ನ ಗಂಡನನ್ನು ಗೆಲ್ಲಿಸುವ ಭರಾಟೆಯಲ್ಲಿ ಅದೇ ಶ್ರೀನಿವಾಸ್‌ನನ್ನು ಸೋಲಿಸಿ ಮನೆಗಟ್ಟಿದ್ದಳು. ಮೀರಕ್ಕನ ಡಬಲ್‌ಗೇಮ್ ತಂತ್ರಗಾರಿಕೆ ಕಂಡ ಜಿಲ್ಲೆಯ ಜನ ಬಾಯಿ ಬಿಟ್ಟುಕೊಂಡು ನೋಡುವಂತಾಗಿದೆ. ಮೀರಾ ಮೇಡಂನ ಕಸುಬುದಾರಿಕೆ ಕಂಡು ಎಂ.ಶ್ರೀನಿವಾಸ್ ಕೂಡ ಒಂದುಕ್ಷಣ ಬೆಚ್ಚಿ ಬಿದ್ದಿರಬಹುದು.

ಅಧಿಕಾರಿಗಳ ಸಮ್ಮೇಳನ

ಜಿಲ್ಲಾ ಕಸಾಪ ಅಧ್ಯಕ್ಷೆಯಾಗಿ ಮೀರಾ ಶಿವಲಿಂಗಯ್ಯ ಕಳೆದ ವರ್ಷ ಕೆ.ಆರ್.ಪೇಟೆಯಲ್ಲಿ ನಡೆಸಿದ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಒಡ್ಡೋಲಗದಂತಾಗಿ ಜನರ ಅಸಮಾಧಾನಕ್ಕೆ ಕಾರಣವಾಗಿತ್ತು. ಈ ಸಲವೂ ಅದು ಪುನರಾವರ್ತನೆಯಾಗಲಿದೆ.

12ನೇ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯಲ್ಲಿರುವ ಸದಸ್ಯರೇ ಸಮ್ಮೇಳನದ ಬಗ್ಗೆ ಆರೋಪಗಳ ಸುರಿಮಳೆ ಸುರಿಸುತ್ತಿದ್ದಾರೆ. ಸಮ್ಮೇಳನದ ಬಗ್ಗೆ ಅಪಸ್ವರಗಳು ಕೇಳಿಬಂದ ನಂತರ, ಸ್ವಾಗತ ಸಮಿತಿ ಸದಸ್ಯರ ಸಭೆ ಕರೆದ ಮೀರಾ ಶಿವಲಿಂಗಯ್ಯನಿಗೆ ಸಂಘಟನೆಗಳ ಮುಖಂಡರು ಸರಿಯಾಗಿಯೇ ಬೆವರಿಳಿಸಿದ್ದಾರೆ. ದಸಂಸ ಮುಖಂಡ ಎಂ.ಬಿ.ಶ್ರೀನಿವಾಸ್ ಸನ್ಮಾನಿತರ ಪಟ್ಟಿಯಲ್ಲಿ ದಲಿತರಿಗೆ ಏಕೆ ಪ್ರಾತಿನಿಧ್ಯ ಕೊಟ್ಟಿಲ್ಲ ಎಂದಾಗ 'ತಪ್ಪಾಗಿದೆ ಈಗ ಕೊಡ್ತೀವಿ' ಎಂದು ಮೀರಕ್ಕ ಹಲ್ಲು ಕಿರಿದಿದ್ದರು.


ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸ್ಥಳೀಯರಿಗೆ ಆದ್ಯತೆ ಕೊಡಬೇಕು ಎಂಬ ನಿಯಮವನ್ನು ಕಸದಬುಟ್ಟಿಗೆ ಬಿಸಾಕಿರುವ ಮೀರಕ್ಕ ತನ್ನಿಷ್ಟದವರಿಗೆ ಮಣೆ ಹಾಕಿದ್ದಾರೆ. ಸ್ಥಳೀಯರನ್ನು ಬಿಟ್ಟು ಹೊರ ಜಿಲ್ಲೆಗಳ ಸುಮಾರು 20ಕ್ಕೂ ಹೆಚ್ಚು ಮಂದಿಗೆ ವೇದಿಕೆ ಕೊಟ್ಟಿದ್ದಾರೆ. ಮೀರಕ್ಕನ ಹೊಗಳುಭಟ್ಟರ ಪಡೆಯಲ್ಲಿರುವ ಹತ್ತಾರು ಮಂದಿಗೆ ಕೆ.ಆರ್.ಪೇಟೆ ಸಾಹಿತ್ಯ ಸಮ್ಮೇಳನದಲ್ಲೂ ಅವಕಾಶ ಕಲ್ಪಿಸಲಾಗಿತ್ತು, ಮಂಡ್ಯದಲ್ಲೂ ಅಂತವರಿಗೇ ಅವಕಾಶ ಕಲ್ಪಿಸಲಾಗಿದೆ.



ಪತಿ ಶಿವಲಿಂಗಯ್ಯನಿಗೂ ಮಣೆ

ಮೀರಕ್ಕ ಕಳೆದ ವರ್ಷ ಕೆ.ಆರ್.ಪೇಟೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ತನ್ನ ಪತಿ ಬಿ.ಶಿವಲಿಂಗಯ್ಯನಿಗೂ ವೇದಿಕೆ ಕಲ್ಪಿಸಿದ್ದರು. ಕಾವೇರಿ ವಿವಾದದ ಹಿನ್ನೆಲೆಯಲ್ಲಿ ಸರ್ಕಾರಕ್ಕೆ ಸಲಹೆ ಕೊಡುವಷ್ಟು ಮಟ್ಟಿಗೆ ಬೊಬ್ಬಿರಿಯುವ ಶಿವಲಿಂಗಯ್ಯ ಕೆ.ಆರ್.ಪೇಟೆ ಸಮ್ಮೇಳನದಲ್ಲೂ ಅದನ್ನೇ ವದರಿ ಕಾವೇರಿ ಹೋರಾಟಗಾರ ನಾನೇ ಎಂಬಂತೆ ಫೋಜು ಕೊಟ್ಟಿದ್ದ. ಈ ಬಾರಿ ಮಂಡ್ಯ ಸಮ್ಮೇಳನದಲ್ಲಿ ಒಕ್ಕಲಿಗರ ಸಂಘದ ನಿರ್ದೇಶಕರಾಗಿ ಆಯ್ಕೆಗೊಂಡು ಉಪಾಧ್ಯಕ್ಷರಾಗಿರುವ ಶಿವಲಿಂಗಯ್ಯನಿಗೆ ಯುವ ಸಕ್ರಿಯತೆ ಮತ್ತು ಆಧುನಿಕ ತಂತ್ರಜ್ಞಾನ ಕುರಿತ ವಿಚಾರ ಮಂಡಿಸಲು ಪತ್ನಿ ಮೀರಕ್ಕ ಅವಕಾಶ ಕೊಟ್ಟಿದ್ದಾರೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷನಾಗುವುದಕ್ಕೂ ಮುನ್ನ ಶಿವಲಿಂಗಯ್ಯನ ಹೆಸರಾಗಲಿ, ಅಲ್ಲಿಲ್ಲೋ ಪಿಇಎಸ್ ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದ ಮೀರಕ್ಕನ ಹೆಸರಾಗಲಿ ಜನರಿಗೆ ತಿಳಿದಿರಲೇ ಇಲ್ಲ. ಶಿವಲಿಂಗಯ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರಾಗಿದ್ದೇ ತಡ ಕಾಸು ಮಾಡಿಕೊಂಡು ಮಂಡ್ಯದ ತಾವರೆಗೆರೆಯಲ್ಲಿ ಶಿಕ್ಷಣ ಸಂಸ್ಥೆಗಳಿಗೆ ಜನ್ಮ ಕೊಟ್ಟಿದ್ದರು.



ಹಡಬೆ ದುಡ್ಡಿನಲ್ಲಿ ಮಂಡ್ಯದ ತುಂಬೆಲ್ಲ ಹತ್ತಾರು ಶಿಕ್ಷಣ ಸಂಸ್ಥೆ ಕಲ್ಯಾಣ ಮಂಟಪಗಳನ್ನು ಮಾಡಿಕೊಂಡು ರೊಕ್ಕ ಜೇಬಿಗಿಳಿಸುತ್ತಿರುವ ಶಿವಲಿಂಗಯ್ಯ ಸಭ್ಯಸ್ಥನಂತೆ ಯುವ ಜನತೆಗೆ ಅದಿನ್ನಾವ 'ಸಕ್ರಿ'ಯತೆಯ ಭಾಷಣ ಬಿಗಿದಾನು. ಅಧಿಕಾರದಲ್ಲಿದ್ದಾಗ ರೈತರಿಗೆ ಕಂಟಕವಾಗಿರುವ ಖೇಣಿಯ ಬಿಎಂಐಸಿ ಯೋಜನೆಯೊಂದಿಗೆ ಕೈಜೋಡಿಸಿದ್ದ ಶಿವಲಿಂಗಯ್ಯ ಒಕ್ಕಲಿಗರ ಚುನಾವಣೆಯಲ್ಲಿ ರೈತರ ಉದ್ಧಾರದ ಬಗ್ಗೆ ಉದ್ದುದ್ದ ಉದ್ಧಾರ ಉಚ್ಚರಿಸಿದ್ದು ಆತನ ಬೊಗಳೆತನಕ್ಕೆ ಸಾಕ್ಷಿ. ಬಿಎಂಐಸಿ ಮೂಲಕ ರೈತರನ್ನು ಒಕ್ಕಲೆಬ್ಬಿಸಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ಖಜಾನೆ ತುಂಬಿಸಿಕೊಳ್ಳಲು ಹವಣಿಸಿದ್ದ ಖೇಣಿಯೊಂದಿಗೆ ಕೈಜೋಡಿಸಿದ್ದ ಶಿವಲಿಂಗಯ್ಯ ಜನರಿಗೆ ತಿಳಿಸದೆ ಮಂಡ್ಯ, ಮೈಸೂರು, ಬೆಂಗಳೂರಿನಲ್ಲಿ ಸಾರ್ವಜನಿಕ ಸಭೆಗಳನ್ನು ಆಯೋಜಿಸಿದ್ದ. ಈ ಯೋಜನೆ ವಿರುದ್ಧ ಹೋರಾಡುತ್ತಿದ್ದ ಸಂಘಟನೆಗಳು ಅಲ್ಲಿಗೆ ಜನರೊಂದಿಗೆ ತೆರಳಿ ತರಾಟೆಗೆ ತೆಗೆದುಕೊಂಡು ಸಭೆ ನಡೆಯದಂತೆ ಮಾಡಿದ್ದರು. ಕೊನೆಗೆ ಜಿಲ್ಲಾಧಿಕಾರಿಗಳೇ ಸಭೆಯನ್ನು ರದ್ದು ಮಾಡುವ ಮೂಲಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಬಿ.ಶಿವಲಿಂಗಯ್ಯನಿಗೆ ಛೀಮಾರಿ ಹಾಕಿದ್ದರು.


2ನೇ ಬಾರಿ ನಡೆದ ಸಭೆಯಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಹಾಗೂ ಗೂಂಡಾಗಳನ್ನು ಕರೆತಂದು ಪ್ರತಿಭಟಿಸಲು ಹೋದ ಮುಖಂಡರನ್ನು ಬಂಧಿಸುವಂತೆ ಮಾಡಿದ್ದ. ಖೇಣಿ ಕಾವೇರಿ ನದಿಯಿಂದ ಎರಡು ಟಿಎಂಸಿ ನೀರು ಪಡೆದರೂ ಶಿವಲಿಂಗಯ್ಯ ವಿರೋಧಿಸಿರಲಿಲ್ಲ, ಬಿಎಂಐಸಿ ಯೋಜನೆ ಎಲ್ಲ ರೀತಿಯಲ್ಲೂ ನಿಯಮಾವಳಿ ಉಲ್ಲಂಘಿಸಿದ್ದರಿಂದ ಇಡೀ ಯೋಜನೆ ತಡೆಯಲು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧಿಕಾರವಿತ್ತು, ಆದರೆ ಖೇಣಿಯ ನೋಟಿನ ಮೇಲೆ ಕಣ್ಣಿಟ್ಟಿದ್ದ ಶಿವಲಿಂಗಯ್ಯ ಕೈಕಟ್ಟಿ ಕೂತಿದ್ದ. ಇಂತಹ ಶಿವಲಿಂಗಯ್ಯ ಈಗ ಕಾವೇರಿ ವಿಚಾರದಲ್ಲಿ ಉದ್ದುದ್ದ ಭಾಷಣ ಹೊಡೆಯುತ್ತಾನೆ, ಒಕ್ಕಲಿಗರ ಉದ್ಧಾರದ ಬಗ್ಗೆ ಮಾತನಾಡುತ್ತಾನೆ. ಇಂತಹ ಶಿವಲಿಂಗಯ್ಯನಿಗೆ ಪ್ರತಿ ಸಮ್ಮೇಳನದಲ್ಲೂ ಅವಕಾಶ ಕೊಟ್ಟು ಗಂಡನನ್ನು ಪೂರ್ಣ ಪ್ರಮಾಣದ ರಾಜಕಾರಣಿ ಮಾಡುವ ದೂರಾಲೋಚನೆ ಮೀರಾ ಮೇಡಂನದ್ದು.

30 ಲಕ್ಷ ಖರ್ಚು

ಸರ್ಕಾರದಿಂದ ಕೊಡುವ 5 ಲಕ್ಷವಲ್ಲದೆ ಮೀರಾ ದರ್ಬಾರ್‌ಗಾಗಿ ಉದ್ಯಮಿಗಳು, ರಾಜಕಾರಣಿಗಳಿಂದ 30 ಲಕ್ಷಕ್ಕೂ ಹೆಚ್ಚಿನ ಹಣವನ್ನು ಎತ್ತಲಾಗಿದೆ. ಇದಕ್ಕೆ ಪ್ರತಿಯಾಗಿ 'ಸಮಾಜಸೇವೆ'ಯ ಹೆಸರಲ್ಲಿ ಕಂಟ್ರಾಕ್ಟರ್, ಕಲ್ಯಾಣಮಂಟಪದ ಮಾಲೀಕರಿಗೆಲ್ಲ ಸನ್ಮಾನಕ್ಕೆ ಏರ್ಪಾಟು ಮಾಡಲಾಗಿದೆ. ಒಂದೆರಡು ಪುಸ್ತಕವನ್ನೂ ಪ್ರಕಟಣೆ ಮಾಡದ ಕವಿಯೊಬ್ಬನಿಗೆ, ಸಾಹಿತ್ಯದ ಹೆಸರಲ್ಲಿ ಕಸಾಪ ಪದಾಧಿಕಾರಿಯಾದವರಿಗೂ ಸನ್ಮಾನಿಸಲಾಗುತ್ತಿದೆ. ವಿಪರ್ಯಾಸವೆಂದರೆ, ಸ್ವತಃ ಮಹಿಳೆಯಾಗಿರುವ ಮೀರಾ ಶಿವಲಿಂಗಯ್ಯನಿಗೆ ಜಿಲ್ಲೆಯಲ್ಲಿ ಕಂಡದ್ದು ಕೇವಲ ಮೂವರು ಮಹಿಳಾ ಸಾಧಕಿಯರು ಮಾತ್ರ. ಮಕ್ಕಳಗೋಷ್ಠಿಯನ್ನು ಕಾಟಾಚಾರಕ್ಕೆಂಬಂತೆ ರೂಪಿಸಲಾಗಿದೆ. ಪತ್ರಿಕೋದ್ಯಮ, ಸಂಘಟನೆ, ಜನಪದ, ಯುವಜನಸೇವೆ ಕ್ಷೇತ್ರಗಳ ಸಾಧಕರನ್ನು ಕಡೆಗಣಿಸಿ ಸಮ್ಮೇಳನದ ಖರ್ಚಿಗೆ ಕಾಸು ಕೊಟ್ಟವರಿಗೆ ಮಣೆ ಹಾಕಿರುವುದು ದುರಂತ. ಒಟ್ಟಿನಲ್ಲಿ ಮೀರಾ ಮೇಡಮ್‌ನಿಂದಾಗಿ 12ನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ, ನಾಡು-ನುಡಿ, ನೆಲ-ಜಲದ ವಿಷಯವನ್ನು ಮುಂದಿಟ್ಟುಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುವ ಮತ್ತೊಂದು ಸಮ್ಮೇಳನವಾಗುವುದರಲ್ಲಿ ಸಂಶಯವೇ ಇಲ್ಲ, ಇಂತಹ ಸಮ್ಮೇಳನಗಳಿಂದ ಏನು ಪ್ರಯೋಜನ? ಉತ್ತರಿಸುವವರಿಗಾಗಿ ಈ ಪ್ರಶ್ನೆ ಕಾಯುತ್ತಿದೆ...

■ ಮಂಡ್ಯ ನಾಗೇಶ್

'ನನ್ನನ್ನು ವಂಚಿಸಿ, ಪೀಡಿಸಿ, ಭೋಗಿಸಿ ಬೀದಿಗೆ ದಬ್ಬಿದ' -ಪ್ರೇಮಕುಮಾರಿ



ಕಾಮ ಕಮಲದ ಮತ್ತೊಂದು ರಾದ್ಧಾಂತ



ರೇಪ್ ಕೇಸಿನ ಹಾಲಪ್ಪ ಪತ್ನಿ ಕೊಂದ ಗುಮಾನಿಗೆ ಗುರಿಯಾಗಿರುವ ಗುರು ಯಡಿಯೂರಪ್ಪ ನರ್ಸ್ ಜಯಲಕ್ಷ್ಮಿ ಜೊತೆ ಪಜೀತಿಗೆ ಬಿದ್ದ ರೇಣುಕಾಚಾರ್ಯ, ಪರಸ್ತ್ರೀ ಸಂಗಕ್ಕೆ ಬಿದ್ದು ಪತ್ನಿ ಸಾವಿಗೆ ಮೂಲನಾದ ರಘುಪತಿ ಭಟ್ಟ, ವಿಧಾನಸಭೆಯೊಳಗೇ ಬ್ಲೂಫಿಲ್ಮ್ ಶೋಕಿಗೆ ಬಿದ್ದ ಪಾಲೇಮಾರ್, ಸವದಿ ಮತ್ತು ಸಿ.ಸಿ. ಪಾಟೀಲರಂಥ ಮಂತ್ರಿಗಳು-

ರಾಮದಾಸ್ ಎಂಬ ಹೆಸರು ಈ ಸಾಲಿಗೀಗ ಹೊಸ ಸೇರ್ಪಡೆಯಷ್ಟೆ. ಬಿಜೆಪಿಯೊಳಗೆ ರಕ್ತವಾಗಿ ಹರಿಯುತ್ತಿರುವ ಹಾದರ ಮತ್ತು ಕಾಮ ವಿಕೃತಿಯ ಅಂತಃಸೆಲೆಗೆ ಬಲಿಯಾದ ಹೆಣ್ಣು ಮಕ್ಕಳೆಷ್ಟೋ. ಪ್ರೇಮಕುಮಾರಿ ಈಗಷ್ಟೇ ಲೇಟೆಸ್ಟ್ ಬಲಿಯಷ್ಟೆ. ಮಾಜಿ ಬಿಜೆಪಿ ಮಂತ್ರಿ ರಾಮದಾಸ್ ಸದ್ಯ ಮೈಸೂರಿನ ಬಿಜಿಎಸ್ ಅಪೊಲೋ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಪ್ರೇಮಕುಮಾರಿಯ ಬ್ಲಾಕ್‌ಮೇಲ್ ಭೀತಿಗೆ ಬಿದ್ದೇ ತಾನು ಆತ್ಮಹತ್ಯೆಗೆ ಯತ್ನಿಸಿದೆನೆಂದೂ, ನೇಣು ಬಿಗಿದುಕೊಂಡು ಸಾಯಲೆತ್ನಿಸಿ ಬಚಾವಾದೆನೆಂದೂ, ಬಿಗಿದ ಕುಣಿಕೆಗೆ ಕೊರಳ ಸುತ್ತ ರಕ್ತ ಹೆಪ್ಪುಗಟ್ಟಿದೆ ಎಂದೂ ಅಪೊಲೋ ಆಸ್ಪತ್ರೆಯ ಐಸಿಯು ವಾರ್ಡಿನಲ್ಲಿ ಸಾವುಬದುಕಿನ ಮಧ್ಯೆ ಹೆಣಗಾಡುತ್ತಿದ್ದಾನೆ. ಮೆದುಳಿಗೆ ಆಕ್ಸಿಜನ್ ಸರಬರಾಜಾಗುತ್ತಿಲ್ಲವಾದ್ದರಿಂದ ಬದುಕುವುದೇ ಕಷ್ಟ. ಇನ್ನೊಂದು ವಾರದವರೆಗೆ ಎಲ್ಲವೂ ಅನಿಶ್ಚಿತ; ಇತ್ಯಾದಿ ಗಳಿಗೆಗೊಮ್ಮೆ ರಾಮದಾಸ್ ದುರ್ಗತಿಯ ಕುರಿತಂತೆ ವೈದ್ಯಕೀಯ ವದಂತಿಗಳೂ ಪ್ರಕಟಗೊಳ್ಳುತ್ತಿವೆ.

ರಾಮದಾಸ್ ಆತ್ಮಹತ್ಯಾ ಯತ್ನದ ನಾಟಕದ ದೃಶ್ಯಾವಳಿಗಳೆಲ್ಲ ಒತ್ತಟ್ಟಿಗಿರಲಿ. ಈ ಪ್ರೇಮಕುಮಾರಿ ಯಾರು? ಆಕೆಗೂ ಮಾಜಿ ಮಂತ್ರಿ ರಾಮದಾಸ್‌ಗೂ ಸಂಬಂಧ ಕುದುರಿದ್ದೆಲ್ಲಿ? ಏಕೆ ಪ್ರೇಮಕುಮಾರಿಯ ಕಾಲಿಗೆ ರಾಮದಾಸ್ ಪೊಡಮುತ್ತಿದ್ದಾನೆ? ಅಜನ್ಮ ಬ್ರಹ್ಮಚಾರಿಯಾದ ರಾಮದಾಸ್ 'ಇದ್ದಕ್ಕಿದ್ದಂತೆ' ಪ್ರೇಮಕುಮಾರಿಯ ಮೂಲಕ ವ್ರತಭ್ರಷ್ಟನಾಗಿದ್ದೇಕೆ? ಈಗ ಇದ್ದಕ್ಕಿದ್ದಂತೆ ಮಾನ ಬೀದಿಗೆ ಬಿದ್ದಿದ್ದೇಕೆ? ಇತ್ಯಾದಿ ವಿವರಗಳೇ ಅಸಹ್ಯ ಮತ್ತು ಕ್ಯಾಕರಿಸುವಷ್ಟು ಹೀನಾಯ.

ಪ್ರೇಮಕುಮಾರಿ

ಮೂಲತಃ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಎಂ.ಸಿ. ಹಳ್ಳಿಯವಳಾದ ಪ್ರೇಮಕುಮಾರಿ ಇಬ್ಬರು ಮಕ್ಕಳ ತಾಯಿ. ಅಂಥಾ ಸುಂದರಿಯಲ್ಲದೆ ಹೋದರೂ ವ್ಯಕ್ತಿತ್ವದಲ್ಲಿ ಆಕರ್ಷಣೆಯಿಲ್ಲದಿಲ್ಲ. ವಯಸ್ಸಿನ್ನೂ ಮೂವತ್ತರ ಆಸುಪಾಸಾದರೂ ಕಂಗಳಲ್ಲಿ ಮಿಂಚಿದೆ, ಮಾತಿನಲ್ಲಿ ಮೊನಚಿದೆ. ವೃತ್ತಿಯಲ್ಲಿ ರೆವಿನ್ಯೂ ಇಲಾಖೆಯ ದ್ವಿತೀಯ ದರ್ಜೆ ಗುಮಾಸ್ತೆಯಾದ ಪ್ರೇಮಕುಮಾರಿಗೆ ಮಂತ್ರಿ ರಾಮದಾಸ್ ಪರಿಚಯವಾಗಿದ್ದು 2010ರಲ್ಲಿ, ಅದೂ ಮುಖ್ಯಮಂತ್ರಿ ಯಡಿಯೂರಪ್ಪನವರ ವಿಧಾನಸೌಧದ ಕಚೇರಿಯಲ್ಲಿ.

ಆ ಹೊತ್ತಿಗಾಗಲೇ ಪಜೀತಿಯೊಂದಕ್ಕೆ ಸಿಲುಕಿದ್ದ ಪ್ರೇಮಕುಮಾರಿಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಚೇರಿಯಿಂದ ವರ್ಗಾವಣೆ ಬೇಕಿತ್ತು, ಅದಕ್ಕೆ ಕಾರಣ ಆಕೆಗೆ ಗಂಟುಬಿದ್ದಿದ್ದ ಬಾಬು ಎಂಬ ವಿವಾಹಿತ ಶೋಕಿಲಾಲನ ಹಾವಳಿ. ಅದನ್ನು ಆಕೆಯ ಬಾಯಿಂದಲೇ ಕೇಳಬೇಕು.

....ನೋಡಿ ಸಾರ್ ನನಗೆ ರಾಮದಾಸ್ ಪರಿಚಯವಾಗಿದ್ದು ಮುಖ್ಯಮಂತ್ರಿ ಯಡಿಯೂರಪ್ಪನವರ ಆಫೀಸಿನಲ್ಲಿ, ಆಗ ನಾನು ಚಿಕ್ಕಮಗಳೂರು ತಹಶೀಲ್ದಾರ್ ಕಚೇರಿಯಲ್ಲಿ ಎಸ್‌ಡಿಸಿಯಾಗಿದ್ದೆ. ನನಗೆ ಈ ಕೆಲಸ ಸಿಕ್ಕಿದ್ದೇ ನನ್ನ ಪತಿಯ ಅಕಾಲಮೃತ್ಯುವಿನಿಂದಾಗಿ. ನಂದು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಎಂ.ಸಿ. ಹಳ್ಳಿ. ಪಿಯುಸಿಯಲ್ಲಿದ್ದಾಗಲೇ ಕಬ್ಬಿಗೆ ಪಿ ರುದ್ರೇಗೌಡರ ಜೊತೆ ಪ್ರೀತಿಯಿತ್ತು, ಇಬ್ಬರೂ ಲಿಂಗಾಯತರಾದ್ದರಿಂದ ಹಿರಿಯರನ್ನು ಒಪ್ಪಿಸಿಯೇ ಮದುವೆಯಾಗಿದ್ದೆವು. ಇಬ್ಬರು ಮಕ್ಕಳಿದ್ದರು.

ಆದರೆ ಬರುಬರುತ್ತ ಅತ್ತೆಯ ಕಾಟ ಅತಿಯಾಯಿತು.



ರಾಮದಾಸ್‌ನ ಗೋಕುಲ ಬಂಗಲೆ

ಇದರಿಂದಾಗಿ ಪ್ರತಿ ನಿತ್ಯ ಮನೆಯಲ್ಲಿ ಗಲಾಟೆಯಾಗೋದು. ಇದರಿಂದ ರೋಸತ್ತ ಗಂಡ ರುದ್ರೇಗೌಡ 2006ರಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಇನ್ನೇನು ಬೀದಿ ಪಾಲಾಗೋ ಹಂತದಲ್ಲಿದ್ದಾಗ ಸರ್ಕಾರ ನೆರವಿಗೆ ಬಂತು. ಅನುಕಂಪದ ಆಧಾರದ ಮೇಲೆ ನನಗೆ ತರೀಕೆರೆ ತಹಶೀಲ್ದಾರ್ ಕಚೇರಿಯಲ್ಲಿ ದ್ವಿತೀಯ ದರ್ಜೆ ಗುಮಾಸ್ತೆಯಾಗಿ ಕೆಲಸವೂ ಸಿಕ್ಕಿತ್ತು, ಗಂಡನ ಸಂಬಳದ ಪಿಎಫ್, ಗ್ರಾಚ್ಯುಯಿಟಿಯೆಲ್ಲ ನನಗೆ ಬಂದಿದ್ದರೂ ಇಬ್ಬರು ಮಕ್ಕಳಿದ್ದರಿಂದ ಬಂದ ದುಡ್ಡಿನಲ್ಲಿ ನಾನು ಅತ್ತೆಗೆಲ್ಲಿ ಕೊಡಲು ಸಾಧ್ಯವಿತ್ತು?

ಸಿಕ್ಕಿದ್ದು ರಾಮದಾಸ್!

ಇದರಿಂದ ಸಿಟ್ಟಿಗೆದ್ದ ಅತ್ತೆ ಗಂಡನನ್ನು ನಾನೇ ಕೊಲ್ಲಿಸಿದ್ದೀನಿ ಎಂದು ಕೇಸು ಮಾಡಿ ನನಗೆ ತೊಂದರೆ ಕೊಟ್ಟಳು. ಇದೆಲ್ಲವನ್ನೂ ಹೇಗೋ ಸಹಿಸಿಕೊಂಡಿದ್ದೆ, ಆದರೆ ಚಿಕ್ಕಮಗಳೂರಿಗೆ ವರ್ಗಾವಣೆಗೊಂಡು ಬಂದಮೇಲೆ ಹೊಸ ಸಮಸ್ಯೆ ಶುರುವಾಯಿತು. ನನಗೆ ಅತ್ತೆ ಕಡೆಯಿಂದ ಕಿರುಕುಳವಾಗುತ್ತಿತ್ತಲ್ಲ, ಅದರ ವಿರುದ್ಧ ಕೋರ್ಟು, ಕಚೇರಿ, ಪೊಲೀಸ್ ಸ್ಟೇಷನ್ನಿಗೆ ಅಂತ ಸಹಾಯಕ್ಕೆ ಬಂದವರು ಬಾಬು ಅನ್ನುವ ವಿಲೇಜ್ ಅಕೌಂಟೆಂಟ್.

ಅದೇನಾಯಿತೋ ಬಾಬು ಪತ್ನಿ ಮಂಜುಳಾ, ಆಕೆಯ ತಂದೆ ಹುಲಿಯಪ್ಪ ಅಣ್ಣ ನವೀನ್ ಮುಂತಾದವರೆಲ್ಲ ಸೇರಿಕೊಂಡು ನಾನು ಮತ್ತು ಬಾಬು ಸೇರಿಕೊಂಡು ಮಂಜುಳಾಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದೇವೆಂದು ಸುಳ್ಳು ಕೇಸು ಹಾಕಿಸಿ ಮತ್ತೆ ತೊಂದರೆ ಕೊಟ್ಟರು. ಬಾಬು ನನ್ನ ಮನೆಗೆ ಬಂದಿದ್ದನ್ನೇ ಕಾದು ಹೊರಗಿನಿಂದ ಬಾಗಿಲು ಹಾಕಿ ಇಲ್ಲಸಲ್ಲದ ಆರೋಪ ಹೊರಿಸಿಬಿಟ್ಟರು. ಚಿಕ್ಕಮಗಳೂರಿನ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಸುಳ್ಳು ಕೇಸು ದಾಖಲಾಗಿ ನನ್ನನ್ನು ಬಂಧಿಸಿದಂತೆ ತೋರಿಸಿ ಕೆಲಸದಿಂದ ಸಸ್ಪೆಂಡ್ ಕೂಡ ಮಾಡಿಸಿಬಿಟ್ಟರು.

ಮೊದಲೇ ನೊಂದಿದ್ದ ನಾನು ನನಗೆ ಪರಿಚಿತರಾಗಿದ್ದವರೊಬ್ಬರ ಮೂಲಕ ಮುಖ್ಯಮಂತ್ರಿ ಯಡಿಯೂರಪ್ಪನವರ ಬಳಿ ನ್ಯಾಯ ಕೋರಿ ಅರ್ಜಿ ಸಲ್ಲಿಸಲು ಬಂದಾಗಲೇ ಪರಿಚಿತರಾದವರು ರಾಮದಾಸ್. ಆ ಹೊತ್ತಿಗೆ ಅವರು ಸಂಸದೀಯ ಕಾರ್ಯದರ್ಶಿಯಾಗಿದ್ದರು. ಮೊದಮೊದಲು ಪ್ರೀತಿಯಿಂದಲೇ ಮಾತಾಡಿಸುತ್ತಿದ್ದರು. ನನ್ನೆಲ್ಲಾ ಕಷ್ಟವನ್ನೂ ಹೇಳಿಕೊಂಡೆ. ನೀನೇನೂ ಯೋಚನೆ ಮಾಡ್ಬೇಡ ಎಲ್ಲಾ ಸರಿ ಮಾಡ್ತೀನಿ ಎಂದು ರಾಮದಾಸ್ ಕೊಟ್ಟ ಭರವಸೆಯನ್ನು ನಂಬಿಬಿಟ್ಟೆ. ಅದಕ್ಕೆ ತಕ್ಕಂತೆ ನನ್ನನ್ನು ರಾಮದಾಸ್ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಹಾಕಿಸಿಕೊಂಡರು. ಇದಾಗಿ ಮೂರೇ ತಿಂಗಳಿಗೆ ರಾಮದಾಸ್ ವೈದ್ಯಕೀಯ ಶಿಕ್ಷಣ ಸಚಿವರಾಗಿ ನೇಮಕಗೊಂಡಿದ್ದರಿಂದ ನನಗೆ ಮತ್ತಷ್ಟು ಬಲ ಬಂದಂತಾಯ್ತು. ಪದೇ ಪದೇ ನನಗೆ ಫೋನ್ ಮಾಡುತ್ತಿದ್ದರು. ಆಗಾಗ ಕರೆಸಿಕೊಂಡು ರೆಸಾರ್ಟುಗಳಿಗೆ ಊಟಕ್ಕೆಂದು ಕರೆದೊಯ್ಯುತ್ತಿದ್ದರು. ಮೈಸೂರಿನ ದಟ್ಟಗಳ್ಳಿ ಏರಿಯಾದ ಕನಕದಾಸ ನಗರದಲ್ಲಿ ಬಾಡಿಗೆ ಮನೆಯೊಂದನ್ನು ಮಾಡಿದ್ದೆ. ಮಕ್ಕಳನ್ನು ಶಾಲೆಗೆ ಸೇರಿಸಿದ್ದೆ.

ಮಂತ್ರಿ ಛೇಂಬರಿನಲ್ಲೇ...!

ಇದಾಗಿ ಎರಡೇ ತಿಂಗಳಿಗೆ ಅವರೇ ನಿಂತು ನನ್ನನ್ನು ಮೈಸೂರು ಮಹಾನಗರ ಪಾಲಿಕೆಗೆ ಹಾಕಿಸಿಕೊಂಡರು. ಎದುರುಗಡೆಯ ಕಾಡಾ ಕಚೇರಿಯಲ್ಲೇ ಮಂತ್ರಿಯವರ ಕಚೇರಿಯಿತ್ತು, ಕಚೇರಿಗೆ ಬಂದಿದ್ದೇ ನನ್ನನ್ನು ಕಳಿಸಿಕೊಡುವಂತೆ ನನ್ನ ಮೇಲಧಿಕಾರಿಗಳಿಗೆ ರಾಮದಾಸ್ ಆದೇಶಿಸುತ್ತಿದ್ದರು. ಅದರಂತೆ ನಾನು ಹಾಜರಾತಿಗೆ ಸಹಿ ಹಾಕಿದ್ದೇ ಮಂತ್ರಿಗಳ ಆಫೀಸಿಗೆ ಹೋಗುತ್ತಿದ್ದೆ. ಮೊದಮೊದಲು ಅದೂ-ಇದೂ ಅಂತ ಮಾತಿಗೆಳೆದವರು ಕಾಲಕ್ರಮೇಣ ನನ್ನ ವೈಯಕ್ತಿಕ ವಿಷಯಗಳನ್ನು ಕೆದಕುತ್ತಿದ್ದರು.

ಅದೊಮ್ಮೆ ಮಧ್ಯಾಹ್ನದ ಊಟಕ್ಕೆಂದು ನನ್ನನ್ನು ಕರೆಸಿಕೊಂಡವರೇ ಏಕಾಏಕಿ ನನ್ನ ಮೈಮೇಲೆ ಕೈಯಿಟ್ಟರು. ಮೊದಲೇ ಮಂತ್ರಿ. ಇಷ್ಟೆಲ್ಲಾ ನೆರವಾಗಿದ್ದಾರೆ. ನಾನು ತಾನೇ ಏನೆಂದು ಪ್ರಶ್ನಿಸಲಿ?

ಇದು ಹೀಗೇ ಮುಂದುವರಿಯಿತು. ಏನು ನಡಿಬಾರದಿತ್ತೋ ಅದು ಕೂಡ ನಡೆದುಹೋಗಿತ್ತು, ಈ ಬಗ್ಗೆ ಪ್ರಶ್ನಿಸಿದರೆ ನೋಡು ದುಡುಕಬೇಡ, ನಿನಗೆ ಬೇರೆ ಆಸರೆಯಿಲ್ಲ, ನನಗಿನ್ನೂ ಮದುವೆಯಿಲ್ಲ, ಖಂಡಿತ ನಿನ್ನ ಕೈ ಬಿಡೋಲ್ಲ, ಬಾಳು ಕೊಡ್ತೀನಿ ಎಂದೆಲ್ಲ ನಂಬಿಸಿಬಿಟ್ಟರು. ಈ ರೀತಿ ನಂಬಿಸಿ ಮೋಸ ಮಾಡ್ತಾರೆ ಅಂತ ಗೊತ್ತಿದ್ದರೆ ನಾನ್ಯಾಕೆ ಮೈ ಒಪ್ಪಿಸುತ್ತಿದ್ದೆ? ಹೇಗೂ ಅವರಿಗೆ ಮದುವೆಯಿಲ್ಲವಾದ್ದರಿಂದ ಇವತ್ತಲ್ಲ ನಾಳೆ ಕೈಹಿಡಿಯುತ್ತಾರೆಂದೇ ನಂಬಿಕೊಂಡಿದ್ದೆ.

ಬರುಬರುತ್ತ ಹೊತ್ತಲ್ಲದ ಹೊತ್ತಲ್ಲಿ ನನ್ನನ್ನು ತಮ್ಮ ಕಚೇರಿಗೆ ಕರೆಸಿಕೊಳ್ಳುತ್ತಿದ್ದರು. ಬೇಕೆಂದಾಗೆಲ್ಲಾ ಬಳಸಿಕೊಂಡರು. ಒಪ್ಪದೆ ನನಗೆ ಬೇರೆ ದಾರಿಯೇ ಇರಲಿಲ್ಲ, ಹೇಗೂ ಬಾಳು ಕೊಡುತ್ತೇನೆಂದು ಮಾತು ಕೊಟ್ಟಿದ್ದರಲ್ಲ.

ತುಮಕೂರಿಗೆ ಎತ್ತಂಗಡಿ

ಹೀಗೆ ಒಂದು ವರ್ಷ ಕಳೆದುಹೋಯಿತು ನೋಡಿ. ಬರುಬರುತ್ತ ಅವರ ವರ್ತನೆಯೇ ಬದಲಾಗತೊಡಗಿತು.

ಕರಂದ್ಲಾಜೆಯ ಮಹಿಳಾ ಕಾಳಜಿ ಮತ್ತು ಬಿಜೆಪಿ ಭಗಿನಿಯರ ದುರ್ಗತಿ!



ಯಾರೋ ಅನಾಮಿಕ ಯುವತಿಯೊಬ್ಬಳ ಮೇಲೆ ಕಿಡಿಗೇಡಿಗಳ ಗುಂಪೊಂದು ಅತ್ಯಾಚಾರವೆಸಗಿತೆಂದು ಮಹಾನ್ ಮಹಿಳಾ ಹೋರಾಟಗಾರ್ತಿಯಂತೆ ಪತ್ರಿಕಾಗೋಷ್ಠಿ ಕರೆದು ಬೊಬ್ಬೆಯಿಟ್ಟವರು ಬಿಜೆಪಿಯ ಅಧಿನಾಯಕಿ ಶೋಭಾ ಕರಂದ್ಲಾಜೆ.

ನಿನ್ನೆಮೊನ್ನೆಯ ತನಕ ಮಹಿಳೆಯರ ಮೇಲಿನ ದೌರ್ಜನ್ಯಗಳ ಕುರಿತಂತೆ ಕರಂದ್ಲಾಜೆ ನೀಡಿದ ಹೇಳಿಕೆಗಳು, ನಡೆಸಿದ ಪತ್ರಿಕಾಗೋಷ್ಠಿಗಳದ್ದೇ ಪ್ರತ್ಯೇಕ ಪಟ್ಟಿಯಿದೆ. ಏಕೆಂದರೆ ಬಿಜೆಪಿ ಮಟ್ಟಿಗೆ ಸದ್ಯ ಏಕಮೇವಾದ್ವಿತೀಯ ವೀರವನಿತೆಯೆಂದರೆ ಅದು ಕರಂದ್ಲಾಜೆಯೆ. ವಿಪರ್ಯಾಸವೆಂದರೆ ತನ್ನದೇ ಪಕ್ಷದ ಮಹಿಳಾ ಕಾರ್ಯಕರ್ತೆಯರು, ಬಿಜೆಪಿ ನಾಯಕರ ಪ್ರೇಯಸಿ, ಪತ್ನಿಯರು ಮತ್ತು ಮಹಿಳಾ ಮೋರ್ಚಾದ ಪದಾಧಿಕಾರಿಗಳು ಬಿಜೆಪಿ ನಾಯಕರ ಕೀಚಕ ಚೇಷ್ಟೆಗೆ ಬಲಿಯಾದ ಪ್ರಸಂಗಗಳಲ್ಲಿ ಶೋಭಕ್ಕನ ಮಹಿಳಾ ಹೋರಾಟದ ಬಾಯಿ ಕಟ್ಟುತ್ತದೆ.

ರಘುಪತಿ ಭಟ್ಟನ ಪತ್ನಿಯ ನಿಗೂಢ ಸಾವು, ಹಾಲಪ್ಪನ ವಿಕೃತಿಗೆ ಬಲಿಯಾದ ಹೆಣ್ಣು, ರೇಣುಕಾಚಾರ್ಯನ ವಿಕೃತಿಗೆ ಹೈರಾಣಾದ ಜಯಲಕ್ಷ್ಮಿ, ನಿರಾಣಿಯಿಂದಾಗಿ ನಿರಾಶ್ರಿತರಾದ ಮಹಿಳೆಯರು ಮತ್ತು ಈಗ ರಾಮದಾಸ್‌ನ ಪಶುವಾಂಛೆಗೆ ಸಿಲುಕಿರುವಾಕೆ; ಇತ್ಯಾದಿಗಳ್ಯಾರೂ ಹೊರಗಿನವರಲ್ಲ, ಒಂದಲ್ಲ ಒಂದು ರೂಪದಲ್ಲಿ ಬಿಜೆಪಿಗೆ ಸೇರಿದವರು ಬಿಜೆಪಿಯ ಅವಲಂಬಿತರು. ಕರಂದ್ಲಾಜೆಯ ಮಹಿಳಾ ಕಾಳಜಿಗೆ ಈ ಮಹಿಳೆಯರ್ಯಾರೂ ಕಾಣಿಸುವುದೇ ಇಲ್ಲ, ಬಿಜೆಪಿಯ ಬೇರೆ ಯಾವೊಬ್ಬ ಮಹಿಳಾ ನಾಯಕಿಯೂ ಈ ಬಗ್ಗೆ ಚಕಾರವೆತ್ತುವುದಿಲ್ಲ.

ತಮಾಷೆಯೆಂದರೆ ಇಷ್ಟಾಗಿಯೂ ಬಿಜೆಪಿ ನಾಯಕರಾಗಲಿ, ಸಂಘ ಪರಿವಾರದವರಾಗಲಿ ಭಾರತೀಯ ಸಂಸ್ಕೃತಿಯ ಮಂತ್ರ ಜಪಿಸುವುದನ್ನು ನಿಲ್ಲಿಸುವುದಿಲ್ಲ, ಹೇಳುವುದು ಆಚಾರ ಮಾಡುವುದು ಅನಾಚಾರ?

ಮವ್ವಮ ಕೂಡ ಕಮ್ಮಿಯಾಗತೊಡಗಿತ್ತು. ಅಷ್ಟಾಗ್ಯೂ ವು ಸೊಹಿಕೊಂಡಿದ್ದೆ. ಮಂತ್ರಿಯಾದ್ದರಿಂದ ಕೆಲಸದ ತ್ತಡ ಮಾಮೂಲಿಯೆಂದೇ ಲೆಕ್ಕ ಹಾಕಿದ್ದೆ. ಆದರೆ ಅವರ ರಿತಂತೆ ಚಿತ್ರವಿಚಿತ್ರ ಸಂಗತಿಗಳು ನನ್ನ ಗಮನಕ್ಕೆ ರತೊಡಗಿದ್ದು 2011ರಲ್ಲಿ. ನಾನೊಬ್ಬಳೇ ಅಲ್ಲ ಅವರಿಗೆ ನ್ನಂತೆ ಇನ್ನೂ ಅನೇಕ ಹೆಂಗಸರಿದ್ದಾರೆಂಬ ಸಂಗತಿ ಂದೊಂದಾಗಿ ಗೊತ್ತಾಗತೊಡಗಿತ್ತು. ಅವರಿವರ ಬಳಿ ಟ್ಟ ಹೇಳಿಕೊಂಡೆ. ನನ್ನ ಕೈಬಿಡದಂತೆ ಪರಿಪರಿಯಾಗಿ ಳಿಕೊಂಡೆ. ಯಾವತ್ತು ಮದುವೆಯಾಗುವಂತೆ ನನ್ನ ತ್ತಾಯ ಹೆಚ್ಚಾಯಿತ್ತೋ ರಾಮದಾಸ್ ಎಂಥಾ ಚ್ಚಿಳಿದರೆಂದರೆ ಎಂಟೇ ತಿಂಗಳಿಗೆ ನನ್ನನ್ನು ಮೈಸೂರಿನಿಂದ ಮಕೂರಿಗೆ ವರ್ಗಾಯಿಸಿಬಿಟ್ಟರು!

ಅಲ್ಲಿಗೆ ನನಗೆಂಥಾ ಗತಿ ಕಾದಿದೆಯೆಂಬುದು ರಂಟಿಯಾಗಿ ಹೋಗಿತ್ತು. ಮಕ್ಕಳ ಓದು, ಕೊಟ್ಟ ಮಾತು, ಗಿದ್ದ ಕಷ್ಟ ಯಾವುದನ್ನೂ ಲೆಕ್ಕಿಸದೆ ರಾಮದಾಸ್ ನನ್ನನ್ನು ಡಿಸುವುದೊಂದನ್ನೇ ಉದ್ದೇಶವಾಗಿಸಿಕೊಂಡಿದ್ದಾರೆಂದು ತ್ತಾಗಿದ್ದೇ ಒಮ್ಮೆ ಆತ್ಮಹತ್ಯೆಗೂ ಯತ್ನಿಸಿದ್ದೆ. ಅವತ್ತು ವರೇ ಬಂದು ನನ್ನೆದುರು ಕಣ್ಣೀರಿಟ್ಟು ನನ್ನ ಕಷ್ಟ ಅರ್ಥ ಆಗ್ತೋ, ಎಲೆಕ್ಷನ್ ಬೇರೆ ಹತ್ತಿರ ಬರ್ತಿದೆ, ಅಡ್ಜಸ್ಟ್ ಡ್ಕೋ, ಎಲ್ಲಾ ಸರಿಹೋಗ್ತದೆ ಎಂದು ಬೇಡಿಕೊಂಡಿದ್ದರು. ಸರು ಕೆಡಬಾರ್ದು, ಎಲೆಕ್ಷನ್ನಿನಲ್ಲಿ ಗೆಲ್ಲಬೇಕು ಎಂದು ರೀ ನೋವು ನುಂಗಿಕೊಂಡಿದ್ದೆ.


ಆದರೆ ಚುನಾವಣೆ ಮುಗಿದನಂತರ ಅವರ ವರ್ತನೆ ಷ್ಟು ಕಟುವಾಯಿತು. ಫೋನ್ ಮಾಡೋದನ್ನೇ ಸಿಬಿಟ್ಟರು. ನಾನೇ ಫೋನ್ ಮಾಡಿದಾಗಲೂ ಕಾಲ್ ಸೀವ್ ಮಾಡುತ್ತಿರಲಿಲ್ಲ. ಕಂಡಕಂಡೋರ ಬಳಿ ಕಷ್ಟ ಹೇಳಿಕೊಂಡು ಕಣ್ಣೀರಿಟ್ಟೆ. ಮನಸ್ಸು ಕರಗಲಿಲ್ಲ. ಅಂತಿಮವಾಗಿ ನಾನೇ ಧೈರ್ಯ ಮಾಡಿ ಇಲ್ಲಿಗೆ ಎರಡು ತಿಂಗಳ ಹಿಂದೆ ನನ್ನ ಬಟ್ಟೆಬರೆ ಸಾಮಾನುಗಳನ್ನೆಲ್ಲ ತೆಗೆದುಕೊಂಡಿದ್ದೇ ನೇರವಾಗಿ ಗೋಕುಲದ ರಾಮದಾಸ್ ಮನೆಗೇ ಹೋಗಿ ಕೂತುಕೊಂಡೆ.

ಆವತ್ತು ನನ್ನ ನಾಯಿಪಾಡು ಹೇಗಿತ್ತೆಂದರೆ ಏಕಾಏಕಿ ನುಗ್ಗಿ ಬಂದವನೇ ರಾಮದಾಸ್ ತಮ್ಮ ಶ್ರೀಕಾಂತ್ ನನ್ನನ್ನು ಜುಟ್ಟು ಹಿಡಿದು ದರದರನೇ ಎಳೆದೊಯ್ದಿದ್ದೇ ಮನೆಯಿಂದ ಹೊರದಬ್ಬಿಬಿಟ್ಟ. ಇನ್ನೆಲ್ಲಿ ಹೊಡೆಯುತ್ತಾರೋ ಎಂದು ನಾನು ತಂದ ಬಟ್ಟೆಬರೆಯನ್ನೆಲ್ಲ ಎತ್ತಿಕೊಂಡು ವಾಪಸ್ಸಾದೆ. ಬ್ಲಾಕ್‌ಮೇಲು ಮಾಡೋ ಉದ್ದೇಶ ನನಗಿದ್ದರೆ ಕೇಳಿದಷ್ಟು ದುಡ್ಡು ಕೊಡುತ್ತಿರಲಿಲ್ಲವೆ? ಮನೆ ಕೊಡಿಸ್ತಿದ್ದ, ದುಡ್ಡೂ ಕೊಡುತ್ತಿದ್ದ; ನನ್ನ ಪಾಡಿಗೆ ನಾನಿದ್ದು ಬಿಟ್ಟಿದ್ದರೆ ದುಡ್ಡು ಮನೆ ಎಲ್ಲಾ ಸಿಗುತಿತ್ತಲ್ಲ, ನನಗೆ ಬೇಕಿದ್ದದ್ದು ನ್ಯಾಯ ಮಾತ್ರ.

ಇವತ್ತು ಅವರೇ ದುಡ್ಡು ಕೊಟ್ಟು ನನ್ನ ವಿರುದ್ಧ ಇಲ್ಲಸಲ್ಲದ ಅಪಪ್ರಚಾರ ಮಾಡಿಸುತ್ತಿದ್ದಾರೆ. ನ್ಯಾಯ ಕೇಳಿದ್ದೇ ನನ್ನ ತಪ್ಪೇ? ಯಾವ ಹೆಂಗಸು ತಾನೇ ಹೀಗೆಲ್ಲ ಮರ್ಯಾದೆ ಕಳಕೊಳ್ಳಲು ಇಷ್ಟ ಪಡುತ್ತಾಳೆ ನೀವೇ ಹೇಳಿ. ಕೊಟ್ಟ ಮಾತು ಉಳಿಸಿಕೊಂಡು ನನಗೆ ಬಾಳು ಕೊಟ್ಟಿದ್ದರೆ ನಾನ್ಯಾಕೆ ಮೀಡಿಯಾಗಳೆದುರು ಕಣ್ಣೀರಿಡುತ್ತಿದ್ದೆ...!

ಇದು ಪ್ರೇಮಕುಮಾರಿಯ ಮಾತುಗಳು. ರಾಮದಾಸ್ ಛೇಲಾಗಳೇ ಹೇಳುವಂತೆ ಇದನ್ನು ಬ್ಲಾಕ್‌ಮೇಲ್ ಎಂದೇ ಇಟ್ಟುಕೊಳ್ಳೋಣ. ಹಾಗಂತ ರಾಮದಾಸ್ ಏನು ಸತ್ಯ ಹರಿಶ್ಚಂದ್ರನೇ? (ಬಾಕ್ಸ್ ನೋಡಿ) ಅಂಥಾದ್ದೇನೂ ಇಲ್ಲವೆಂದರೆ ಧೈರ್ಯವಾಗಿ ಈಕೆಯೆದುರೇ ಬಂದು ಪ್ರಶ್ನಿಸಬಹುದಿತ್ತಲ್ಲವೇ? ಅದು ಬಿಟ್ಟು ಹೇಡಿಯಂತೆ ಆತ್ಮಹತ್ಯೆಯ ನಾಟಕವಾಡುತ್ತಾನೆಂದರೆ ಏನರ್ಥ?

● ರಾ. ಸೋಮನಾಥ್










ನಮೋ ಮೋದಿಯ ಮಾನಸಿ ಪ್ರಣಯ ಪ್ರಸಂಗ

ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಮತ್ತದೇ ಅಂತರ್ ಕಚ್ಚಾಟಕ್ಕಿಳಿದ ರಾಜ್ಯ ಬಿಜೆಪಿ ನಾಯಕರು ಈ ಬಾರಿ ನಾವೇ ಗೆಲ್ಲೋದು, ಬಿಜೆಪಿಗೆ 20 ಸೀಟು ಗ್ಯಾರಂಟಿ, ಮೋದಿ ಮಾಯೆಯೇ ಗೆಲುವಿನ ಮೂಲ ಎಂದೆಲ್ಲ ಬೊಬ್ಬೆ ಹಾಕುತ್ತಿದ್ದಾರಲ್ಲವೇ?

ಬಹುಶಃ ಈ ಚಡ್ಡಿವೀರರಿಗೆ ಒಂದು ಸಂಗತಿ ಗೊತ್ತಿರಲಿಕ್ಕಿಲ್ಲ. ಮೋದಿ ವರ್ಚಸ್ಸಿಗೆ ಸರಿಸಮನಾದ ಪ್ರತಿ ಕಳಂಕವೊಂದು ಬಿಜೆಪಿಯ ಸಕಲ ಸಾಧನೆಗಳನ್ನೂ ಒಳಗಿಂದೊಳಗೇ ಮಣ್ಣುಗೂಡಿಸಲಿದೆ. ಅದು ಬಿಜೆಪಿ ನಾಯಕರ ನಿರ್ಲಜ್ಜ ಕಾಮ ಮತ್ತು ಪ್ರಚ್ಛನ್ನ ಹಾದರ!

ರಾಜ್ಯ ನಾಯಕರಾದ ಯಡ್ಡಿ, ಹಾಲೇಮಾರ್, ಸವದಿ, ಸಿ.ಸಿ. ಪಾಟೀಲ್, ಹಾಲಪ್ಪ ನಿರಾಣಿ, ರೇಣುಕಾಚಾರ್ಯ ರಘುಪತಿ ಭಟ್ಟ ಮತ್ತು ಈಗ ರಾಮದಾಸ್ ಮಾತ್ರವಲ್ಲದೆ ಬಿಜೆಪಿಯ ಸೋಕಾಲ್ಡ್ ರಾಷ್ಟ್ರ ನಾಯಕರೇ ಲೈಂಗಿಕ ಪಜೀತಿಗೆ ಬಿದ್ದು ಮುಖ ಕೆಡಿಸಿಕೊಂಡಿದ್ದಾರೆ. ರಾಜ್ಯ ಬಿಜೆಪಿಯ ಮಟ್ಟಿಗೆ ಅನಂತಾನಂತ ನಾಯಕನಂತಿರುವ ಕುಮಾರ ಪುಂಗವನ ಕಾಮಕಾಂಡ ಬಯಲಾಗಿದ್ದು ನೀರಾ ರಾಡಿಯಾ ಎಂಬ ಕುಖ್ಯಾತ ಹೆಂಗಸೊಬ್ಬಳ ಮೂಲಕ. ಎಲ್ಲಿ ನೀರಾ ರಾಡಿಯಾ ಮತ್ತು ತನ್ನ ಅನೈತಿಕ ಸಂಬಂಧ ಬಯಲಾಗುತ್ತೋ ಎಂದು ಹುಷಾರಾದ ನಾಯಕ ಆಕೆಯನ್ನು ಪೇಜಾವರ ಸ್ವಾಮಿಯ ಸನ್ನಿಧಿಗೊಪ್ಪಿಸಿದ್ದೇ ಹೊಸ ಟ್ರಸ್ಟ್‌ನ ಅಧಿಕಾರ ಕೊಟ್ಟು ಬಾಯಿ ಮುಚ್ಚಿಸಿದ್ದು ಹಳೇ ಕತೆ.

ಇನ್ನು ಪ್ರಧಾನಿ ಅಭ್ಯರ್ಥಿ ಮೋದಿಯದ್ದೂ ಇದೇ ಕತೆ. ಬೆಂಗಳೂರಿನ ಮಾನಸಿ ಎಂಬ ಮಾಯಾಂಗನೆಯ ಮೋಹಕ್ಕೆ ಸಿಲುಕಿದ ಮೋದಿಗೆ ಅದರಿಂದ ಹೊರಬರಲಾಗದ, ಹೇಳಿಕೊಳ್ಳಲಾರದ ವಿರಹಬಾಧೆ. ಪ್ರಧಾನಿ ಅಭ್ಯರ್ಥಿಯೇ ಸೆರಗಿನ ಉರುಳಿಗೆ ಸಿಲುಕಿ ಪರದಾಡುತ್ತಿರುವುದು ಮತ್ತೊಬ್ಬ ರಾಷ್ಟ್ರನಾಯಕನ ಅನಂತ ಪ್ರಣಯ ಪ್ರಸಂಗಗಳ ಮುಂದೆ ರಾಮದಾಸ್, ರೇಣುಕಾಚಾರ್ಯ, ಹಾಲಪ್ಪ, ನಿರಾಣಿ, ಯಡ್ಡಿ ಥರದವರ ಲೋಕಲ್ ಕಾಮಕಾಂಡಗಳು ಯಾವ ಮಹಾ?



ರಾಮದಾಸ್‌ನ ಆತ್ಮಹತ್ಯೆ

ಅಖಂಡ ಬ್ರಹ್ಮಚಾರಿಗೆ ಊರ ತುಂಬ ಪ್ರೇಯಸಿಯರು!

ರಾಮದಾಸ್ ಖಯಾಲಿ, ಶೋಕಿ, ಸ್ತ್ರೀ ವಾಂಛೆಯನ್ನು ಮೈಸೂರಿನ ಜನಕ್ಕೆ ಪ್ರೇಮಕುಮಾರಿ ಹಠಕ್ಕೆ ಬಿದ್ದದ್ದು ಡಿ ನಗು ಬಿಟ್ಟರೆ ಬೇರೇನೂ ಬರುತ್ತಿಲ್ಲ.

ತಾನು ಅಜನ್ಮ ಬ್ರಹ್ಮಚಾರಿ ಎಂದು ಮಾತುಮಾತಿಗೆ ಮದಾಸ್ ಪೋಜು ಕೊಡುತ್ತಾನೆಂದರೆ ಅದನ್ನು ಬಿದವರಿಗೆ ಮೈಸೂರು ಗೊತ್ತಿಲ್ಲವೆಂದಷ್ಟೇ ಅರ್ಥ!

ಹಕೀಕತ್ತೇನೆಂದರೆ ರಾಮದಾಸ್ ಬ್ರಹ್ಮಚಾರಿಯಾಗುಳಿ ದ್ದು ಆಧ್ಯಾತ್ಮದಿಂದಾಗಲಿ, ಧಾರ್ಮಿಕ ಕಾರಣಕ್ಕಾಗಲಿ ಶುರುವಿನಲ್ಲಿ ಪಿ. ಗೋವಿಂದರಾಜು ಎಂಬ ಬಂಗಾರಪ್ಪ ಟನಿಗೆ ಛೇಲಾಗಿರಿ ಮಾಡಿಕೊಂಡಿದ್ದ ರಾಮದಾಸ್ ಬ್ಬಳು ಪ್ರೇಯಸಿಯಿದ್ದಳು. ಆಕೆಯ ಹೆಸರಿಲ್ಲಿ ಅಪ್ರಸ್ತುತ. ಶಿಕ್ಷಕಿಯಾಗಿದ್ದ ವಯಸ್ಸಿನಲ್ಲಿ ರಾಮದಾಸ್‌ಗಿಂತಲೂ ರಿಯಳಾಗಿದ್ದ ಆ ಶಿಕ್ಷಕಿಯೇ ಕಷ್ಟಕಾಲದಲ್ಲಿ ತನ್ನೆಲ್ಲಾ ವೆ ಮತ್ತು ಮಾರಿ ಈತನನ್ನು ಕಾಪಾಡಿದಾಕೆ.

ಗೋವಿಂದರಾಜು ಮೂಡಾದ ಅಧ್ಯಕ್ಷರಾಗಿದ್ದೇ ಸೈಟು ಲ್‌ಮಾಲ್, ಲೇಔಟ್ ದಂಧೆ, ನಕಲಿ ದಾಖಲೆ ವಿದ್ಯೆ ಗತ ಮಾಡಿಕೊಂಡ ರಾಮದಾಸ್ ಕ್ರಮೇಣ ರಿಯಲ್ ಟೇಟ್ ವ್ಯವಹಾರಕ್ಕಿಳಿದು ದುಡ್ಡೂ ಕಾಸೂ ಕಂಡ. ಹಾಗಂತ ನಲ್ಲಿ ಕೈಹಿಡಿದು ಮೈ ಸುಖವನ್ನೂ ನೀಡುತ್ತಿದ್ದ ಆ ಟಿ ಕೈಬಿಡಬಾರದಲ್ಲವೇ? ಆ ಕಾರಣಕ್ಕೇ ರಾಮದಾಸ್ ಮಹೆಯಾಗದೆ ಉಳಿದು ಬಿಟ್ಟನೇ ಹೊರತು ವಾಸ್ತವದಲ್ಲಿ ಸ್ಮಚರ್ಯ ಪಾಲಿಸಿದ್ದಾಗಲಿ, ಬ್ರಹ್ಮಚರ್ಯದ ಅರ್ಥ ಹವಾಗಲಿ ಆಗಿರಲೇ ಇಲ್ಲ!

ಹೀಗೆ ಕದ್ದುಮುಚ್ಚಿ ಸಂಸಾರ ಶುರುವಿಟ್ಟೇ ಬ್ರಹ್ಮಚಾರಿ ಪಟ್ಟವನ್ನೂ ಗಿಟ್ಟಿಸಿಕೊಂಡ ರಾಮದಾಸ್ 1994ರಲ್ಲಿ ಮೊದಲ ಬಾರಿಗೆ ಬಿಜೆಪಿಯಿಂದ ಗೆದ್ದು ಶಾಸಕನಾಗಿದ್ದೇ ... ಹೆಂಗಸೊಬ್ಬಳ ರಾಶಿಗೆ ಕಾಲಿಟ್ಟದ್ದ, ಈಕೆಗೆ ... ಗಂಡ ... ಡ್ರೈವರಾಗಿದ್ದ ಆಕೆಯ ... ಕಂಡೇ ಮಾರುಹೋದ ರಾಮದಾಸ್ ... ಡ್ರೈವರ್ ಗಂಡನನ್ನು ... ಗುಲ್ಬರ್ಗಾಕ್ಕೆ ಎತ್ತಂಗಡಿ ಮಾಡಿಸಿದ್ದು!

ಗಂಡ ಎತ್ತಂಗಡಿಯಾಗಿದ್ದೇ ತಡ ಆಕೆಯನ್ನು ಕರೆತಂದು ತನ್ನ ಅಧಿಕೃತ ಕಚೇರಿಯಲ್ಲೇ ಪ್ರತಿಷ್ಠಾಪಿಸಿಕೊಂಡ. ತನ್ನ ಫ್ಯಾಮಿಲಿ ಟ್ರಸ್ಟ್ 'ರಕ್ಷಣೆ'ಗೆ ಆಕೆಯನ್ನು ಓರ್ವ ಡೈರೆಕ್ಟರಾಗಿಯೂ ನೇಮಿಸಿಕೊಂಡ. ಒಂದೆಡೆ ಮೈಸೂರು ಸುತ್ತಮುತ್ತಲ ಸರ್ಕಾರಿ ಭೂಮಿ ಕಬಳಿಕೆ, ಮತ್ತೊಂದೆಡೆ ಸೈಟು ದಂಧೆ, ಇನ್ನೊಂದೆಡೆ ತಮ್ಮ ಶ್ರೀಕಾಂತ್ ಮೂಲಕ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಕೈಯಿಟ್ಟಿದ್ದ ರಾಮದಾಸ್‌ಗೆ ಬೇಕಾಬಿಟ್ಟಿ ದುಡ್ಡು ಹರಿದುಬರುತ್ತಿತ್ತು. ಅದಕ್ಕೆ ತಕ್ಕಂತೆ ಮುಸ್ಲಿಂ ಮಹಿಳೆಯ ಆಸ್ತಿ-ಅಂತಸ್ತೂ ಬದಲಾಯಿತು. ಮೈಸೂರಿನ ಸಿದ್ಧಾರ್ಥ ಲೇಔಟಿನಲ್ಲಿ ಆಕೆಗೊಂದು ಭರ್ಜರಿ ಬಂಗಲೆಯೂ ಪ್ರಾಪ್ತಿಯಾಯಿತು.

ಹೇಗೆ ತನ್ನ ಬ್ಲಾಕ್‌ಮನಿ ನಿಭಾವಣೆಗೆ ರಾಮದಾಸ್ 'ರಕ್ಷಣೆ' ಹೆಸರಿನ ಟ್ರಸ್ಟ್ ಮಾಡಿಕೊಂಡಿದ್ದಾನೋ ಹಾಗೆ ತನ್ನ ಕೃಪೆಗೆ ಪಾತ್ರರಾದ ಹೆಂಗಸರ ಉದ್ಧಾರಕ್ಕೆಂದು 'ಸ್ತ್ರೀ ಬೆಳಕು' ಎಂಬ ಮತ್ತೊಂದು ಸಂಘಟನೆಯನ್ನೂ ಕಟ್ಟಿದ್ದಾನೆ. 'ರಕ್ಷಣೆ'ಗೆ ಆ ಮುಸ್ಲಿಂ ಮಹಿಳೆಯೇ ಒಡತಿಯಾದರೆ ಸ್ತ್ರೀ ಬೆಳಕು ಬೆಳಗಿಸುವಾಕೆಯ ಹೆಸರು ಶಮಾ (ಹೆಸರು ಬದಲಿಸಿದೆ).

ಒಂದಾನೊಂದು ಕಾಲಕ್ಕೆ ಅಂಚೆ ಇಲಾಖೆಯ ಗುಮಾಸ್ತೆ ಯಾಗಿದ್ದ ಶಮಾ ಅದ್ಯಾವ ಗಳಿಗೆಯಲ್ಲಿ ಈತನ ಕಣ್ಣಿಗೆ ಬಿದ್ದಳೋ ಯಾವ ಲೀಲೆಯೋ ಗೊತ್ತಿಲ್ಲ, ಇಲ್ಲಿಗೆ ನಾಲ್ಕು ವರ್ಷದ ಹಿಂದೆ ಏಕಾಏಕಿ ತನ್ನ ಪೋಸ್ಟ್ ಆಫೀಸ್ ಕೆಲಸಕ್ಕೆ ಗುಡ್‌ಬೈ ಹೇಳಿದ ಶಮಾ ನೇರವಾಗಿ ರಾಮದಾಸನ 'ಸ್ತ್ರೀ ಬೆಳಕು' ಅಡ್ಡೆಯಲ್ಲಿ ಮಿಂಚುತ್ತಿದ್ದಳು. ಈಕೆಗೆ ನಜರ್‌ಬಾದ್ ಪಕ್ಕದಲ್ಲೇ ಹೊಸ ಮನೆಯೊಂದನ್ನು ಕಟ್ಟಿಸಿಕೊಟ್ಟು ಉಪಕರಿಸಿದ ರಾಮದಾಸ್ ಎದೆತುಂಬ ಸ್ತ್ರೀ ಬೆಳಕು ಬೆಳಕಿತ್ತು.

ಈ ಸಾಲಿಗೆ ಸೇರ್ಪಡೆಯಾದ ಮತ್ತೊಬ್ಬಳು ಲಲನಾಮಣಿಯ ಹೆಸರು ಮಂಜುರಾಣಿ (ಹೆಸರು ಬದಲಿಸಿದೆ). ತನ್ನ ಗಂಡ ವರದಕ್ಷಿಣೆ ಕಿರುಕುಳ ನೀಡುತ್ತಾನೆಂದು ಶಾಸಕರ ರಕ್ಷಣೆ ಕೋರಿ ಬಂದಿದ್ದ ಮಂಜುರಾಣಿ ಕಾಲಕ್ರಮೇಣ ರಾಮದಾಸ್‌ರ ಗೋಕುಲದ ನಾರಾಯಣ ಕೃಪಾ ಬಂಗಲೆಯಲ್ಲಿ ನೆಲೆ ನಿಂತಿದ್ದಕ್ಕೂ ಕಾರಣವಿದೆ. ತಾನು ರಾಮದಾಸ್‌ರ ಆಪ್ತ ಸಹಾಯಕಿ ಎಂದೇ ವಿಜಿಟಿಂಗ್ ಕಾರ್ಡ್ ಪ್ರಿಂಟು ಮಾಡಿಸಿಕೊಂಡು ಓಡಾಡುವ ಮಂಜು ದಿನದ ಯಾವ ಗಳಿಗೆಯಲ್ಲೂ ರಾಮದಾಸ್ ಬಂಗಲೆಯಲ್ಲಿ ಕಾಣ ಸಿಗುತ್ತಾಳೆ. ಕಾಲಕಾಲಕ್ಕೆ ಊಟ, ತಿಂಡಿ, ತೀರ್ಥ, ಮನೆವಾರ್ತೆ ಬಟ್ಟೆ ಬರೆ ಎಲ್ಲವನ್ನೂ ನಿಭಾಯಿಸುವ ಮಂಜುರಾಣಿಯ ನಿಯತ್ತು ನೋಡಿಯೇ ರಾಮದಾಸ್ ಆಕೆಯನ್ನು ಸದಾಕಾಲ ತನ್ನ ಪಕ್ಕದಲ್ಲಿರುವಂತೆ ನೋಡಿಕೊಂಡಿದ್ದಾನೆ.

ಅಂದಹಾಗೆ ಈಕೆಗೂ ಮನೆಯೊಂದನ್ನು ಕಟ್ಟಿಸಿಕೊಟ್ಟು ತಿಂಗಳಾಪ್ರತಿ ಅದರ ಬಾಡಿಗೆಯಿಂದ 25 ಸಾವಿರ ರೂಪಾಯಿಗಳ ವರಮಾನಕ್ಕೂ ರಾಮದಾಸ್ ದಾರಿ ಮಾಡಿಕೊಟ್ಟಿದ್ದಾನೆ.

ಓಟು ಕೊಟ್ಟ ಜನಕ್ಕೆ ಏನೇನೂ ಮಾಡದೆ ಹೋದರೂ ನಂಬಿ ಬಂದ ಹೆಂಗಸರಿಗೆ ಶಕ್ತ್ಯಾನುಸಾರ ಸುಖ ಮತ್ತು ಬದುಕಿನ ಮಾರ್ಗ ಕಲ್ಪಿಸಿಕೊಡುವುದರಲ್ಲಿ ರಾಮದಾಸ್ ಯಾವತ್ತಿಗೂ ಹಿಂದೆ ಬಿದ್ದವನಲ್ಲ ಎಂಬುದಕ್ಕೆ ಮತ್ತೊಂದು ಉದಾಹರಣೆಯಿದ್ದರೆ ಆಕೆಯೇ ನಿತ್ಯಾ ಅರಸು (ಹೆಸರು ಬದಲಿಸಿದೆ). ಹೇಳಿಕೇಳೀ ಈಕೆ ಬಿಜೆಪಿ ಲೋಕಲ್ ನಾಯಕಿ ಮತ್ತು ರಾಮದಾಸ್‌ನ ನಿಷ್ಠಾವಂತ ಸೇವಕಿ. ಅದೇನು ಸೇವೆಗೈದಳೋ, ಏನೆಲ್ಲ ನೆಮ್ಮದಿಕೊಟ್ಟಳೋ ಪಕ್ಷಕ್ಕಾಗಿ ದುಡಿದ ತನ್ನ ಗೆಲುವಿಗಾಗಿ ಹೆಣಗಾಡಿದ ಡಜನ್‌ಗಟ್ಟಲೇ ಬಿಜೆಪಿ ಕಾರ್ಯಕರ್ತೆಯರಿದ್ದಾಗಲೂ ಅವರೆಲ್ಲರನ್ನೂ ಬದಿಗೊತ್ತಿ ರಾಮದಾಸ್ ಖುದ್ದು ನಿಂತು ಮೈಸೂರು ಮಹಾನಗರ ಪಾಲಿಕೆಗೆ ಗೆಲ್ಲಿಸಿದ್ದು ಈಕೆಯನ್ನೆ. ರಾಮದಾಸ್ ಕೃಪೆಯಿಂದಲೇ ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆದ ನಿತ್ಯಾ ಅರಸ್ ಇವತ್ತಿಗೂ ರಾಮದಾಸ್ ಆಸ್ಥಾನ ನರ್ತಕಿಯೆ!


ಇದಲ್ಲದೆ ಕುವೆಂಪು ನಗರದ ಕೋಮಟ ಶೆಟ್ಟಿಯೊಬ್ಬನ ಪತ್ನಿಗೂ ರಾಮದಾಸ್ ಐಷಾರಾಮೀ ಕಾರು ಕೊಡಿಸಿದ್ದಾನೆಂಬ ಆರೋಪ ಕೇಳಿಬರುತ್ತದೆ. ಸಮಾಜ ಕಲ್ಯಾಣ ಇಲಾಖೆಯ ಅರುಣಾ (ಹೆಸರು ಬದಲಿಸಿದೆ) ಎಂಬಾಕೆಯ ತಮ್ಮನನ್ನು ಕಂಟ್ರಾಕ್ಟರ್ ಮಾಡಿದ್ದೂ ಅಲ್ಲದೆ ಅರುಣಾಳ ಹೆಸರಿಗೆ ಮೂವತ್ತೂ ಕೋಟಿಗೂ ಅಧಿಕ ಮೊತ್ತದ ಆಸ್ತಿ ಖರೀದಿಸಿಟ್ಟಿದ್ದಾನೆಂಬ ಮಾತೂ ಚಾಲ್ತಿಯಲ್ಲಿದೆ. ಮೈಸೂರು ನಗರ ಬಿಜೆಪಿಯ ಮಹಿಳಾ ಮೋರ್ಚಾ ಪದಾಧಿಕಾರಿ ಯೊಬ್ಬಳ ಜೊತೆ ಊಟಿಯಲ್ಲಿ ರಾಮದಾಸ್ ಸಿಕ್ಕಿಬಿದ್ದ ಕತೆಯೊಂದು ರಸವತ್ತಾಗಿದೆ.

ಬಹುಶಃ ಯಾರೆಲ್ಲ ತನಗೆ ಶರಣಾಗಿ ತಾನು ಹೇಳಿದಂತೆ ಕೇಳಿಕೊಂಡಿರುತ್ತಾರೋ ಅಂಥ ಪ್ರತಿಯೊಬ್ಬರಿಗೂ ಮನೆ, ಬಂಗಲೆ, ಕಾರು, ಮಂತ್ಲಿ ಆದಾಯದ ಮೂಲ ಕಲ್ಪಿಸುವುದರಲ್ಲೇ ರಾಮದಾಸ್ ಬಿಜಿಯಾಗಿದ್ದರಿಂದಾಗಿ ಪಕ್ಷದ ಕಾರ್ಯಕರ್ತರು ಮತ್ತು ಮತದಾರರಿಂದ ದೂರಾಗುವಂತಾಗಿ ರಬೇಕು. ಇದರ ಫಲವಾಗಿಯೇ ಕಳೆದ ಚುನಾವಣೆಯಲ್ಲಿ ಸೋತಿರಲಿಕ್ಕೂ ಸಾಕು. ಆದರೆ ಪ್ರೇಮಕುಮಾರಿ ಈ ಹೆಂಗಸರ ದಾರಿ ಹಿಡಿಯಲಿಲ್ಲ. ಮನಸ್ಸು ಮಾಡಿದ್ದರೆ ಬಂಗಲೆಯೊಂದನ್ನು ಕಟ್ಟಿಸಿಕೊಟ್ಟು ಒಂದಷ್ಟು ದುಡ್ಡು ಕೊಡುವುದು ರಾಮದಾಸ್‌ಗೆ ಕಷ್ಟವೇನಿರಲಿಲ್ಲ.

ಆದರೆ ಪ್ರೇಮಕುಮಾರಿ ಹಾಗಲ್ಲವಲ್ಲ. ತಾನು ರಾಮದಾಸ್ ಧರ್ಮಪತ್ನಿ ಎನ್ನಿಸಿಕೊಳ್ಳುವ ಹಠಕ್ಕೆ ಬಿದ್ದಳು. ಪಡಬಾರದ ಪಜೀತಿಗೆ ಬಲಿಯಾದಳು.

ರಾಮದಾಸ್ ಪಶುವಾಂಛೆ ಮತ್ತು ಕಸ್ಯಾಚಪಲದ ಕುರಿತಂತೆ ಕೇಳಿಬರುವ ಮತ್ತೊಂದು ಆರೋಪ ಇವೆಲ್ಲವುಗಳಿಗಿಂತಲೂ ಗಂಭೀರವಾಗಿದೆ. ಅದು ಕೆ.ಆರ್. ಪೊಲೀಸ್ ಠಾಣೆಯ ಮಹಿಳಾ ಪೇದೆಯೊಬ್ಬಳ ನಿಗೂಢ ಸಾವು; ರಾಮದಾಸ್ ಮಂತ್ರಿಯಾಗಿದ್ದಾಗಲೇ ಈ ಮಹಿಳಾ ಪೊಲೀಸ್ ಪೇದೆ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆಯಿತು. ನಿಜಕ್ಕೂ ಆತ್ಮಹತ್ಯೆ ಮಾಡಿಕೊಂಡಿದ್ದರೆ ಆಕೆಯ ಡೆತ್‌ನೋಟ್ ಸಿಗಬೇಕಿತ್ತು. ಡೆತ್‌ನೋಟ್ ಸಿಗಲಿಲ್ಲ ಎಂದರೆ ಅದು ಕೊಲೆಯಾಗಿರಲೇಬೇಕು. ಏಕೆಂದರೆ ಮಹಿಳಾ ಪೇದೆ ಕೂಡ ಆಗಾಗ ರಾಮದಾಸ್ ಜೊತೆ ಕಾಣಿಸಿಕೊಂಡಿದ್ದಳು. ಪೊಲೀಸ್ ಮೂಲಗಳೇ ಹೇಳುವಂತೆ ರಾಮದಾಸ್ ಆಗಾಗ ತನಗೆ ಬೇಕಾದ ಲಲನೆಯರನ್ನು ಕರೆಸಿಕೊಳ್ಳುತ್ತಿದ್ದದ್ದು ಈ ಮೂಲಕವೆ! ಬಿಜೆಪಿಯದ್ದೇ ಸರ್ಕಾರವಿದ್ದದ್ದರಿಂದ ರಾಮದಾಸ್ ಬೇರೆ ಮಂತ್ರಿಯಾಗಿದ್ದರಿಂದ ಪೇದೆಯದ್ದು ಆತ್ಮಹತ್ಯೆಯೋ ಕೊಲೆಯೋ ಎಂಬುದೂ ಮುಚ್ಚಿಹೋಯಿತು!

'ನಿಮ್ಮನ್ನ ಊರು ಹೋಗು ಅಂದ್ರೆ ಕಾಡು ಬಾ ಅಂತದಲ್ಲಾ ಸಾರ್'



ಕುಂ. ವೀರಭದ್ರಪ್ಪನವರು ಜ್ಞಾನಪೀಠದಂತಹ ಪ್ರಶಸ್ತಿಯನ್ನೇ ನಾನ್‌ಸೆನ್ಸ್ ಪ್ರಶಸ್ತಿ ಎಂದುಬಿಟ್ಟಿದ್ದಾರಂತಲ್ಲಾ, ಆ ಪ್ರಶಸ್ತಿಗೆ ಇರುವ ಮಾನದಂಡವಾದರೂ ಏನು, ಅನುವಾದ, ಜೊತೆಗೆ ಒಂದಿಷ್ಟು ಲಾಬಿ ಇದ್ದರೆ ಅದು ಮನೆ ಬಾಗಿಲಿಗೇ ಬಂದುಬೀಳುವುದು ಎನ್ನುವಂತೆ ಮಾತನಾಡಿದ್ದಾರಂತಲ್ಲ, ವೀರಭದ್ರಪ್ಪನ ಅಭಿಪ್ರಾಯವನ್ನು ಸೀರಿಯಸ್ಸಾಗಿ ಪರಿಗಣಿಸಿದ ಹಲವು ಸಾಹಿತ್ಯಾಸಕ್ತರು ಕನ್ನಡದಲ್ಲಿ ಜ್ಞಾನಪೀಠ ಪಡೆದ ವಿದ್ವಾಂಸರ ಬಗ್ಗೆ ದೃಷ್ಟಿ ಹಾಯಿಸಿದರಂತಲ್ಲ, ಆದರೆ ವೀರಭದ್ರಪ್ಪನ ಆಪಾದನೆಗೆ ತುತ್ತಾಗುವಂತಹ ಯಾರೂ ಕಾಣಲಿಲ್ಲವಂತಲ್ಲಾ.

ಕನ್ನಡಕ್ಕೆ ಮೊದಲ ಜ್ಞಾನಪೀಠ ತಂದ ಕುವೆಂಪು ಋಷಿಕವಿಯಾಗಿ ರಾಮಾಯಣ ದರ್ಶನ ಕೊಟ್ಟವರು. ಬೇಂದ್ರೆಯಂತೂ ಕನ್ನಡ ಭಾಷೆ ಕಂಡರಿಯದ ಕವಿ. ಕಾರಂತರಂತೂ ವಟವೃಕ್ಷದಂತೆ. ಇನ್ನ ಮಾಸ್ತಿ ನಾಮ ಅಳಿಸಿ ನೋಡಿದರೆ ಜ್ಞಾನಪೀಠಕ್ಕೆ ಯೋಗ್ಯರೆ. ವಿ.ಕೃ.ಗೋಕಾಕರಂತೂ ಯಾರೂ ಓದ್ದದ ವಿದ್ವಾಂಸರು; ಅವರಿಗೆ ಸಂದ ಜ್ಞಾನಪೀಠದಲ್ಲಿ ಶಿಫಾರಸ್ಸಿನ ವಾಸನೆ ಇರಬಹುದು. ಇನ್ನ ಅನಂತಮೂರ್ತಿಗೆ ಬಂದಾಗ ಎಲ್ಲರೂ ಅಚ್ಚರಿಪಟ್ಟರು; ಗಿರೀಶ್ ಕಾರ್ನಾಡರಿಗೆ ಸಿಕ್ಕಾಗ ಇನ್ನೂ ಅಚ್ಚರಿಪಟ್ಟರು. ಏಕೆಂದರೆ ಲಂಕೇಶ್, ತೇಜಸ್ವಿ ನಂತರದ ಸರದಿಯಲ್ಲಿದ್ದರು ಗಿರೀಶ್. ಇನ್ನ ಕಂಬಾರರಿಗಂತೂ ಸಣ್ಣ ವ್ಯಕ್ತಿಗೆ ದೊಡ್ಡ ಪ್ರಶಸ್ತಿ ಬಂದಂತೆ ಕಂಡಿತು. ಸಣ್ಣ ವ್ಯಕ್ತಿ ಯಾಕೆಂದರೆ ಕಂಬಾರ ತನಗಿಂತಲೂ ಕುಳ್ಳಗಿದ್ದ ಪೇಜಾವರರ ಕಾಲಿಗೆ ಬಿದ್ದಾಗಲೆ ಈ ನಾಡು ಲೊಚಗರೆದು 'ಛೇ ಎಂಥಾ ಮನುಷ್ಯನಿಗೆ ಜ್ಞಾನಪೀಠ ಕೊಟ್ಟರಲ್ಲಾ' ಎಂದುಬಿಟ್ಟಿತ್ತು.

ನಿಜಕ್ಕೂ ಪ್ರಶಸ್ತಿ ಎಂದರೆ ಕೇಂದ್ರ ಸಾಹಿತ್ಯ ಅಕಾಡೆಮಿಯದು, ಅದಕ್ಕೆ ಶಿಫಾರಸ್ಸಿನ ಅಗತ್ಯವಿಲ್ಲ, ಅಂತಹ ಪ್ರಶಸ್ತಿಯನ್ನು ಪಡೆದ ಕುಂ.ವಿ. ಹೆಚ್ಚೋ, ಜ್ಞಾನಪೀಠಿಗಳು ಹೆಚ್ಚೋ ನೀವೇ ಹೇಳಿ ಎಂದು ಕುಂ.ವಿ. ಕಂಡರಾಗದವರು ಹೇಳಿದರಂತಲ್ಲಾ, ಥೂತ್ತೇರಿ!

* * * *

"ಉಮಾಶ್ರೀ ಎಂಬ ಮಹಿಳೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಲಂಕಾರದ ಗೊಂಬೆ, ಆಕೆಗೆ ಏನೂ ಗೊತ್ತಿಲ್ಲ, ಇಲಾಖೆ ವಿಷಯದಲ್ಲೂ ಏನೂ ಗೊತ್ತಿಲ್ಲ, ಇಂತಹ ಮಂತ್ರಿಯಿಂದ ಏನು ಪ್ರಯೋಜನ" ಎಂದು ಸಿ.ಪಿ.ಕೆ. ಎಂಬ ವಿದ್ವಾಂಸರು ನೇರಾನೇರ ಆಪಾದಿಸಿದ್ದಾರಂತಲ್ಲಾ, ಸಿ.ಪಿ.ಕೃಷ್ಣಕುಮಾರ್ ಎಂಬ ಈ ವಿದ್ವಾಂಸರ ನಿಜ ಹೆಸರು ಕುಂಟ ಸಿಂಗ್ರಿಗೌಡ. ಇಂತಹ ಹೆಸರು ಕೇಳಿದಕೂಡಲೆ ಕಡಿದಾಳು ಶಾಮಣ್ಣ ಮತ್ತು ತೇಜಸ್ವಿ 'ಥೂ ಇದ್ಯಾವ ಸೀಮೆ ಹೆಸರು ಮಡಿಕಂಡಿದ್ದೀರಿ? ಸ್ಯಾಟ ಸಿಂಗ್ರಿ ಅಂತ ಮೊದಲು ಬದ್ಲಾಯಿಸಿಕೊಳ್ರಿ' ಎಂದು ಗದರಿದ್ದೂ ಅಲ್ಲದೆ, ಹೆಸರನ್ನ ಬದಲಾಯಿಸಿದ್ದರಂತಲ್ಲಾ.

ಶಿಸ್ತಿನ ಸಿಪಾಯಿಯಾಗಿದ್ದ ಸಿ.ಪಿ.ಕೆ. ಓದುವುದರಲ್ಲೂ ಶಿಸ್ತು, ಬರೆಯುವುದರಲ್ಲೂ ಶಿಸ್ತು, ಉಣ್ಣುವುದರಲ್ಲೂ ಶಿಸ್ತು, ಅಂದರೆ ಮೂರು ಬಾರಿ ಅನ್ನ ಇಕ್ಕಿಸಿಕೊಂಡು, ಒಂದಗುಳನ್ನು ಬಿಡದೆ ಉಂಡು, ಕೇವಲ ಒಂದು ಲೋಟ ನೀರು ಕುಡಿಯುತ್ತಿದ್ದರು. ಆದರೆ ಕಕ್ಕಸ್ಸಿಗೆ ಹೋದ ನಂತರ ತಿರುಗಿ ನೋಡದೆ ಬರುತ್ತಿದ್ದರು. ಇದನ್ನ ನೋಡಲಾಗದ ಕಡಿದಾಳು ಶಾಮಣ್ಣನವರು, ಸದರಿ ವಿದ್ವಾಂಸರ ಬಹಿರ್ದೆಸೆ ಪ್ರದೇಶವನ್ನ ಸ್ವಚ್ಛಗೊಳಿಸುತ್ತಿದ್ದರಂತಲ್ಲಾ, ನಲ್ಲೂರು ಪ್ರಸಾದ್ ಎಂಬ ಜೆ.ಡಿ.ಎಸ್ ಸಾಹಿತಿ 'ಸಿ.ಪಿ.ಕೆ. ನಮ್ಮವರು' ಎಂದು ಗುರುತಿಸಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡದಿದ್ದರೆ ಸಿ.ಪಿ.ಕೆ ಅನಾಮಧೇಯರಾಗಿಯೇ ನಿರ್ಗಮಿಸುತ್ತಿದ್ದರು. ಇಂತಹ ಸಿ.ಪಿ.ಕೆ. ಉಮಾಶ್ರೀ ಎಂಬ ಕಲಾವಿದೆಯ ಬದುಕು ಮತ್ತು ಸಾಧನೆಯನ್ನು ಗ್ರಹಿಸಿದ್ದರೆ ಅಲಂಕಾರದ ಗೊಂಬೆ ಎಂಬ ಮಾತನ್ನು ಬಳಸುತ್ತಿರಲಿಲ್ಲವಂತಲ್ಲಾ, ಇದೆಲ್ಲಕ್ಕಿಂತ ಮುಖ್ಯವಾಗಿ, ಅಲಂಕಾರದ ಗೊಂಬೆಗಳನ್ನ ಆಸೆಗಣ್ಣಿಂದ ನೋಡಿ ಮೂರು ಸಾಲಿನ ಹಾಯ್ಕು ಬರೆಯುವಂತಹ ಈ ವಿದ್ವಾಂಸರು, ಇನ್ನಾದರೂ ಒಂದಿಷ್ಟು ವಿವೇಕದಿಂದ ಮಾತನಾಡುವುದು ಒಳ್ಳೆಯದೆಂದು ಸಾಕವ್ವನ ಅಭಿಮಾನಿಗಳು ಎಚ್ಚರಿಸಿದರಂತಲ್ಲಾ ಥೂತ್ತೇರಿ!!

* * * *

ಬಿ.ಜೆ.ಪಿಯ ಭವ್ಯ ಸಮಾಧಿಯೊಳಗಿಂದ ಸದ್ದು ಮಾಡುತ್ತಿರುವ ನಮ್ಮ ಡಿ.ಬಿ.ಚಂದ್ರೇಗೌಡರನ್ನು ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ನಿನಗ್ಯಾರಿದ್ದರೇನು ಸುಖವಿಲ್ಲ ಪ್ರಭುವೇ ದಾರಿ ಸುಖವಿಲ್ಲ..."

"ಹಲೋ ಯಾರು?"

"ನಾನು ಸಾರ್. ಯಾಹು ಅಂತ, ಪತ್ರಕರ್ತ."

"ಯಾವ ಪತ್ರಿಕೆ?"

"ಗೌರಿ ಲಂಕೇಶ್."

"ಹೇಗಿದಾರೆ ಗೌರಿ?"

"ನಿಮ್ಮನ್ನ ಮಾತನಾಡಸೊದೇನು ಬೇಡ ಅಂದ್ರು ಸಾರ್."

"ನನ್ನ ಮಗಳೂ ಕೂಡ ಹಾಗೆ ಹೇಳಿದ್ಲು. ನಾನೇನು ಬೇಜಾರಾಗಲಿಲ್ಲ."

"ನೀವು ಬೇಜಾರು ಮಾಡಕೊಳ್ಳುವವರಾಗಿದ್ದರೆ ಬಿ.ಜೆ.ಪಿ.ಗೊಯ್ತಿರಲಿಲ್ಲ."

"ನೋಡಿ, ನನ್ನ ತೀರ್ಮಾನಗಳ ಹಿಂದೆ ಕಾಲದ ಒತ್ತಡಾನೂ ಇರುತ್ತೆ, ಜೊತೆಗೆ ಪಾರ್ಟಿಗಳು ನನ್ನನ್ನ ನಡೆಸಿಕೊಂಡ ಕ್ರಮನೂ ಇರುತ್ತೆ."

"ಒಂದು ರಾಜಕೀಯ ಪಾರ್ಟಿ, ನನ್ನನ್ನ ಗೌರವವಾಗಿ ನಡೆಸಿಕೊಬೇಕು ಅಂತ ತಿಳಕಳದೇ ಮೂರ್ಖತನ ಅಲ್ಲವ ಸಾರ್? ಅದೇನು ವ್ಯಕ್ತಿನೆ?"

"ಹಾಗಲ್ಲ, ಪಾರ್ಟಿಗೆ ನಾಯಕತ್ವ ಅಂತ ಇರುತ್ತೆ, ಆ ನಾಯಕತ್ವ ಪಾರ್ಟಿಗೆ ಬೇಕಾದ ಬಹುಮುಖ್ಯ ವ್ಯಕ್ತಿಗಳನ್ನ ಗೌರವದಿಂದ ನಡೆಸಿಕೊಬೇಕಾಗುತ್ತೆ."

"ಸರಿ. ಆ ವ್ಯಕ್ತಿ ಗೌರವಕ್ಕೆ ಯೋಗ್ಯನಲ್ಲದಿದ್ದರೆ?"

"ನಾನೆಂದು ಅಗೌರವಕ್ಕೆ ಯೋಗ್ಯನಾದ ವ್ಯಕ್ತಿ ತರ ನಡಕೊಂಡಿಲ್ಲ."

"ಇದೇನು ಸಾರ್ ಹಿಂಗೇಳ್ತಿರಿ? ನಿಮ್ಮ ರಾಜಕಾರಣದ ನಡವಳಿಕೆ ಯಾರೂ ಕೂಡ ಕ್ಷಮಿಸಲಾರದಂತವು."

"ಅಂತದ್ದೇನು ಮಾಡಿದ್ದಿನಿ?"

"ನಿಮ್ಮ ದಿಕ್ಕುತಪ್ಪಿದ ರಾಜಕಾರಣ ಆರಂಭ ಆದದ್ದೇ ಇಂದಿರಾ ಗಾಂಧಿಗೆ ಚಿಕ್ಕಮಗಳೂರಿನ ಎಂ.ಪಿ. ಸೀಟನ್ನ ಬಿಟ್ಟುಕೊಟ್ಟಾಗ. ಅದೊಂದು ಐತಿಹಾಸಿಕ ಘಟನೆ ಸಾರ್!"

ಥೂತ್ತೇರಿ

» ಯಾಹೂ

"ಹಾಗಂತೀರಾ?"

"ಅರಸು ಪಾಲಿಗದು ದುರ್ಘಟನೆ. ಗೆದ್ದ ಇಂದಿರಾ ಗಾಂಧಿ ಅರಸು ಅವರನ್ನೇ ಪಾರ್ಟಿಯಿಂದ ತಗುದ್ಲು, ಆಗ್ಲು ನೀವು ಅರಸು ಜೊತೆ ಇದ್ದು ಮಂತ್ರಿ ಆಗಿದ್ರಿ. ಆದರೆ ಅರ್ಧ ರಾತ್ರಿಲಿ ನೀವ್ರು ಅರಸು ಅವರನ್ನು ಬಿಟ್ಟು ಹೊರಟಾಗ ಅವರ ಕಣ್ಣಲ್ಲಿ ನೀರಾಡಿದ್ದವಂತೆ."

"ನೋಡಿ, ಆ ಇತಿಹಾಸವನ್ನೆಲ್ಲ ಮಾತನಾಡೊದ್ರಿಂದ ಏನೂ ಪ್ರಯೋಜನ ಇಲ್ಲ, ಬೇರೆ ಏನಾದರೂ ಇದ್ರೆ ಹೇಳಿ."

"ನೋಡಿ ಸಾರ್, ನಿಮ್ಮ ರಾಜಕೀಯದ ಇತಿಹಾಸ ನೆನೆಸಿಕೊಂಡ್ರೆ, ನಿಮಗೆ ಪ್ರಯೋಜನ ಇಲ್ಲದಂತೆ ಕಾಣಬಹುದು. ಆದರೆ ನಮಗಂತೂ ನೋವಾಗುತ್ತೆ ಸಾರ್."

"ಸಾರ್ವಜನಿಕರಿಗೆ ನೋವಾಗೊ ರಾಜಕಾರಣವನ್ನೇನೂ ಮಾಡಿಲ್ಲ ನಾನು."

"ನೀವು ತೀರ್ಥಹಳ್ಳಿ ಶಾಸಕರಾಗಿದ್ರಿ, ಬರೀ ಐ.ಬಿ. ರಾಜಕಾರಣ ಮಾಡಿದ್ರಿ, ಜನಗಳತ್ರ ಹೋಗಲಿಲ್ಲ, ಕ್ಷೇತ್ರ ಬಿಜೆಪಿ ಪಾಲಾಯ್ತು. ಆಮೇಲೆ ಶೃಂಗೇರಿಗೆ ಬಂದ್ರಿ. ಅಲ್ಲೂ ಅಂಗೇ ಮಾಡಿದ್ರಿ. ಆ ಕ್ಷೇತ್ರನೂ ಬಿ.ಜೆ.ಪಿ.ಗೋಯ್ತು. ಇನ್ನ ಎಸ್ಸೆಂ ಕೃಷ್ಣನ ಅವಧಿಲಿ ಕಾನೂನು ಮಂತ್ರಿಯಾಗಿದ್ದಾಗ ಬಾಬಾ ಬುಡನ್‌ಗಿರಿಗೆ ಹೋಗಿ ವಿವಾದಿತ ಜಾಗದಲ್ಲಿ ಕುಳಿತು ಹೋಮ ಮಾಡಿದ್ರಿ."

"ಅದು ನಾನು ಮಾಡಿದ್ದಲ್ಲ, ಯಾರೊ ಕುಳಿತುಕೊಳ್ಳಿ ಅಂದ್ರು ನಾನು ಕುಳಿತುಕೊಂಡೆ. ನಂತರ ಅದೊಂದು ಪ್ರಮಾದ ಆಯ್ತು."

"ಯಾರೂ ಅಲ್ಲ, ನರಿ ತರದ ಇಬ್ಬರು ಬ್ರಾಹ್ಮಣ ಪತ್ರಕರ್ತರು ನಿಮ್ಮನ್ನ ದತ್ತ ಪೀಠದ ಗುಂಡಿಗೆ ಕೆಡವಿದ್ರು. ಅದೊಂದು ಸಮಸ್ಯೆ ನಿಮ್ಮಿಂದ್ಲೆ ಬೆಳಿತು. ಹಿಂಗೆ ನಿಮ್ಮ ಮೂರ್ಖ ರಾಜಕಾರಣದಿಂದ ಬಿ.ಜೆ.ಪಿ.ಗೆ ಸಹಾಯ ಆಯ್ತು, ಕಡೆಗೆ ಬಿ.ಜೆ.ಪಿ.ಗೋಗಿ ಎಂ.ಪಿ. ಆದ್ರಿ. ಈಗ ಜನಗಳನ್ನ ಗುರುತಿಸೊ ಶಕ್ತಿಯಿಲ್ಲ, ಮಾತಾಡೊ ಶಕ್ತಿಯಿಲ್ಲ. ತಲೆ ಬೇರೆ ಕೆಟ್ಟದೆ."

"ತಲೆ ಕೆಟ್ಟದೆ ಅಂತ ಅನ್ನಬೇಡ್ರಿ."

"ಅಲ್ಲ ಸಾರ್, ಮೋದಿಯವರು ದೇಶ ತಿರುಗಿ ಪಾರ್ಟಿ ಕಟ್ತಾಯಿರಬೇಕಾದ್ರೆ ನಾವು ಕಟ್ಟಬೇಕು ಅಂತೀರಲ್ಲಾ ನಿಮ್ಮ ತಲೆ ಕೆಟ್ಟಿಲ್ಲವೆ?"

"ಪಾರ್ಟಿ ವಕ್ತಾರನಾಗಿ ಆ ಮಾತ ಹೇಳಬಾರ್ದ?"

"ನೀವು ಸದ್ಯಕ್ಕೆ ಯಾವುದಕ್ಕೂ ವಕ್ತಾರ ಅಲ್ಲ, 'ಊರು ಹೋಗು ಅಂತಾ ಇದೆ, ಕಾಡು ಬಾ ಅಂತಾ ಇದೆ' ಇದು ನನ್ನ ಮಾತಲ್ಲ, ನಿನ್ನ ಜಾಗದ ಮೇಲೆ ಕಣ್ಣು ಮಡಗಿದವನ ಮಾತು"

"ಹೌದಾ?"

"ಹೌದು ಸಾರ್!!"

ಥೂತ್ತೇರಿ!!!

ಲಂಕೇಶ್ 79

ನಿರೀಕ್ಷಿಸಿ......

ಈ ಬಾರಿ

ಲಂಕೇಶ್ ಬಳಗದ

ವಾರ್ಷಿಕೋತ್ಸವ

ಕಾರ್ಯಕ್ರಮ

ಮಾರ್ಚ್ 09, 2014ರ

ಭಾನುವಾರ

ರಾಯಚೂರಿನಲ್ಲಿ...






ದಿ ಬುಕ್ ಆಫ್ ಎಲಿ: ಪತನದ ಅಂಚಿನಲ್ಲಿ ನಂಬಿಕೆಯ ಹಸ್ತ

'ದಿ ಬುಕ್ ಆಫ್ ಎಲಿ' ಚಿತ್ರ ಮನುಷ್ಯ ಕುಲದ ದುರಂತದ, ಪತನದ ಕಟ್ಟ ಕಡೆಯ ಅಂಚಿನಲ್ಲಿ ನಡೆಯುವ ಘಟನೆಗಳನ್ನು ಹಿಡಿದಿಡುತ್ತದೆ. ಇದನ್ನು ನಾವು ಮಿಥ್‌ನ ಭಾಗವಾಗಿಯೂ ಸ್ವೀಕರಿಸಬಹುದು. ಆದರೆ ಅದರಾಚೆಗೆ ಹಲವು ಹೊಳಹುಗಳನ್ನು ನೀಡುವ ಶಕ್ತಿ ಈ ಚಿತ್ರಕ್ಕಿದೆ. ಬೈಬಲ್ ಕೃತಿಯ ಆಶಯವನ್ನು ಇಟ್ಟುಕೊಂಡು ಈ ಚಿತ್ರದ ಕತೆಯನ್ನು ಹೆಣೆಯಲಾಗಿದೆ.

ಈ ಭೂಮಿ ತನ್ನೆಲ್ಲ ತಪ್ಪುಗಳಿಗೆ ತನ್ನನ್ನು ತೆತ್ತುಕೊಂಡು, ಸರ್ವನಾಶವಾಗಿ ಪಾಳು ಬೀಳುತ್ತದೆ. ಆಧುನಿಕತೆಗಳೆಲ್ಲ ಚಚ್ಚುನೂರಾಗಿ ಅದರಲ್ಲೇ ತೆವಳುತ್ತಾ ಅಳಿದುಳಿದ ಮನುಷ್ಯರು ಬದುಕುತ್ತಿರುತ್ತಾರೆ. ಮುರಿದು ಬಿದ್ದ ಸೇತುವೆ, ಗೋಪುರ, ಕಟ್ಟಡಗಳ ಮಧ್ಯೆ, ಯಾವ ಗೊತ್ತುಗುರಿಗಳೂ ಇಲ್ಲದೆ ಈ ಹಿಂದಿನ ಪಳೆಯುಳಿಕೆಗಳನ್ನೇ ಬಳಸಿಕೊಂಡು, ದರೋಡೆ ಮಾಡಿಕೊಂಡು ಜೀವಿಸುತ್ತಿರುತ್ತಾರೆ. ಮನುಷ್ಯ ನಂಬಿಕೆ ಸರ್ವನಾಶವಾಗಿ, ಪ್ರೀತಿ, ವಿಶ್ವಾಸಗಳೆಲ್ಲ ಚಚ್ಚುನೂರಾಗಿ ಬರೇ ಕೋವಿಯ ತುದಿಯಿಂದಲೇ ಬದುಕುತ್ತಿರುವ ದಿನಗಳು ಅವು. ನಾಗರಿಕತೆ ರೂಪಿಸಿದ ಎಲ್ಲ ಮಾಧ್ಯಮಗಳೂ ಕುಸಿದು, ಕರೆನ್ಸಿಗಳೂ ಇಲ್ಲದೆ, ಬರೀ ಅಳಿದುಳಿದ ವಸ್ತುಗಳನ್ನೇ ಅದಲು ಬದಲಿಸಿ ಬದುಕುವ ಕಾಲ. ಕಾಡಿನ ಆದಿಕಾಲವನ್ನು ನೆನಪಿಸುವ ಮನುಷ್ಯನ ವ್ಯಕ್ತಿತ್ವ. ಮುರಿದ ಕನ್ನಡಿ, ಕಟ್ಟಕಡೆಯ ಶ್ಯಾಂಪು, ಬಟ್ಟೆ ಎಲ್ಲವೂ ಬೆಲೆಬಾಳುವ ವಸ್ತುಗಳು. ಒಂದು ಗುಟುಕು ನೀರಿಗೆ ತನ್ನಲ್ಲಿರುವ ಅದೆಷ್ಟೋ ವಸ್ತುಗಳನ್ನು ತೆರಬೇಕಾದಂತಹ ಸ್ಥಿತಿ. ಒಂದು ರೀತಿಯಲ್ಲಿ ಭೂಮಿಯ ನಾಗರಿಕತೆ ಬೃಹತ್ ಗುಜರಿ ಅಂಗಡಿಯಂತಾಗಿದೆ. ಇಂತಹ ಕಾಲಘಟ್ಟದಲ್ಲಿ ಒಂದು ಪುಸ್ತಕಕ್ಕಾಗಿ ಇಬ್ಬರಲ್ಲಿ ನಡೆಯುವ ಕಾಳಗವೇ 'ದಿ ಬುಕ್ ಆಫ್ ಎಲಿ'.

ಅದೊಂದು ಪಾಳು ಬಿದ್ದ ನಗರ. ಅಲ್ಲಿನ ಮುಖ್ಯಸ್ಥ ಕಾರ್ನೆಗಿ (ಗ್ಯಾರಿ ಓಲ್ಡ್‌ಮೆನ್). ಅವನಿಗೆ ಪುಸ್ತಕ ಓದುವುದು ಗೊತ್ತು. ಗುಜರಿ ಅಂಗಡಿಯಂತಹ ಬೃಹತ್ ಭೂಮಿಯಲ್ಲಿ ಅವನು ಒಂದು ಹಳೆಯ ಕಳೆದುಹೋದ ಪುಸ್ತಕಕ್ಕಾಗಿ ಹುಡುಕಾಡುತ್ತಿರುತ್ತಾನೆ. ತನ್ನ ಜನರನ್ನು ಅದರ ಹುಡುಕಾಟಕ್ಕೆ ಬಿಟ್ಟಿದ್ದಾನೆ. ದರೋಡೆ ನಡೆದ ಸಂದರ್ಭದಲ್ಲಿ ಯಾರಲ್ಲಾದರೂ ಪುಸ್ತಕಗಳಿದ್ದರೆ ಅದನ್ನು ಈತನಿಗೆ ತಲುಪಿಸುತ್ತಾರೆ. ಆದರೆ ಅವನು ಹುಡುಕುವ ಪುಸ್ತಕ ಅದಾಗಿರುವುದಿಲ್ಲ. ಮುರಿದು ಬಿದ್ದ ಇಡೀ ವ್ಯವಸ್ಥೆಯನ್ನು ಪುನರ್ ನಿರ್ಮಿಸಿ ಆಳುವುದು ಅವನ ಕನಸು. ಅದಕ್ಕೆ ಆ ಪುಸ್ತಕ ಭಾರೀ ಸಹಾಯ ಮಾಡುತ್ತದೆ ಎಂದು ಅವನು ನಂಬಿದ್ದಾನೆ. ಆ ಪುಸ್ತಕಕ್ಕೆ ಅಸಾಮಾನ್ಯ ಶಕ್ತಿಯಿದೆ ಎಂದು ಅವನಿಗೆ ಗೊತ್ತಿದೆ. ಅದಕ್ಕಾಗಿಯೇ ತನ್ನ ಗೂಂಡಾಗಳನ್ನು ಎಲ್ಲೆಡೆ ಹರಿಬಿಟ್ಟಿದ್ದಾನೆ. ಹೀಗಿರುವಾಗ ಆ ಮುರಿದುಬಿದ್ದ ನಗರಕ್ಕೆ ಒಬ್ಬ ಅಪರಿಚಿತ ಎಲಿಯ(ಡೆಂಝಿಲ್ ವಾಷಿಂಗ್ಟನ್)ನ ಆಗಮನವಾಗುತ್ತದೆ. ಅವನು ಅಲ್ಲಿಗೆ ಆಗಮಿಸಿರುವುದು ಒಂದಿಷ್ಟು ನೀರಿಗಾಗಿ.



ಅದಕ್ಕೆಂದೇ ಕಾರ್ನೆಗಿಯ ಬಾರ್‌ಗೆ ಆಗಮಿಸಿದ್ದಾನೆ. ಆ ನೀರಿರುವುದು ಒಂದು ನಿಗೂಢ ಜಾಗದಲ್ಲಿ. ನೀರಿಗಾಗಿ ಕೆಲವು ಅಮೂಲ್ಯ ವಸ್ತು ನೀಡುವ ಮೂಲಕ ಅವನು ಎಲ್ಲರ ಗಮನ ಸೆಳೆಯುತ್ತಾನೆ. ಅಲ್ಲಿರುವ ದುಷ್ಕರ್ಮಿಗಳು ಅವನ ಮೇಲೆ ಎರಗುತ್ತಾನೆ. ಆದರೆ ಅವನದು ಅದಮ್ಯ ಶಕ್ತಿ. ದೈತ್ಯ ವ್ಯಕ್ತಿತ್ವ. ನಿರ್ಲಿಪ್ತ ಕಣ್ಣುಗಳು. ಒಂದು ಕ್ಷಣದಲ್ಲೇ ಹಲವರ ಹೆಣ ಬೀಳುತ್ತದೆ. ಅವನಿಗೆ ಆ ಹಿಂಸೆ ಇಷ್ಟವಿರುವುದಿಲ್ಲ. ಆದರೆ ಅಲ್ಲಿರುವ ದುಷ್ಟರು ಹಲವು ದಾರಿಹೋಕರನ್ನು ಕೊಂದು, ಅವರನ್ನು ದರೋಡೆ ಮಾಡಿರುವುದನ್ನು ಅವನು ಹಾದುಬಂದ ಹಾದಿಯಲ್ಲಿ ಗಮನಿಸಿದ್ದಾನೆ. ಬಾರ್‌ನಲ್ಲಿ ನಡೆದ ಹೋರಾಟ ಅವನನ್ನು ಕಾರ್ನೆಗಿಯ ಕಡೆ ತಲುಪಿಸುತ್ತದೆ. ಒಂದು ದಿನದಮಟ್ಟಿಗೆ ತನ್ನ ಅತಿಥಿಯಾಗಬೇಕು ಎಂದು ಕಾರ್ನೆಗಿ ಒತ್ತಾಯಿಸುತ್ತಾನೆ. ಎಲಿ ಒಪ್ಪುತ್ತಾನೆ. ಎಲಿಯ ಗುಟ್ಟನ್ನು ತಿಳಿದುಕೊಳ್ಳಲು, ರಾತ್ರಿ ಆತನ ಕೋಣೆಗೆ ತನ್ನ ಕುರುಡಿ ಪ್ರೇಯಸಿ ಕ್ಲಾಡಿಯಾಳನ್ನು ಕಾರ್ನೆಗಿ ಕಳುಹಿಸುತ್ತಾನೆ. ಆದರೆ ಎಲಿ ಆಕೆಯನ್ನು ನಯವಾಗಿ ನಿರಾಕರಿಸುತ್ತಾನೆ. ಆತನೊಳಗಿನ ಶಕ್ತಿ ಆ ಕುರುಡಿಗೆ ಅನುಭವವಾಗುತ್ತದೆ. ಕಾರ್ನೆಗಿ ಸಿಟ್ಟಾಗುತ್ತಾನೆ. ಪ್ರೇಯಸಿಯ ಮಗಳು ಅಥವಾ ಮಲಮಗಳು ಸೊಲಾರಳನ್ನು ಕಳುಹಿಸುತ್ತಾನೆ. ಆದರೆ ಆಕೆಯನ್ನೂ ನಿರಾಕರಿಸುತ್ತಾನೆ. "ತಾನು ವಿಫಲಳಾಗಿ ಹೋದರೆ ಕಾರ್ನೆಗಿ ತನ್ನ ತಾಯಿಯನ್ನು ಹಿಂಸಿಸುತ್ತಾನೆ. ಆದುದರಿಂದ ಒಂದು ರಾತ್ರಿ ನಿನ್ನ ಜೊತೆಗೆ ಇರಲು ಬಿಡು" ಎಂದು ಆಕೆ ಮನವಿ ಮಾಡುತ್ತಾಳೆ. ಎಲಿ ಒಪ್ಪುತ್ತಾನೆ. ಅದೇ ಸಂದರ್ಭದಲ್ಲಿ ಸೊಲಾರಗೆ ಒಂದು ಸತ್ಯ ಮನವರಿಕೆಯಾಗುತ್ತದೆ. ಅದೆಂದರೆ 'ಅಪರಿಚಿತ'ನಿಗೆ ಪುಸ್ತಕ ಓದುವ ಸಾಮರ್ಥ್ಯವಿದೆ! ಅವನು ಪುಸ್ತಕವೊಂದನ್ನು ತನಗೆ ತಿಳಿಯದಂತೆ ಮುಚ್ಚಿಡಲು ಪ್ರಯತ್ನಿಸುತ್ತಿರುವುದು ಗಮನಕ್ಕೆ ಬರುತ್ತದೆ. ಮುಂದೆ ಅದು ಕಾರ್ನೆಗಿಗೆ ತಿಳಿಯುತ್ತದೆ. ಕಾರ್ನೆಗಿ ಆ ಪುಸ್ತಕಕ್ಕಾಗಿ ಎಲಿಯ ಬೆನ್ನು ಬೀಳುತ್ತಾನೆ.

ಅಲ್ಲಿಂದ ಎಲಿ ಮತ್ತು ಕಾರ್ನೆಗಿಯ ಗೂಂಡಾಗಳ ನಡುವಿನ ಹೋರಾಟ ಆರಂಭವಾಗುತ್ತದೆ. ಆ ಪುಸ್ತಕಕ್ಕಾಗಿ ಹಲವು ಜೀವಗಳು ನೆಲ ಅಪ್ಪುತ್ತದೆ. ಎಲ್ಲ ಹೋರಾಟಗಳ ಬಳಿಕ ಎಲಿ ಆ ಪುಸ್ತಕವನ್ನು ಅನಿವಾರ್ಯವಾಗಿ ಕಾರ್ನೆಗಿಗೆ ಒಪ್ಪಿಸಬೇಕಾಗುತ್ತದೆ. ಸೊಲಾರಳ ಜೀವ ಅಪಾಯದಲ್ಲಿರುವುದರಿಂದ ಆತ ತನ್ನಲ್ಲಿದ್ದ ಪುಸ್ತಕವನ್ನು ಕಾರ್ನೆಗಿಗೆ ಒಪ್ಪಿಸುತ್ತಾನೆ. ಕಾರ್ನೆಗಿಯಿಂದ ಪಾರಾಗಿ ಎಲಿ ಮತ್ತು ಸೋಲಾರ ಅಮೆರಿಕದ ಪಶ್ಚಿಮವನ್ನು ತಲುಪುತ್ತಾರೆ. ಎಲಿಯ ಬದುಕಿನ ಬಹುಮುಖ್ಯ ಧ್ಯೇಯವೇ ಆ ಪುಸ್ತಕದಲ್ಲಿರುವ ಪ್ರೀತಿ, ಸ್ನೇಹ, ನಂಬಿಕೆಯನ್ನು ಅಮೆರಿಕದ ಪಶ್ಚಿಮದ ಕಡೆಗೆ ತಲುಪಿಸುವುದಾಗಿತ್ತು. ಆದರೆ ಪುಸ್ತಕವೇ ಅವನಲ್ಲಿಲ್ಲ. ಸೋಲಾರ ಕೇಳುತ್ತಾಳೆ "ನೀನೀಗ ಆ ಪುಸ್ತಕವನ್ನು ಹೇಗೆ ಪಶ್ಚಿಮದ ಕಡೆಗೆ ತಲುಪಿಸುತ್ತೀಯ?" ಎಲಿ ಹೇಳುತ್ತಾನೆ "ಅದರಲ್ಲಿರುವ ಪ್ರತಿ ಅಕ್ಷರಗಳೂ ನನಗೆ ನೆನಪಿದೆ."

ಇತ್ತ ಕಾರ್ನೆಗಿ ಭದ್ರಪಡಿಸಿದ್ದ ಪುಸ್ತಕವನ್ನು ತಂತ್ರಜ್ಞನ ಸಹಾಯದಿಂದ ಬಿಡಿಸುತ್ತಾನೆ. ನೋಡಿದರೆ ಅದರ ತುಂಬಾ ಖಾಲಿ ಹಾಳೆಗಳು. ಅದರಲ್ಲೇನೂ ಇಲ್ಲ. ಅವನು ವಿಕಾರವಾಗಿ ಚೀರುತ್ತಾನೆ. ಆತನ ಕುರುಡಿ ಪ್ರೇಯಸಿ ಆ ಪುಸ್ತಕವನ್ನು ಬಿಡಿಸುತ್ತಾಳೆ. ಖಾಲಿ ಹಾಳೆಗಳನ್ನು ಮುಟ್ಟಿದಂತೆಯೇ ಅದರಲ್ಲಿರುವ ಸಾಲುಗಳು ಅವಳ ಒಳಗೆ ಅನುಭವವಾಗುತ್ತಾ ಹೋಗುತ್ತದೆ. ಯಾಕೆಂದರೆ ಅದು ಬ್ರೈಲ್ ಲಿಪಿಯಲ್ಲಿತ್ತು. ಅದನ್ನು ಓದಿ ವಿವರಿಸಲು ಕಾರ್ನೆಗಿ ಆದೇಶಿಸುತ್ತಾನೆ. ಆದರೆ ಆಕೆಗೆ ಆ ಪುಸ್ತಕ, ಅವನ ಆದೇಶವನ್ನು ಧಿಕ್ಕರಿಸುವ ಶಕ್ತಿಯನ್ನು ನೀಡುತ್ತದೆ.

ಇಡೀ ಭೂಮಿ ವಿಚ್ಛಿದ್ರವಾಗಿದ್ದಾಗ ಮನುಷ್ಯನನ್ನು ಪರಸ್ಪರ ಬೆಸೆಯುವುದು ನಾಗರಿಕತೆಯಲ್ಲ, ಬರೇ ನಂಬಿಕೆ ಎನ್ನುವುದನ್ನು ಚಿತ್ರ ಹೇಳುತ್ತದೆ. ಚಿತ್ರದಲ್ಲಿ ಆ ಪುಸ್ತಕ 'ಬೈಬಲ್' ಆಗಿರುತ್ತದೆ. ಆದುದರಿಂದ ಚಿತ್ರಕ್ಕೆ ಕೆಲವು ಮಿತಿಗಳೂ, ಪೂರ್ವಾಗ್ರಹಗಳು ಅಂಟಬಿಡುತ್ತದೆ. ಆದರೆ ಇದರಾಚೆಗೆ ಚಿತ್ರವನ್ನು ತಂದು ನೋಡಿದರೆ, ಅದರ ಆಶಯ ನಮ್ಮೊಳಗೆ ಬೆಳೆಯುತ್ತಾ ಹೋಗುತ್ತದೆ. ಎಲಿ ತನ್ನೊಳಗಿನ ಬೈಬಲ್‌ಗೆ ಪುಸ್ತಕರೂಪ ನೀಡಿ ಸಾಯುತ್ತಾನೆ. ಮುರಿದ ಬಿದ್ದ ಜಗತ್ತನ್ನು ನಂಬಿಕೆಯ ಮೂಲಕ ಕಟ್ಟುವ ಆಶಯವನ್ನು ಎಲಿಯಿಂದ ಸೋಲಾರ ತನ್ನದಾಗಿಸಿಕೊಂಡು ತನ್ನ ನಗರಕ್ಕೆ ಮರಳುವಲ್ಲಿಗೆ ಚಿತ್ರ ಮುಗಿಯುತ್ತದೆ.

ಎಲಿಯ ವ್ಯಕ್ತಿತ್ವ ಇಡೀ ಕತೆಯ ಕೇಂದ್ರ ಬಿಂದು. ಈತ ಜೀಸಸ್‌ನಂಥವನಲ್ಲ, ಇಡೀ ಭೂಮಿಯಲ್ಲಿ ಮತ್ತೆ ಪರಸ್ಪರ ನಂಬಿಕೆಯನ್ನು ಬಿತ್ತಿ, ಹೊಸ ನಾಗರಿಕತೆಯನ್ನು ಕಟ್ಟುವುದಕ್ಕಾಗಿ ಅವನು ಹಲವರೊಡನೆ ಸೆಣಸುತ್ತಾನೆ. ಹಲವರನ್ನು ಕೊಲ್ಲುತ್ತಾನೆ. ತಾನೂ ಗಾಯಗೊಳ್ಳುತ್ತಾನೆ. ಕೊನೆಗೂ ತನ್ನ ಉದ್ದೇಶವನ್ನು ಸಾಧಿಸುತ್ತಾನೆ. ಕ್ಲಾಡಿಯಾ ಪಾತ್ರ ಸಣ್ಣದಾದರೂ, ಇಡೀ ಕತೆಗೆ ಆಳ, ಅಗಲವನ್ನು ಕೊಡುತ್ತದೆ. ಒಂದು ಪುಸ್ತಕವನ್ನು ತನ್ನದಾಗಿಸಿಕೊಳ್ಳುವ ನಿರೀಕ್ಷೆಯಲ್ಲಿ ಹಲವು ಕಾಲಗಳನ್ನು ಕಳೆದು, ಹೋರಾಟ ಮಾಡಿ ತನ್ನದಾಗಿಸಿಕೊಂಡರೂ, ಅದನ್ನು ಓದಲು ಕಾರ್ನೆಗಿ ಅಸಮರ್ಥನಾಗುವುದರಲ್ಲಿ ಅವನ ದುರಂತವನ್ನು ಚಿತ್ರ ಕಟ್ಟಿಕೊಡುತ್ತದೆ. ಎಲಿಯ ನಿಸ್ವಾರ್ಥ ಕರ್ಮ ಮತ್ತು ಅವನ ನಂಬಿಕೆ ಅವನನ್ನು ಅವನ ಗುರಿಯೆಡೆಗೆ ಸಾಗಿಸುತ್ತದೆ. ಮತ್ತು ಆ ನಂಬಿಕೆಯೇ ವಿಶ್ವವನ್ನು ಮತ್ತೊಮ್ಮೆ ಶುರುವಿನಿಂದ ಮುನ್ನಡೆಸುತ್ತದೆ. ಆ ನಂಬಿಕೆಯ ಬಲದೊಂದಿಗೆ ಸೋಲಾರ ಮತ್ತೆ ತನ್ನ ಮುರಿದು ಬಿದ್ದ ನಗರಕ್ಕೆ ಮರಳುತ್ತಾಳೆ.

ಸಂಗೀತ ಮತ್ತು ಛಾಯಾಗ್ರಹಣ ಭೂಮಿಯ ದುರಂತ, ಕ್ರೌರ್ಯ ಮತ್ತು ಹೊಸ ನಿರೀಕ್ಷೆಗಳನ್ನು ಕಟ್ಟಿಕೊಡುವಲ್ಲಿ ಉದ್ದಕ್ಕೂ ಯಶಸ್ವಿಯಾಗುತ್ತದೆ. ಚಿತ್ರದೊಳಗೊಂದು ದರ್ಶನವಿದೆ. ಆ ದರ್ಶನವೇ ಚಿತ್ರವನ್ನು ನಮಗೆ ಹತ್ತಿರವಾಗಿಸುತ್ತದೆ. ತೀರಾ ಶ್ರೇಷ್ಠವಲ್ಲದಿದ್ದರೂ; ಒಂದಿಷ್ಟು ಆಪ್ತತೆಯನ್ನು ಕಟ್ಟಿಕೊಡುವ ಚಿತ್ರ ಇದು. ಹಾಗೆಂದು ಇದು ಎಲ್ಲರಿಗೂ ಇಷ್ಟವಾಗಬೇಕೆಂದೂ ಇಲ್ಲ. ಯಾಕೆಂದರೆ, ಚಿತ್ರ ಪ್ರತಿಪಾದಿಸುವ ಆಶಯವನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದೂ ಇಲ್ಲ.

■ ಬಿ.ಎಂ. ಬಶೀರ್


15000 ರೈತರನ್ನು ಒಕ್ಕಲೆಬ್ಬಿಸಿರುವ ಮೋದಿ

ನರೇಂದ್ರ ಮೋದಿ ಅಂದರೆ ಅಭಿವೃದ್ಧಿಯ ಹರಿಕಾರ, ಅವರ ಆಡಳಿತದಲ್ಲಿ ಗುಜರಾತ್ ರಾಜ್ಯ ಭಾರಿ ಏಳಿಗೆ ಕಂಡಿದೆ, ನಂಬರ್ ಒನ್ ಸ್ಥಾನ ಪಡೆದುಕೊಂಡಿದೆ ಎಂಬುದನ್ನೆಲ್ಲ ನಂಬುವವರು ಭ್ರಮಾಲೋಕದಲ್ಲಿ ಬದುಕುತ್ತಿದ್ದಾರೆ. ಪಾಪ, ಅವರಿಗೆ ರಾಜ್ಯದ ಅಸಲಿ ಸ್ಥಿತಿಗತಿಯ ಅರಿವಿಲ್ಲ, ಅವರಿಗೆ ಅಲ್ಲಿನ ಬಡ ರೈತರು, ಮಹಿಳೆಯರು, ಮಕ್ಕಳು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಅನುಭವಿಸುತ್ತಿರುವ ಪಾಡುಗಳೇನೆಂದು ತಿಳಿಯದು. ಗುಜರಾತ್‌ನಲ್ಲಿ ಅಭಿವೃದ್ಧಿಯಾಗಿರುವುದು ಕಾರ್ಪೋರೇಟ್ ಧಣಿಗಳ ತಿಜೋರಿ ಮಾತ್ರ ಎನ್ನುವುದರ ಅರಿವು ಅವರಿಗಿಲ್ಲ. ಗುಜರಾತ್ ಸರ್ಕಾರ ಸಾವಿರಾರು ಎಕರೆ ಕೃಷಿಭೂಮಿಯನ್ನು ಉದ್ಯಮಪತಿಗಳಿಗೆ ಧಾರೆಯೆರೆಯುತ್ತಾ, ತೆರಿಗೆ ಇತ್ಯಾದಿಗಳಲ್ಲಿ ಭಾರಿ ಭಾರಿ ರಿಯಾಯಿತಿ, ವಿನಾಯಿತಿಗಳನ್ನು ನೀಡುತ್ತಿರುವ ಬಗೆ ಅಲ್ಲಿನ ರೈತರ ಗೋಳನ್ನು ಕೇಳುವವರೇ ಇಲ್ಲವೆಂಬ ವಿಚಾರವೂ ಅವರಿಗೆ ಗೊತ್ತಿಲ್ಲ. ಇದಕ್ಕೆ ಇತ್ತೀಚಿನ ನಿದರ್ಶನವೆಂದರೆ ಧೋಲೇರಾ ವಿಶೇಷ ಹೂಡಿಕೆ ವಲಯ (DSIR). ಇದು




ಮೋದಿಯ ಪ್ರತಿಷ್ಠಿತ ಯೋಜನೆಗಳಲ್ಲೊಂದು.

ಅಹಮದಾಬಾದ್‌ನಿಂದ 100 ಕಿ.ಮೀ. ದೂರದಲ್ಲಿರುವ ಈ ಪ್ರದೇಶವನ್ನೊಂದು ದೊಡ್ಡ ವಿಶ್ವ ವಾಣಿಜ್ಯ ಕೇಂದ್ರವಾಗಿ ಪರಿವರ್ತಿಸಲಾಗುತ್ತದಂತೆ. ಇದು ಸಂಪೂರ್ಣವಾದಾಗ ಉದ್ಯೋಗಾವಕಾಶಗಳು ದುಪ್ಪಟ್ಟಾಗಲಿವೆಯಂತೆ; ಔದ್ಯಮಿಕ ಉತ್ಪನ್ನಗಳ ಪ್ರಮಾಣ ಮೂರು ಪಟ್ಟು ಹೆಚ್ಚಲಿದೆಯಂತೆ; ರಫ್ತಿನ ಪ್ರಮಾಣದಲ್ಲಿ ನಾಲ್ಕು ಪಟ್ಟು ಏರಿಕೆಯಾಗಲಿದೆಯಂತೆ. ಈ ಧೋಲೆರಾ ಎಸ್‌ಐಆರ್ ಯೋಜನೆಗಾಗಿ 920 ಚದರ ಕಿ.ಮೀ.ನಷ್ಟು ವಿಸ್ತಾರವಾದ ಭೂಮಿಯನ್ನು ಸ್ವಾಧೀನಪಡಿಸಲು ಹೊರಟಿರುವ ಮೋದಿ ಸರ್ಕಾರ 2009ರ ಎಸ್‌ಐಆರ್ ಕಾಯ್ದೆಯಡಿ ರೈತರಿಗೆ ನೋಟಿಸ್ ಜಾರಿ ಮಾಡಿ ಅವರಲ್ಲಿರುವ ಎಲ್ಲಾ ಭೂಮಿಗಳನ್ನು ಸರ್ಕಾರಕ್ಕೆ ಒಪ್ಪಿಸಲು ಆದೇಶಿಸಿದೆ. ಸುಮಾರು 22 ಹಳ್ಳಿಗಳಲ್ಲಿನ 15,000 ರೈತರಿಗೆ ಸೇರಿರುವ ಈ ಜಮೀನುಗಳ ಬಹುತೇಕ ಭಾಗ ಫಲವತ್ತಾದ ಕೃಷಿಭೂಮಿಯಾಗಿದೆ. ಈಗ ಇದರ ಬಹುಪಾಲು ಕಾರ್ಪೋರೇಟ್‌ಗಳು ಹಾಗೂ ರಿಯಲ್ ಎಸ್ಟೇಟ್ ಕುಳಗಳ ಜೋಳಿಗೆಗೆ ಬೀಳಲಿರುವುದರ ಬಗ್ಗೆ ಅನುಮಾನವಿಲ್ಲ. ಹೀಗೆ ತಮ್ಮೆಲ್ಲಾ ಕೃಷಿಭೂಮಿಗಳನ್ನು ಕಳೆದುಕೊಳ್ಳುವ ರೈತರಿಗೆ ಅದರ ಅರ್ಧದಷ್ಟು ಭೂಮಿಯನ್ನು ಬೇರೊಂದೆಡೆ ನೀಡುವ ಆಮಿಷವನ್ನು ಒಡ್ಡಲಾಗುತ್ತಿದೆ. ಆದರೆ ವಾಸ್ತವವಾಗಿ ಇವೆಲ್ಲ ಹೆಚ್ಚಾಗಿ ಉಪ್ಪುಸೇರಿದ ಭೂಮಿಗಳು! ಅಲ್ಲಿ ಹುಲ್ಲು [illegible] ಬೆಳೆಯಲು ಸಾಧ್ಯವಿಲ್ಲ! ಮೋದಿಯ ತಥಾಕಥಿತ 'ಅಭಿವೃದ್ಧಿ'ಯೊಳಗೆ ಇದೊಂದೇ ಅಲ್ಲ, ಇಂತಹ ನೂರಾರು ಕಣ್ಣೀರ ಕಥನಗಳು ಅಡಗಿವೆ ■



ಸಂದರ್ಶನ

ಎಂಬತ್ತರ ಗಡಿ ದಾಟಿದ ಕವಿ ಬಿ.ಎ.ಸನದಿಯವರೊಡನೆ ಒಂದು ಸಂಜೆ


ಬಿ.ಎ. ಸನದಿ


ಸುಮಾರು ಮೂರೂವರೆ ದಶಕಗಳಷ್ಟು ದೀರ್ಘ ಕಾಲ ಹೊರನಾಡುಗಳಲ್ಲಿ ಕಳೆದು, ತಮ್ಮ ಇಳಿವಯಸ್ಸಿನಲ್ಲಿ ಆರೋಗ್ಯರಕ್ಷಣೆಗೆ ಅನುಕೂಲವೆಂದು ಇತ್ತೀಚೆಗೆ ಕರಾವಳಿಯ ಕುಮಟಾ ಪಟ್ಟಣಕ್ಕೆ ಬಂದು ನೆಲೆಸಿರುವ ಕವಿ ಡಾ.ಬಿ.ಎ.ಸನದಿ ಅವರಿಗೆ 80 ತುಂಬಿದ ನಿಮಿತ್ತ ಅವರ ಅಭಿನಂದನಾ ಗ್ರಂಥ '80ರ ಪಯಣ' ಲೋಕಾರ್ಪಣೆಗೊಳ್ಳುವ ಸಂದರ್ಭದಲ್ಲಿ ಅವರೊಡನೆ ಕಳೆದ ಒಂದು ಸಂಜೆಯ ಕ್ಷಣಗಳು ಇಲ್ಲಿವೆ.

ಸನದಿಯವರು ಈವರೆಗೆ ಕಾವ್ಯ, ವಿಮರ್ಶೆ, ನಾಟಕ, ಸಣ್ಣ ಕತೆ, ಅನುವಾದ, ಸಂಪಾದನೆ, ಶಿಶು ಸಾಹಿತ್ಯ-ಹೀಗೆ ಅನೇಕ ಪ್ರಕಾರಗಳಲ್ಲಿ ಉಳುಮೆ ಮಾಡಿ ಸುಮಾರು ಅರವತ್ತು ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. 2011ರ ಏಪ್ರಿಲ್ ತಿಂಗಳೊಂದರಲ್ಲೇ ಇವರು ತಮ್ಮ ಹುಟ್ಟು ಜಿಲ್ಲೆ ಬೆಳಗಾವಿ ಹಾಗು ಅಳಿಯತನದ ಉತ್ತರ ಕನ್ನಡದ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳ ಸರ್ವಾಧ್ಯಕ್ಷತೆಯನ್ನು ವಹಿಸಿದ್ದು ಒಂದು ವಿಶೇಷ. ಇವರು ಮುಂಬೈ ಕರ್ನಾಟಕ ಸಂಘದ ಕಾರ್ಯಾಧ್ಯಕ್ಷ ಹಾಗೂ ವಿಶ್ವಸ್ಥ ಮಂಡಳಿಯ ಉಪಾಧ್ಯಕ್ಷರಾಗಿ ಹೊರನಾಡಿನಲ್ಲಿ ಕೈಗೊಂಡ ಕನ್ನಡ ಕೈಂಕರ್ಯ ಮಾಡಿದ್ದು ಮಹತ್ವದ ಸಂಗತಿಯಾಗಿದೆ. ಮುಂಬೈ ಆಕಾಶವಾಣಿಯಲ್ಲಿ ಕನ್ನಡವನ್ನು ಉಳಿಸಿದವರೇ ಸನದಿಯವರೆಂಬುದು ಇವರ ಹೆಚ್ಚುಗಾರಿಕೆ. ಯಾವುದೇ ಪಂಥ-ಪಂಗಡದಲ್ಲಿ ಶಾಮೀಲರಾಗದ ಈ ಮುಸ್ಲಿಮ್ ಸಮುದಾಯದ ಹಿರಿಯ ಕವಿ ತಮ್ಮಷ್ಟಕ್ಕೆ ತಾವೇ ಸಾಹಿತ್ಯಕೃಷಿ ಮಾಡುತ್ತ ಬಂದವರು.

ವಿವೇಕ: ನಮಸ್ಕಾರ ಸಾರ್. ನೀವು ನಮ್ಮ ಕರಾವಳಿಗೆ ಬಂದು ಮನೆ ಮಾಡಿದ ನಂತರ ಉತ್ತರ ಕನ್ನಡ ಜಿಲ್ಲೆಯ ಅನೇಕ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದೀರಿ. ಈ ಜಿಲ್ಲೆಯೂ ಪ್ರೀತಿಯಿಂದಲೇ ನಿಮ್ಮನ್ನು ಬರಮಾಡಿಕೊಂಡಿದೆ. ಮೂಲತಃ ನಿಮ್ಮದು ಬೆಳಗಾವಿ ಜಿಲ್ಲೆ ಅಲ್ವಾ? ಅಲ್ಲಿಯ ನಿಮ್ಮ ಬಾಲ್ಯ, ಶಿಕ್ಷಣ, ಕುಟುಂಬದ ನೆರವು ಇತ್ಯಾದಿ ಹೇಗಿತ್ತು ಅಂತ ಹೇಳ್ತೀರಾ?

ಸನದಿ: ಹೌದು, ನನ್ನದು ಬೆಳಗಾವಿ ಜಿಲ್ಲೆ, ನಮ್ಮೂರು ಶಿಂದೊಳ್ಳಿ. ಬೆಳಗಾವಿಯಿಂದ ಏಳೆಂಟು ಕಿ.ಮಿ. ದೂರದಲ್ಲಿರುವ ಸಣ್ಣ ಹಳ್ಳಿ. ನಮ್ಮದು ಬಡ ಬೇಸಾಯಗಾರರ ಮನೆತನ. ಇದು, ನಾನು ಚಿಕ್ಕವನಿರುವಾಗಿನ ಮಾತು. ಈಗ ನಮ್ಮೂರಿಗೆ ಮೊದಲಿನ ಗ್ರಾಮೀಣ ಸ್ವರೂಪವೇ ಉಳಿದಿಲ್ಲ, ಈಗ ಆ ನಮ್ಮ ಹಳೆಯ ಮನೆಯೂ ಇಲ್ಲ, ಬೇಸಾಯ ಮಾಡುವವರೂ ಇಲ್ಲ, ಬೆಳಗಾವಿಯ ಮಾಧ್ಯಮಿಕ ಶಾಲೆಯೊಂದರಲ್ಲಿ ಶಿಕ್ಷಕನಾಗಿರುವ ನನ್ನ ತಮ್ಮ ಹೊಸ ಮನೆ ಕಟ್ಟಿಸಿದ್ದಾನೆ. ತೀರಿ ಹೋಗಿರುವ ನನ್ನ ತಂದೆಯ ತಲೆಮಾರಿನಿಂದಲೇ ಬೇಸಾಯ ನಿಂತುಹೋಗಿದೆ. ಎಂಟು ದಶಕಗಳ ಹಿಂದೆ ನಾನು ಹುಟ್ಟಿದ್ದು, ಬೆಳೆದದ್ದು ಅದೇ ಹಳ್ಳಿಯಲ್ಲಿ. ನನಗಿನ್ನೂ ಮೂರು ವರ್ಷ ತುಂಬುವ ಮೊದಲೇ ನನ್ನ ತಾಯಿ ತೀರಿಕೊಂಡಿದ್ದಳು. ಒಂದೆರಡು ವರ್ಷ ನನ್ನ ತಾಯಿಯ ತವರೂರಿನಲ್ಲಿದ್ದ, ವಿಧವೆ ದೊಡ್ಡಮ್ಮ ನಮ್ಮ ಮನೆಯಲ್ಲಿದ್ದು ನನ್ನನ್ನೂ, ನನ್ನ ಅಕ್ಕನನ್ನೂ ನೋಡಿಕೊಂಡಳು. ಆನಂತರ ನನ್ನ ಸೋದರ ಮಾವಂದಿರ ಉಪದೇಶಕ್ಕೆ ಒಳಗಾಗಿ ನಮ್ಮ ತಂದೆ ನನ್ನ ಚಿಕ್ಕಮ್ಮನ ಜೊತೆಗೆ ಮದುವೆ ಮಾಡಿಕೊಂಡರು. ಜೊತೆಗೆ ದೊಡ್ಡಮ್ಮನೂ ಇರುತ್ತಿದ್ದಳು. ಬಹುಕಾಲ ನನ್ನನ್ನು ಅತ್ಯಂತ ಮಮತೆಯಿಂದ ಸಾಕಿ ಬೆಳೆಸಿದವಳು ದೊಡ್ಡಮ್ಮನೇ. ಯಾಕೋ ಏನೋ, ಚಿಕ್ಕಮ್ಮ ನನ್ನನ್ನೂ ನನ್ನ ಅಕ್ಕನನ್ನೂ ಅಷ್ಟಾಗಿ ಪ್ರೀತಿಸಲೇ ಇಲ್ಲ, ಆದರಿಂದ ನನ್ನ ತಂದೆಗೆ ತುಂಬಾ ಬೇಸರವಾಗುತ್ತಿತ್ತು; [illegible]ಕ್ಕಮ್ಮನಿಗೆ ತನ್ನ ತಂಗಿಯನ್ನು ಈ ಮನೆಗೆ ತಂದ[illegible] ಸಫಲವಾಗದಿದ್ದಕ್ಕೆ ನೋವಾಗುತ್ತಿತ್ತು, ನನ್ನ ತಂದೆಗೂ ಚಿಕ್ಕಮ್ಮನಿಗೂ ನಿತ್ಯವೂ ಮಾತಿನ ಮಲ್ಲಯುದ್ಧ ನಡೆಯುತ್ತಲೇ ಇತ್ತು, ನನಗೆ ಐದು ವರ್ಷ ತುಂಬುವುದನ್ನೇ ಕಾಯುತ್ತಿದ್ದ ನನ್ನ ತಂದೆ ಊರಲ್ಲಿಯ ಪ್ರಾಥಮಿಕ ಶಾಲೆಗೆ ನನ್ನನ್ನು ಸೇರಿಸಿದರು. ನಮ್ಮೂರಿನಲ್ಲಿ ಕನ್ನಡ ನಾಲ್ಕನೆಯ ಇಯತ್ತೆಯವರೆಗಿನ ಒಂದೇ ಒಂದು ಶಾಲೆಯಿತ್ತು, ಅದೂ ಏಕಶಿಕ್ಷಕ ಶಾಲೆ! ಒಂದು ದೊಡ್ಡ ಕೋಣೆಯಲ್ಲಿ ನಾಲ್ಕೂ ಇಯತ್ತೆಗಳ ವಿದ್ಯಾರ್ಥಿಗಳು-ಒಬ್ಬರಿಗೊಬ್ಬರು ಒತ್ತಿಕೊಂಡು ಕೂತಿರುತ್ತಿದ್ದೆವು! ಮಾಸ್ತರು, ಯಾವನೊಬ್ಬ ವಿದ್ಯಾರ್ಥಿಯನ್ನು ಗದರಿಸಲು ದೊಡ್ಡ ದನಿಯಿಂದ ಕೂಗಿದರೆ, ನಾವೆಲ್ಲಾ ಅಂಜಿ ಅವರತ್ತ ಹೊರಳಿ ನೋಡುತ್ತಿದ್ದೆವು! ಪುಣ್ಯಕ್ಕೆ ಹಾಗೆ ಗದರಿಸಿಕೊಳ್ಳುವ ಪ್ರಸಂಗ ನನಗೆ ಬರಲೇ ಇಲ್ಲ, ಆದರೂ, ಮಳೆಗಾಲದಲ್ಲಿ ಕೆಸರೇ ಕೆಸರು ತುಂಬಿದ ಓಣಿಯಲ್ಲಿ ನಡೆದು ಶಾಲೆಗೆ ಹೋಗಲು ಅಳುಕಿ, ನಾನು ಶಾಲೆ ತಪ್ಪಿಸಿ ದೊಡ್ಡಮ್ಮನ ಮಡಿಲಲ್ಲಿ ಆಸರೆ ಪಡೆಯುತ್ತಿದ್ದೆ. ಆದರಿಂದ, ನಾನು ಹೆಂಗಸರ ಸಲುಗೆಯಿಂದ ಹಾಳಾಗಿ ಹೋದೇನೆಂಬ ಭ್ರಾಂತಿಯಿಂದ, ಅನೇಕ ಸಲ ನನ್ನ ತಂದೆ ನನ್ನನ್ನು ಬೀದಿಯ ಕೆಸರಿನಲ್ಲೇ ಎಳೆದುಕೊಂಡು ಹೋಗಿ, ಶಾಲೆಯಲ್ಲಿ ನೂಕಿ ಬರುತ್ತಿದ್ದರು! ನಾನು ಪ್ರಾಥಮಿಕ ಮೂರನೆಯ ಇಯತ್ತೆ ದಾಟುವವರೆಗೆ ಹೆಚ್ಚು-ಕಡಿಮೆ ಹೀಗೆಯೇ ಸಾಗಿತ್ತು ನನ್ನ ಕಥೆ...

ಆಮೇಲೆ ನನ್ನ ಬಾಲ್ಯದ ಕತೆ ಹೊಸ ತಿರುವನ್ನೇ ಪಡೆಯಿತು! ನನ್ನನ್ನು ನೋಡಿಕೊಂಡ ದೊಡ್ಡಮ್ಮ ತೀರಿಕೊಂಡಳು. ನನ್ನ ಪಾಲಿನ ನೆರಳಿನಾಸರವೇ ತಪ್ಪಿ ಹೋದಂತಾಗಿ ನಾನು ಸರಿಯಾಗಿ ಊಟವನ್ನೇ ಮಾಡುತ್ತಿರಲಿಲ್ಲ, ಮನೆಗಿಂತ ಶಾಲೆಯಲ್ಲಿ ಹೋಗಿ ಕೂತಿರುವುದೇ ವಾಸಿಯೆನಿಸಿತು. ಅದೇ ಅವಧಿಯಲ್ಲಿ ನಮ್ಮ ಶಾಲೆಗೆ ಹೊಸ ಶಿಕ್ಷಕರು ಬಂದರು. ಅವರು ಮೊದಲಿನಿಂದಲೂ ನನ್ನ ತಂದೆಗೆ ಪರಿಚಿತರು. ಆ ಹಿನ್ನೆಲೆಯಲ್ಲಿ ನನ್ನ ಬಗೆಗೂ ವಿಶೇಷ ಒಲವು ತೋರಿಸುತ್ತಿದ್ದರು. ನಮ್ಮ ವರ್ಗದ ಎಂಟು ವಿದ್ಯಾರ್ಥಿಗಳಲ್ಲಿ ನಾನೇ ಒಂದಿಷ್ಟು ಜಾಣನೆಂದು ಅವರಿಗೆ ಅನಿಸಿದ್ದರಿಂದ ಅವರೊಮ್ಮೆ ನನ್ನ ತಂದೆಯನ್ನು ಶಾಲೆಗೆ ಬರಮಾಡಿಕೊಂಡು, ನನ್ನನ್ನು ನಾಲ್ಕನೆಯ ವರ್ಗದ ಕೊನೆಗೆ ಸರಕಾರೀ ಶಿಷ್ಯವೇತನ ಪರೀಕ್ಷೆಗೆ ಕೂಡ್ರಿಸಬೇಕೆಂದು ಸಲಹೆ ನೀಡಿದರು. 'ಅವನನ್ನು ನೀವೇ ತಯಾರು ಮಾಡಬೇಕು' ಎಂಬುದು ನನ್ನ ತಂದೆಯ ಭಿನ್ನಹ. ಅವರು 'ಆಗಲಿ, ನೋಡೋಣ' ಎಂದರೇನೋ ನಿಜ, ಮುಂದಿನ ಮೂರು ತಿಂಗಳಲ್ಲೇ ಅವರಿಗೆ ಅವರ ಸ್ವಂತ ಊರಿಗೇ ವರ್ಗವಾಗಿ ಬಿಟ್ಟಿತು! ಅವರು ಸೂಚಿಸಿದ ಪರೀಕ್ಷೆಯ ಕನಸು ಕಾಣುತ್ತಿದ್ದ ನನಗೂ, ಮುಂದೇನು ಮಾಡಬೇಕೆಂದು ತಿಳಿಯದ ನನ್ನ ತಂದೆಗೂ ನಿರಾಸೆಯಾಯಿತು. ಮಾಸ್ತರರೂ ನನ್ನ ತಂದೆಗೆ ಸಮಾಧಾನ ಹೇಳಿ, ನಾನು ಯಾವ ಪುಸ್ತಕ ಓದಬೇಕು, ಏನೆಲ್ಲ ಸಿದ್ಧತೆ ಮಾಡಿಕೊಳ್ಳಬೇಕು-ಎಂದು ತಿಳಿ ಹೇಳಿ ನಮ್ಮಿಂದ ಬೀಳ್ಕೊಂಡರು. ನಮ್ಮೂರಿನಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಟರಮೀಡಿಯೇಟ್‌ವರೆಗೆ ಓದಿ, ತಮಗಿದ್ದ ಭೂಮಿ ನೋಡಿಕ್ಕೊಳ್ಳಲು ಮನೆಯಲ್ಲೇ ಉಳಿದಿದ್ದ ಅಶ್ವತ್ಥ್‌ನಾರಾಯಣ ಎಂಬುವರೂ ನನ್ನ ತಂದೆಗೆ ಸಾಕಷ್ಟು ಪರಿಚಯದವರೇ ಆಗಿದ್ದರು. ನನ್ನ ಶಾಲೆ ಮತ್ತು ಮನೆಯಲ್ಲಿ ಊಟದ ಸಮಯವನ್ನು ಹೊರತುಪಡಿಸಿ ಉಳಿದೆಲ್ಲ ಸಮಯವನ್ನು ನಾನು ಅಶ್ವತ್ಥ್‌ನಾರಾಯಣರ ಮನೆಯಲ್ಲೇ ಇದ್ದು, ಅವರು ಹೇಳಿದ್ದನ್ನೆಲ್ಲ ಸರಿಯಾಗಿ ತಿಳಿದುಕೊಂಡು, ಅವರು ಕೊಟ್ಟ ಪಾಠಗಳನ್ನು ಮತ್ತೆ ಮತ್ತೆ ಬರೆದು ತೋರಿಸುವ ರೂಢಿ ಮಾಡಿಕೊಂಡೆ. ಪರೀಕ್ಷೆಯ ಸಮಯ ಸಮೀಪಿಸಿದಾಗ, ನಮ್ಮ ತಂದೆ ಪರೀಕ್ಷೆಯ ಪ್ರವೇಶಕ್ಕಾಗಿ ಫಾರ್ಮ್ ತುಂಬಿ, ನನ್ನಿಂದ ಸಹಿ ಮಾಡಿಸಿಕೊಂಡು, ತಾನೇ ಖುದ್ದಾಗಿ ಬೆಳಗಾವಿಗೆ ಹೋಗಿ ಕೊಟ್ಟು ಬಂದರು. ನಾನು ಮೊತ್ತ ಮೊದಲ ಬಾರಿಗೆ, ತಂದೆಯ ಕೈ ಹಿಡಿದುಕೊಂಡು ನಮ್ಮ ಜಿಲ್ಲಾ ಸ್ಥಳ ಬೆಳಗಾವಿಯನ್ನು ಪ್ರವೇಶಿಸಿ, ಪರೀಕ್ಷೆಗೆ ಕಟ್ಟಿ ಬಂದೆ. ದೈವ ನನ್ನ ಪ್ರಯತ್ನಕ್ಕೆ ಸೈ ಎಂದಿತ್ತು, ನಾನು ಪಾಸಾದೆ. ಮುಂದೆ ಬೆಳಗಾವಿಯ ಜಿ.ಎ. ಹೈಸ್ಕೂಲಿನಲ್ಲಿ ಪ್ರವೇಶ ಪಡೆದು, ಮುಂದಿನ ವಿದ್ಯಾಭ್ಯಾಸ ನಡೆಸಿ, ಈ ಮಧ್ಯೆ 2ನೆಯ ಹಂತದ ಶಿಷ್ಯವೇತನ ಪರೀಕ್ಷೆಯಲ್ಲೂ ಪಾಸಾಗಿ, 1950ರಲ್ಲಿ ಎಸ್.ಎಸ್.ಎಲ್.ಸಿ. ಮುಗಿಸಿ ಹೊರಬಿದ್ದೆ. ಇದಿಷ್ಟು ನನ್ನ ಬಾಲ್ಯದ ಕಥೆ. ವಿವರವಾಗಿ ಹೇಳಿದರೆ, ಇನ್ನೂ ಬೇಕಾದಷ್ಟಿದೆ. ಆದರೆ, ಈಗ ಇಷ್ಟು ಸಾಕು. ಬಡತನದಲ್ಲಿಯೇ ಬಾಳುವೆ ಸಾಗಿಸಿದ ನನ್ನ ತಂದೆಗೆ ಭಾರವಾಗದಂತೆ, ನಾನು ಮಾಧ್ಯಮಿಕ ಶಿಕ್ಷಣ ಪಡೆಯುವಂತೆ ಮೂಲಪ್ರೇರಣೆ ನೀಡಿದ ಆ ಸಿದ್ಧಯ್ಯ ಹಿರೇಮಠ ಗುರುಗಳನ್ನು ನಾನೆಂದಿಗೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.


ಪ್ರಸಿದ್ಧ ವಿದ್ವಾಂಸ ಶಂಭಾ ಜೋಶಿ ಜೊತೆ ಸನದಿ

ವಿವೇಕ: ಓಹ್, ಇದೆಲ್ಲಾ ನಮಗೆ ಗೊತ್ತಿರಲಿಲ್ಲ, ಮುಂದೆ ನೀವು ಬರವಣಿಗೆ ಆರಂಭಿಸಿದ್ದು ಯಾವಾಗ? ಅದಕ್ಕೆ ಪ್ರೇರಣೆ ನೀಡಿದವರು ಯಾರು?

ಸನದಿ: ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ, ಆಡಾಡ್ತ ಹಳ್ಳಿಯ ಜಮೀನುದಾರರ ದುಷ್ಟ ಪ್ರವೃತ್ತಿಯ ಬಗೆಗೊಂದು ತಾಸಿನ ನಾಟಕ ಬರೆದು, ನನ್ನ ಹಳೆಯ ಗೆಳೆಯರನ್ನೆಲ್ಲ ಸೇರಿಸಿ, ಜಮೀನುದಾರನ ಕಾಮುಕ ದೃಷ್ಟಿಗೆ ಬಲಿಯಾಗುವ ನಾಯಕಿಯ ಪಾತ್ರವನ್ನು ನಾನೇ ವಹಿಸಿಕೊಂಡು, ಆ ನಾಟಕವನ್ನು ನಮ್ಮೂರ ಜಾತ್ರೆಯ ಸಂದರ್ಭದಲ್ಲಿ ಆಡಿ, ನಮ್ಮೂರ ರಸಿಕ ರೈತರಿಂದ 'ವಾಹ್ವಾ' ಅನಿಸಿಕೊಂಡದ್ದೂ ಆಯ್ತು. ನನ್ನ ತಂದೆ ಮಾತ್ರ 'ಈ ನಾಟ್ಕಾ-ಪಾಟ್ಕಾ ಮಾಡೋದು ಬಿಟ್ಟು ಮೊದಲು ಚೆನ್ನಾಗಿ ಅಭ್ಯಾಸ ಮಾಡು' ಅಂತ ಗದರಿಸಿದರು. ಸರಿ ಆ ನನ್ನ ಹವ್ಯಾಸಕ್ಕೆ ಅಲ್ಲಿಯೇ ಪೂರ್ಣವಿರಾಮ ಬಿತ್ತು. ಆದರೆ, ನಾನು ಒಂಬತ್ತನೆಯ ವರ್ಗದಲ್ಲಿದ್ದಾಗ, ನಮ್ಮ ಹೈಸ್ಕೂಲಿನ ವಾರ್ಷಿಕೋತ್ಸವಕ್ಕೆ ಹುಬ್ಬಳ್ಳಿಯ 'ನವಯುಗ' ದಿನಪತ್ರಿಕೆ ಸಂಪಾದಕ ಶ್ರೀ ತಿ.ರು. ನೇಶ್ವಿಯವರು ಮುಖ್ಯ ಅತಿಥಿಗಳಾಗಿ ಬಂದು ಕರ್ನಾಟಕ ಏಕೀಕರಣದ ಮಹತ್ವದ ಕುರಿತು ಅಸ್ಖಲಿತ ಶೈಲಿಯ ಭಾಷಣ ಮಾಡಿದರು. ಅದರಿಂದ ಪ್ರಭಾವಿತನಾಗಿ ನಾನು ಅದೇ ರಾತ್ರಿ ಕನ್ನಡಾಭಿಮಾನವನ್ನು ಸೂಸುವ ಕವಿತೆಯೊಂದನ್ನು ಬರೆದು, ಯಾರಿಗೂ ಹೇಳದೆ ಅದನ್ನು ಅವರ ದಿನಪತ್ರಿಕೆಗೆ ಕಳಿಸಿಬಿಟ್ಟೆ. ನನಗೆ ಆಶ್ಚರ್ಯವಾಗುವಂತೆ ಆ ನನ್ನ ಮೊದಲ ಕವನ ಮರುವಾರವೇ ಅವರ ಪತ್ರಿಕೆಯ ಪುರವಣಿಯಲ್ಲಿ ಪ್ರಕಟವಾಗಿತ್ತು! ಆಗ ನನಗಾದ ಮುಗ್ಧ ಸಂತೋಷಕ್ಕೆ ಪಾರವೇ ಇರಲಿಲ್ಲ. ಅದನ್ನು ನನ್ನ ಮಿತ್ರರಿಗೆಲ್ಲ ತೋರಿಸಿದೆ, ಮನಸ್ಸು ತಾಳದೆ ತಂದೆಗೂ ತೋರಿಸಿ ಮತ್ತೆ ಬೈಸಿಕೊಂಡೆ. 'ಮೊದಲು ಮೆಟ್ರಿಕ್ ಪರೀಕ್ಷೆಯಾದರೂ ಮುಗಿಯಲಿ, ಆಮೇಲೆ ಬೇಕಾದರೆ ಬರಿ' ಎಂದು ಹುಕುಮ್ ಚಲಾಯಿಸಿದರು. ಮುಂದಿನ ವರ್ಷವೇ ಮೆಟ್ರಿಕ್ (ಎಸ್.ಎಸ್.ಎಲ್.ಸಿ.) ಪರೀಕ್ಷೆ ಮುಗಿಯಿತು. ಅಲ್ಲಿಯೇ ಹತ್ತಿರದಲ್ಲಿದ್ದ ಲಿಂಗರಾಜ್ ಕಾಲೇಜು ಸೇರಿದೆ. ಅಲ್ಲಿ 'ಬರಹಗಾರರ ಬಳಗ' ಎಂಬ ಅನೌಪಚಾರಿಕ ಸಂಘಟನೆ ಮಾಡಿಕೊಂಡು ಪ್ರತಿವಾರ ಸಭೆ ನಡೆಸಿ, ಹೊಸಹೊಸದನ್ನು ಬರೆದು, ಓದಿ, ಚರ್ಚೆಗೊಳಪಡಿಸಿ, ನಮ್ಮನ್ನು ನಾವೇ ಸುಧಾರಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆವು. ಆಗೊಮ್ಮೆ ಈಗೊಮ್ಮೆ ಪ್ರೊ. ಸುಂಕಾಪುರ ಹಾಗೂ ಭೂಸನೂರಮಠರು ಬಂದು ನಮ್ಮ ಬರಹಗಳನ್ನು ಕೇಳಿ ಹೊರಟು ಹೋಗುತ್ತಿದ್ದರು, ಅಷ್ಟೆ. ನಾನು ಇಂಟರಮೀಡಿಯೇಟ್ ಮುಗಿಸಿ, ಬಿ.ಎ. ವರ್ಗಕ್ಕೆ ಬಂದ ಹೊಸತರಲ್ಲಿ ನಾನೊಂದು ತಪ್ಪು ಮಾಡಿದ್ದೆ. ಬಿ.ಎ. ಪರೀಕ್ಷೆಗೆ ಕನ್ನಡ ವಿಷಯ ಆಯ್ದುಕೊಂಡರೆ, ಮುಂದೆ ಕೆಲಸ ಸಿಗುವುದೇ ಕಷ್ಟ ಎಂದು ಇಬ್ಬರು 'ಅನುಭವಿಕ' ಮಿತ್ರರು ಹೇಳಿದ್ದಕ್ಕೆ ಕಿವಿಗೊಟ್ಟು, ನಾನು ಪದವಿ ಪರೀಕ್ಷೆಗಾಗಿ ಮುಖ್ಯ ವಿಷಯವೆಂದು ಅರ್ಥಶಾಸ್ತ್ರವನ್ನು ಆಯ್ಕೆ ಮಾಡಿಕೊಂಡಿದ್ದೆ! ಅದರೊಡನೆ ಎರಡು ಪೇಪರಿನ ಕನ್ನಡ ವಿಷಯವೂ ಇತ್ತಾದರೂ, ಕನ್ನಡ ಪ್ರಾಧ್ಯಾಪಕರ ಜೊತೆಗಿನ ನನ್ನ ಸಂಪರ್ಕ ಕಡಿಮೆಯಾಗುತ್ತ ಹೋಗಿತ್ತು. ಹೀಗಾಗಿ, ನನ್ನ ಬರವಣಿಗೆ ಏಕಲವ್ಯನ ವ್ರತದಂತೆ ಯಾರ ನೇರ ಮಾರ್ಗದರ್ಶನವಿಲ್ಲದೆ ತನ್ನಷ್ಟಕ್ಕೆ ತಾನೇ ನಡೆದದ್ದು ಎಂದು ಹೇಳಿದರೆ ತಪ್ಪಲ್ಲ.

ಬಂದೆಯಾ ಬಾ ರಾಯಾ

[illegible] 1975 [illegible] ಬರಗಾಲ! [illegible] "ಮಕ್ಕಳ ಮಾರಾಟಕ್ಕ[illegible]" [illegible] -ಬೀದಿಯಲ್ಲಿ ಕುಳಿತಿರುತ್ತಿದ್ದರು! [illegible] ಮುಂಬೈ ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿದ್ದ ಕವಿ ಸ[illegible] ಈಗೊಮ್ಮೆ "ಮಕ್ಕಳ ಮಾರಾಟದ" ಬೋರ್ಡು ಬೀಳುತ್ತದೆ.

ಹರಯದ ಸನದಿಯ ಕರುಳು-ಹೃದಯ ಕಿವುಚಿದಂತಾಗುತ್ತದೆ. ಅವರ ಬತ್ತಿದೆದೆಯಲ್ಲಿ ಮಳೆಗೆ ಮೊರೆಯಿಡುವ ಕವನವೊಂದು ಮೊಳೆಯುತ್ತದೆ. ರೈತರು ಮಳೆಗಾಗಿ ಹಾಹಾಕಾರ ಹಾಕುವ ಹಾಡದು. ಆ ರೂಪಕಕ್ಕೆ "ಬಂದೆಯಾ ಬಾ ರಾಯಾ" ಎಂದು ಹೆಸರಿಡುತ್ತಾರೆ. ಮುಂಬೈ ಆಕಾಶವಾಣಿಯಲ್ಲಿ ಈ ರೇಡಿಯೋ ರೂಪಕ ಪ್ರಸಾರ ಮಾಡುವ ಯೋಜನೆಯೂ ಸಿದ್ಧಪಡಿಸುತ್ತಾರೆ. ಆ ರೂಪಕಕ್ಕೆ ಖ್ಯಾತ ಸಂಗೀತ ನಿರ್ದೇಶಕ ಪಂಡಿತ ರಮೇಶ್ ನಾಡಕರ್ಣಿ ಸಂಗೀತ ಒದಗಿಸುತ್ತಾರೆ. ದಕ್ಷಿಣ ಭಾರತದ ಪ್ರಸಿದ್ಧ ಗಾಯಕಿ ವಾಣಿ ಜಯರಾಮ್ ಬರಗಾಲದ ಬವಣೆ ಕಣ್ಣಿಗೆ ಕಟ್ಟುವಂತೆ ಆ ರೂಪಕ ಪ್ರಸ್ತುತಪಡಿಸುತ್ತಾರೆ.

ಮುಂಬೈ ಆಕಾಶವಾಣಿಯಲ್ಲಿ ಈ ಕನ್ನ[illegible] ಪ್ರಸಾರ ಮುಗಿಯುತ್ತಿದ್ದಂತೆಯೇ "ಭೋರ್" ಎಂದು ಮಳೆ ಸುರಿಯುತ್ತದೆ!! ಅದು ಕಾಕತಾಳೀಯ. ಆದರೆ ಬೆಂದು ಬಸವಳಿದಿದ್ದ ಇಳೆ ಮಳೆಯಿಂದ ತಂಪಾಗುತ್ತದೆ; ನೊಂದು ನವೆಯುತ್ತಿದ್ದ ರೈತಾಪಿವರ್ಗ ನಿಟ್ಟುಸಿರು ಬಿಡುತ್ತದೆ!

ವಿವೇಕ: ನೀವು ಇಲ್ಲಿಗೆ ಬಂದದ್ದು ಮುಂಬೈಯಿಂದ. ನೀವು ಮುಂಬೈಗೆ ಹೋದದ್ದು ಯಾಕೆ ಮತ್ತು ಯಾವಾಗ?

ಸನದಿ: ನೋಡಿ ವಿವೇಕ್, ನಾನು ಮುಂಬೈಗೆ ಒಮ್ಮೆಲೇ ಜಂಪ್' ಮಾಡಲಿಲ್ಲ; ಕರ್ನಾಟಕ ವಿಶ್ವವಿದ್ಯಾಲಯದಿಂದ 1954ರಲ್ಲಿ ಅರ್ಥಶಾಸ್ತ್ರದಲ್ಲಿ ಬಿ.ಎ. ಪರೀಕ್ಷೆಯ ಪರಿಣಾಮ ಹೊರಬಿದ್ದದ್ದೇ ತಡ, ಮನೆಯ ಬಡತನ ನೋಡಲಾಗದೆ, ನನ್ನ ನೌಕರಿಯ ಬೇಟೆ ಶುರುವಾಯಿತು. ಕಾಲೇಜಿನಲ್ಲಿ ನನ್ನ ಸಹಪಾಠಿ ಹಾಗೂ ಕವಿಮಿತ್ರರಾಗಿದ್ದ ಭುಜೇಂದ್ರ ಮಹಿಶವಾಡಿಯವರ ನೆರವಿನಿಂದ; ಅವರು ಆಗಲೇ ಕೆಲಸಕ್ಕೆ ಸೇರಿಕೊಂಡಿದ್ದ ಬೇಡಕಿಹಾಳ್-ಶಮನೇವಾಡಿ ಹೈಸ್ಕೂಲಿನಲ್ಲೇ ನನಗೂ ಕೆಲಸ ಸಿಕ್ಕಿತು. ಗಡಿಭಾಗದಲ್ಲಿ ಹೊಸದಾಗಿ ಆರಂಭವಾಗಿದ್ದ ಆ ಗ್ರಾಮೀಣ ಶಾಲೆಯಲ್ಲಿ ನಾವಿಬ್ಬರೂ ಮೂರು ವರ್ಷ ಸಾಕಷ್ಟು ಶ್ರದ್ಧೆಯಿಂದ ದುಡಿದೆವು. ಅಷ್ಟರಲ್ಲಿ ಮಹಿಶವಾಡಿಯವರೂ ನಾನೂ ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಸ್ನಾತಕೋತ್ತರ ಅಧ್ಯಯನಕ್ಕಾಗಿ ಹೆಸರು ನೋಂದಾಯಿದ್ದೆವು. ಡಾ.ಆರ್.ಎಸ್.ಮುಗಳಿಯವರು ಪ್ರತಿ ರವಿವಾರ ನಮ್ಮಂಥ ಬಾಹ್ಯ ವಿದ್ಯಾರ್ಥಿಗಳ ವರ್ಗ ತೆಗೆಸುತ್ತಿದ್ದರು. ಆದರೆ, ನನಗೆ ಪ್ರತಿ ರವಿವಾರ ಅಷ್ಟು ದೂರದ ಸಾಂಗಲಿಗೆ ಹೋಗುವುದಾಗದೇ, ನನ್ನ ಓದು ಸರಿಯಾಗಿ ನಡೆಯಲಿಲ್ಲ. ಅಂತಿಮ ಪರೀಕ್ಷೆ ಕಟ್ಟಲೇ ಇಲ್ಲ. ಮಹಿಶವಾಡಿಯವರು ಎಮ್.ಎ. ಪದವಿ ಪಡೆದು ಯಾದಗಿರಿಯ ಹೊಸ ಕಾಲೇಜಿಗೆ ಹಾರಿದರು. ನಾನು ಮರುವರ್ಷ ಶಿಕ್ಷಣಾಧಿಕಾರಿಗಳ ಒತ್ತಾಯದಿಂದಾಗಿ ಬೆಳಗಾವಿಗೆ ಹೋಗಿ ಬಿ.ಎಡ್. ಮಾಡಿಕೊಂಡು ಮರಳಿ ಮೊದಲಿನ ಶಾಲೆಗೆ ಹೋದೆ. ಕೆಲವು ತಿಂಗಳಲ್ಲಿ ನಮ್ಮ ಸಂಬಳದ ವಿಷಯದಲ್ಲಿ ಶಾಲೆಯ ವ್ಯವಸ್ಥಾಪಕ ಸಮಿತಿಗೂ ನನಗೂ 'ತಂಟೆ' ಶುರುವಾಯಿತು! ತರಬೇತಿ ಪಡೆದ ಶಿಕ್ಷಕರಿಗೆ ನಿಯಮಾನುಸಾರ ನೀಡಬೇಕಾದ ಆರ್ಥಿಕ ಸವಲತ್ತು ನನಗೆ ನೀಡಲೇ ಇಲ್ಲ. ಯೋಗಾಯೋಗದಿಂದ, ಅದೇ ಕಾಲಕ್ಕೆ ರಾಜ್ಯ ಸರ್ಕಾರದ ಒಂದು ಜಾಹೀರಾತು ನೋಡಿ ಸಮಾಜ ಶಿಕ್ಷಣಾಧಿಕಾರಿ ಸ್ಥಳಕ್ಕೆ ಅರ್ಜಿ ಗುಜರಾಯಿಸಿದೆ. ನನ್ನ ಪುಣ್ಯ! ಆ ಕೆಲಸಕ್ಕೆ ನನ್ನ ಆಯ್ಕೆಯಾಯಿತು. ಐದು ವರ್ಷ ಬೆಳಗಾವಿ ಜಿಲ್ಲೆಯ ರಾಯಭಾಗದಲ್ಲಿ ಕೆಲಸ ಮಾಡುವಷ್ಟರಲ್ಲಿ ಬೆಂಗಳೂರಿನ ವಿಧಾನಸೌಧದ ಮೆಟ್ಟಿಲೇರುವ ಸಂದರ್ಭ ಬಂತು. ರಾಜ್ಯ ಸರ್ಕಾರದವರು ಆಗ ತಾನೆ ಆರಂಭಿಸಿದ್ದ 'ಪಂಚಾಯತಿ ರಾಜ್ಯ' ಪತ್ರಿಕೆಯ ಸಹಾಯಕ ಸಂಪಾದಕನೆಂದು ನನ್ನನ್ನು ನಿಯೋಜಿಸಿದರು. ಅಲ್ಲಿ ಎರಡು ವರ್ಷ ದುಡಿದೆ. ಮುಂದೆ ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯವರು ಕ್ಷೇತ್ರ ಪ್ರಚಾರ ಅಧಿಕಾರಿಯೆಂದು ನನ್ನ ಆಯ್ಕೆ ಮಾಡಿ, ಗುಲ್ಬರ್ಗಾ ವಿಭಾಗಕ್ಕೆ ನೇಮಿಸಿದರು. ನಂತರ ಪಶ್ಚಿಮ ವಲಯದ ಕ್ಷೇತ್ರ ಪ್ರದರ್ಶನಾಧಿಕಾರಿಯೆಂದು ನನ್ನನ್ನು ಗುಜರಾತದ ರಾಜಧಾನಿ ಅಹಮದಾಬಾದಕ್ಕೆ ವರ್ಗಾಯಿಸಿದರು. ಅಲ್ಲಿಯೂ ಮೂರು ವರ್ಷ ಕಳೆದೆ. ಮಹಾತ್ಮ ಗಾಂಧೀಜಿ ಹುಟ್ಟಿದ ಆ ನಾಡಿನಲ್ಲಿ 1969ರಲ್ಲಿ ನಡೆದ ಮತೀಯ ಗಲಭೆಯಲ್ಲಿ ನಡೆದ ಸಾವು-ನೋವುಗಳನ್ನು ಕಣ್ಣಾರೆ ಕಂಡು ನನ್ನ ಜೀವ ತಲ್ಲಣಪಡಿಸಿತು. ಅಲ್ಲಿಂದ ಹೊರಬಿದ್ದರೆ ಸಾಕಪ್ಪಾ ಎನಿಸಿತ್ತು. ಅದೇ ಬಂತು ನೋಡಿ, ಮುಂಬೈ ಆಕಾಶವಾಣಿಯಲ್ಲಿ ಕೆಲಸ ಮಾಡುವ ಸರದಿ! ನಿಜವೆಂದರೆ, ಆಕಾಶವಾಣಿ ಮಾಧ್ಯಮದಲ್ಲಿ ಕೆಲಸ ಮಾಡಬೇಕೆಂದು ನಾನು ಮೊದಲಿನಿಂದಲೂ ಕನಸು ಕಂಡವನೇ. ಆದರೆ, ಮುಂಬೈಯ ಜನಜಾತ್ರೆಯೆಂದರೆ ನನಗೆ ಮೊದಲಿನಿಂದಲೂ ಬೇಜಾರು. ಆದರೂ ಅದೇ ಸಂತೆಯೊಳಗೊಂದು ಮನೆಯ ಮಾಡಿ ಶಬ್ದಗಳಿಗಂಜಿದೊಡೆಂತಯ್ಯ' ಎಂದು ಹಾಡಿಕೊಳ್ಳುತ್ತ ಮುಂದಿನ 18 ವರ್ಷ ಆಕಾಶವಾಣಿಯ ನನ್ನ ಪ್ರೀತಿಯ ಕೆಲಸದಲ್ಲಿ ಖುಷಿಯಿಂದಲೇ ನಿರತನಾದೆ. ನಿವೃತ್ತಿಯ ನಂತರವೂ ಹನ್ನೆರಡು ವರ್ಷ ಅಲ್ಲಿಯ ಕರ್ನಾಟಕ ಸಂಘ ಇತ್ಯಾದಿ ಇತರ ಕನ್ನಡ ಚಟುವಟಿಕೆಗಳಲ್ಲಿ ತೊಡಗಿಕೊಂಡು ಅಲ್ಲಿಯೇ ಉಳಿದೆ. ಇದು ನನ್ನ ಮುಂಬೈ ಪುರಾಣ. ಎಷ್ಟು ಉದ್ದುದ್ದ ಹೇಳಿದರೂ ತೀರದ್ದು!

ವಿವೇಕ: ಆದರೂ ಸಾಕಷ್ಟು ಹೇಳಿದಿರಿ. ಇಷ್ಟೆಲ್ಲ ವರ್ಗಾವಣೆಗಳ ನಡುವೆಯೂ ನೀವು ನಿಮ್ಮ ಸಾಹಿತ್ಯರಚನೆ ಹೇಗೆ ಮಾಡಿದಿರೆಂದು ಆಶ್ಚರ್ಯವಾಗುತ್ತದೆ. ನೀವು ಸಾಹಿತ್ಯದ ವಿವಿಧ ಪ್ರಕಾರದ ಹಲವೊಂದು ಕೃತಿಗಳನ್ನು ಪ್ರಕಟಿಸಿ, ಅನೇಕ ಪುರಸ್ಕಾರಗಳನ್ನು ಪಡೆದಿದ್ದರೂ ಹೊರನಾಡ ಕನ್ನಡ ಕವಿಯೆಂದೇ ಜನ ನಿಮ್ಮನ್ನು ಗುರುತಿಸುತ್ತಾರೆ. ಅಲ್ಲವೇ?

ಸನದಿ: ಕನ್ನಡ ಕವಿಗಳೆಂದ ಮೇಲೆ, ಹೊರನಾಡೇನು, ಒಳನಾಡೇನು? ಎಲ್ಲಿ ವಾಸವಾಗಿದ್ದರೂ ಕನ್ನಡ ಕವಿಗಳೆಂಬುದೇ ಮುಖ್ಯ ಅಲ್ವಾ?

ವಿವೇಕ: ಅದೇನೋ ನಿಜವೇ. ನನಗೆ ತಿಳಿದಮಟ್ಟಿಗೆ ನೀವು ಇತರ ಸಾಹಿತ್ಯ ಕೃತಿಗಳಲ್ಲದೆ, ಸುಮಾರು 20 ಕವನಸಂಕಲನಗಳನ್ನು ಪ್ರಕಟಿಸಿದ್ದೀರಿ. ಬಹಳ ಹಿಂದೆಯೇ ನಿಮ್ಮ ಸಮಗ್ರ ಕಾವ್ಯ ಸಂಕಲನವೂ ಬಂದಿದೆ. ಪ್ರಾತಿನಿಧಿಕ ಕವನ ಸಂಕಲನವೂ ಬಂದಿದೆ. ಹೀಗಿದ್ದೂ, ನಿಮ್ಮನ್ನು ಸುನೀತಗಳ ಸೌಹಾರ್ದ ಕವಿ'ಯೆಂದು ಕೆಲವರು ಕರೆದದ್ದುಂಟು. ಇದಕ್ಕೇನಂತೀರಿ?

ಸನದಿ: ಅನ್ನುವುದೇನು? ಹಾಗೆ ಹೇಳಿದವರು ನನ್ನ ಸುನೀತಗಳನ್ನೇ ಹೆಚ್ಚಾಗಿ ಗಮನಿಸಿರಬಹುದು. 1995ರವರೆಗೆ ಬಂದ ನನ್ನ ಕವನಸಂಕಲನಗಳನ್ನೆಲ್ಲ ಪರಾಮರ್ಶಿಸಿ ಹಿರಿಯ ವಿಮರ್ಶಕರಾದ ಗೌರೀಶ್ ಕಾಯ್ಕಿಣಿಯವರು 'ಮಾನವ್ಯ ಕವಿ' ಎಂಬ ಪುಸ್ತಕವನ್ನು ಪ್ರಕಟಿಸಿದ್ದನ್ನು ನೀವು ನೋಡಿರಬಹುದು. ನನ್ನ ಕಾವ್ಯ ಸಾಧನೆಯುದ್ದಕ್ಕೂ ನಡೆದಿರುವ ಮನುಷ್ಯತ್ವದ ಅನ್ವೇಷಣೆಯ ಜಿಜ್ಞಾಸೆಯನ್ನು ಅವರು ಚೆನ್ನಾಗಿಯೇ ಗುರುತಿಸಿದ್ದಾರೆ: ನನ್ನ ಸುನೀತಗಳಲ್ಲಿಯೂ ಅದೇ ಮಾನವೀಯ ಸ್ರೋತ ಹರಿದುಬಂದದ್ದು ನಿಜ. ಇಂದಿನ ದಿನಮಾನದಲ್ಲಿ ಹಲವೊಂದು ಘಟನೆ-ವಿಘಟನೆಗಳಿಂದ ಮುದುಡಿ ಕೊಂಡಿರುವ ಮನುಷ್ಯನ ಮನಸ್ಸನ್ನು ಅರಳಿಸುವ ಸೃಜನಶೀಲ ಧಾರಣೆಯೊಂದು ನನ್ನ ಸುನೀತಗಳಲ್ಲೂ ಕಂಡ ಕೆಲವರು ಹಾಗೆ ಹೇಳಿರಬಹುದು, ಅಷ್ಟೆ.

ವಿವೇಕ: ಈ ಸುನೀತ ಪ್ರಕಾರಕ್ಕೆ ಅನೇಕ ಕವಿಗಳು ತಮ್ಮ ಕಾಣಿಕೆ ಸಲ್ಲಿಸಿದ್ದಾರೆಂದು ಕೇಳಿದ್ದೇನೆ. ನಿಮ್ಮ ಸುನೀತಗಳ ವೈಶಿಷ್ಟ್ಯವೇನೆಂದು ಹೇಳುತ್ತೀರಾ?

ಸನದಿ: ನಿಜ, ಕನ್ನಡದಲ್ಲಿ ಮಾಸ್ತಿ, ಕುವೆಂಪು, ಬೇಂದ್ರೆ, ಸಣಕಲ್, ಕಣವಿ, ಅಕಬರ ಅಲಿಯವರಂಥ ಅನೇಕ ಹಿರಿಯರು ಈ ಸುನೀತ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ. ಅವರೆದುರು ನನ್ನದು ಅಳಿಲುಸೇವೆಯೆನ್ನಬೇಕು, ಅಷ್ಟೆ. ಈ ಕಾವ್ಯ-ಪ್ರಕಾರ ಕನ್ನಡದಲ್ಲಿ ಕಳೆದ ಶತಮಾನದ ಆರಂಭ ಕಾಲದಲ್ಲಿ ಮೊಗದೋರಿದ ನವೋದಯ ಯುಗದಲ್ಲಿ ಆಂಗ್ಲ ಭಾಷೆಯಿಂದ ಎರವಲು ಪಡೆದು ಬೆಳೆಸಿದ್ದು. ಇದು, 14ಕ್ಕಿಂತ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲದಷ್ಟು ಪಂಕ್ತಿಗಳ ಮಿತಿಯಲ್ಲಿಯೇ ಒಂದು ವಿಚಾರವನ್ನು ಅಡಕಗೊಳಿಸಿ ಪರಿಣಾಮಕಾರಿ ಶಬ್ದಸಂಯೋಜನೆಯಲ್ಲಿ ಕಟ್ಟಿ ಕೊಡುವ ನಾಜೂಕಿನ ಕೆಲಸವೂ ಹೌದು; ಒಂದು ವಿಶಿಷ್ಟ ಕಾವ್ಯ ಶೈಲಿಯನ್ನೇ ಅಪೇಕ್ಷಿಸುವ ಚಾತುರ್ಯದ ರಚನೆಯೂ ಹೌದು. ನಾನು ನನ್ನ ಪ್ರ-ಪ್ರಥಮ 'ಗೀತ-ಸುನೀತ' ಎಂಬ ಸುನೀತದ ಕೊನೆಯಲ್ಲಿ ನನ್ನದೇ ಆದ ವ್ಯಾಖ್ಯೆಯೊಂದನ್ನು ನಿರ್ಮಿಸಿಕೊಂಡಿದ್ದೆ: "ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತ/ ಭಾವದಲ್ಲೇ ಕಾವು ಪಡೆದು ಬಂದ ಧ್ವನಿ ಸುನೀತ". ಇದರಲ್ಲಿ ಭಾವಸೌಷ್ಠವದೊಡನೆ ಬೌದ್ಧಿಕ ಅಥವಾ ವೈಚಾರಿಕ ಚಿಂತನೆಯೂ ಸಮರಸಗೊಂಡು, ತನ್ನದೇ ಆದ ಪ್ರಾಸಜೋಡಣೆಯೊಂದಿಗೆ, ಒಂದು ನಿಶ್ಚಿತ ಛಂದೋಬಂಧದಲ್ಲಿಯೇ ಪ್ರಕಟಗೊಳ್ಳಬೇಕು. ನಾನು ಅಷ್ಟಪದಿಯೊಡನೆ ಷಟ್ಪದಿಯನ್ನು ಜೋಡಿಸಿದ ಪ್ರಯೋಗಗಳ ಜೊತೆಗೆ, ಮೂರು ಚತುಷ್ಪದಿಗಳ ಕೊನೆಗೆ ಒಂದು ದ್ವಿಪದಿಯಿಂಥ ಸಮಾರೋಪಗೊಳಿಸಿ, ಬಹಳಷ್ಟು ಸುನೀತಗಳನ್ನು ರಚಿಸಿದ್ದುಂಟು. ನಾನು ವಿಶೇಷವಾಗಿ ಶುದ್ಧ ಕನ್ನಡ ಕಾವ್ಯಪ್ರಕಾರವಾದ ಸರಳ ರಗಳೆಯ ಎರಡೆರಡು ಪಂಕ್ತಿಗಳ ಸಹಜ ಅಂತ್ಯಪ್ರಾಸ ಹೊಂದಿಸುವ ಸುನೀತಗಳನ್ನೂ ಬರೆದಿದ್ದೇನೆ. ಸುನೀತದ ಜೀವವಿರುವುದೇ ಕೊನೆಯ ಎರಡು ಸಾಲುಗಳಲ್ಲಿ. 1957ರಲ್ಲಿ ನನ್ನ 40 ಸುನೀತಗಳ ಮೊದಲನೆಯ ಸಂಗ್ರಹ 'ಆಶಾಕಿರಣ' ರಂ.ಶ್ರೀ. ಮುಗಳಿಯವರ ಮುನ್ನುಡಿಯೊಡನೆ ಪ್ರಕಟವಾಗಿತ್ತು, ನನ್ನ 80ರ ಗುರುತಿಗಾಗಿ ನನ್ನ ಹಳೆಯ ಮತ್ತು ಹೊಸ ರಚನೆಗಳಿಂದಾಯ್ದ ಒಟ್ಟು 80 ಸುನೀತಗಳ 'ಬಾನಾಡಿ' ಎಂಬ ಹೊಸ ಸಂಕಲನವೊಂದು ಇತ್ತೀಚೆಗೆ ಪ್ರಕಟವಾಗಿದೆ. ನಾನು ಮೊತ್ತ ಮೊದಲು ಸುನೀತರಚನೆಗೆ ಕೈಹಾಕಿದಾಗ ವಿಶೇಷವಾಗಿ ನನ್ನ ಕಣ್ಣೆದುರಿಗಿದ್ದವರು ಪ್ರಗತಿಶೀಲ ಕವಿಗಳೆನಿಸಿದ್ದ ಈಶ್ವರ ಸಣಕಲ್, ಚೆನ್ನವೀರ ಕಣವಿ ಹಾಗೂ ಎಂ.ಅಕಬರ ಅಲಿ. ಅವರಿಗಿಂತ ಹಿಂದಿದ್ದವರೂ ನನ್ನ ಮನಸ್ಸಿನಲ್ಲಿ ಉಳಿದವರೇ. ನನ್ನ ಪ್ರಯೋಗಗಳ ಉದಾಹರಣೆಗಳನ್ನು ಕೊಡುತ್ತಾ ಹೋದರೆ, ಈ ಮಾತುಕತೆ ಇನ್ನೂ ಬೆಳೆಯಬಹುದು.

ವಿವೇಕ: ಹೌದು, ಸುನೀತಗಳ ವಿಷಯ ಇಷ್ಟು ಸಾಕು. ಈಗ ಇನ್ನೊಂದು ಮಹತ್ವದ ಪ್ರಶ್ನೆಯೆಂದರೆ: ಕವಿಗಳ ಬರವಣಿಗೆಗಿಂತ ಸಾಮಾಜಿಕ ಆಂದೋಲನಗಳೇ ಮುಖ್ಯವೆಂದು ಕೆಲವರು ಹೇಳುತ್ತಾರಲ್ಲ, ನಿಮ್ಮ ಅಭಿಪ್ರಾಯವೇನು?

ಸನದಿ: ಒಂದು ದೃಷ್ಟಿಯಿಂದ ಇವೆರಡೂ ಪ್ರತ್ಯೇಕ ಆಂದೋಲನಗಳಾದರೂ ಒಂದಕ್ಕೊಂದು ಪೂರಕವಾದುವೇ. ಕಾವ್ಯದಲ್ಲಿ ಕೂಡ ಸಾಮಾನ್ಯ ಓದುಗರಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವ ದಲಿತ, ಬಂಡಾಯ, ಜನಪರ ಕಾವ್ಯರಚನೆಯ ಆಂದೋಲನಗಳೇ ನಡೆದದ್ದು ಎಲ್ಲರೂ ಬಲ್ಲ ಸಂಗತಿಯೇ ಆಗಿದೆ. ಸಂವೇದನಾಶೀಲ ಮನಸ್ಸುಗಳು 'ಮಾನವಜಾತಿ ತಾನೊಂದೆ ವಲಂ' ಎಂಬ ಪಂಪನ ಸಾಮಾಜಿಕ ಆದರ್ಶವನ್ನೇ ಇಂದಿಗೂ ತಮ್ಮ ಬರವಣಿಗೆಯ 'ದಾಂಖಾಂತರ' ಎತ್ತಿ ಓಡಿಯುವ ಕೆಲಸವನ್ನೇ ಮಾಡುತ್ತಿರುತ್ತವೆ. ಆದರೆ ಬರಗಾರರದು ಸಿದ್ಧಾಗಗಳಿಯಲ್ಲಿ ನಡೆಯುವ ಅಕ್ಷರಾಂದೋಲನವೆನ್ನಬಹುದು. ಆದರೆ, ಅದು ಸಾರ್ವಜನಿಕ ಸ್ತರದಲ್ಲಿ ನಡೆಯುವ ಸಾಮಾಜಿಕ ಆಂದೋಲನಗಳಿಗೆ ಪೂರಕಶಕ್ತಿಯನ್ನೇ ಒದಗಿಸಬಲ್ಲುದೆಂಬ ಮಾತನ್ನು ನಾವು ಗಮನಿಸಬೇಕು. ಆ ದಿಶೆಯಲ್ಲಿ ನಮ್ಮ ಸಾಮಾಜಿಕ ನಾಟಕಗಳು ಹೆಚ್ಚು ಪರಿಣಾಮ ಬೀರಬಲ್ಲವೆಂಬುದನ್ನು ನಾವೆಲ್ಲ ಕಂಡಿದ್ದೇವೆ, ಅನುಭವಿಸಿದ್ದೇವೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಯಾವತ್ತೂ ದೀನ-ದಲಿತರನ್ನೂ ಒಳಗೊಂಡಂತೆ ಸರ್ವಸಮಾನತೆಯ ವಿಶಾಲ ತಳಹದಿಯ ಜನಪರ ಕಾವ್ಯರಚನೆಗೇ 'ಸೈ' ಎನ್ನುತ್ತ ಬಂದವನು.

ವಿವೇಕ: ಇದೆಲ್ಲಾ ಹಿರಿಯರ ಸಲುವಾಗಿ ಹೊರಬರುವ ಪ್ರೌಢ ಸಾಹಿತ್ಯ ಅಥವಾ ಕಾವ್ಯದ ವಿಷಯವಾಯಿತು. ಕನ್ನಡದಲ್ಲಿ ಶಿಶು ಸಾಹಿತ್ಯ ಹೆಚ್ಚಾಗಿ ಬೆಳೆದಿಲ್ಲ ಅಂತ ಹೇಳ್ತಾರೆ. ನಿಜವೇ? ಹಾಗಿದ್ದರೆ, ಅದಕ್ಕೆ ಕಾರಣವೇನು?

ಸನದಿ: ಇದೂ ನಿಜವೇ. ಇಂಗ್ಲಿಷ್ ಭಾಷೆಯ ಮಾತು ಹಾಗಿರಲಿ, ನಮ್ಮ ನೆರೆಭಾಷೆಗಳೊಡನೆ ಹೋಲಿಸಿದರೂ ನಮ್ಮ ಭಾಷೆಯಲ್ಲಿನ ಶಿಶು ಸಾಹಿತ್ಯ ಉತ್ಪಾದನೆ ಕಡಿಮೆಯೆಂದೇ ಹೇಳಬೇಕು. ಬಂದಷ್ಟು ಪುಸ್ತಕಗಳು ಕೂಡ ಮಕ್ಕಳ ಮನಸೆಳೆಯುವ ಹಾಗೆ ಮುದ್ದಾಗಿ ಮುದ್ರಣಗೊಂಡಿರುವುದಿಲ್ಲ. ಎಲ್ಲಿಯೋ ತಪ್ಪಿ ಒಳ್ಳೆಯ ಕೃತಿಗಳು ಕಾಣಸಿಗುತ್ತವೆ. ಆದರೆ 'ಅದು ಸಾಲದು' ಎಂದು ಶಿಶು ಸಾಹಿತ್ಯದಲ್ಲಿ ಬಹಳಷ್ಟು ಕೆಲಸ ಮಾಡಿದ್ದ ಜಿ.ಪಿ.ರಾಜರತ್ನಂ ಅವರೇ ಒಮ್ಮೆ ಉದ್ಗಾರ ತೆಗೆದುದುಂಟು. ನಮ್ಮಲ್ಲಿ ಶಿಶು ಸಾಹಿತ್ಯನಿರ್ಮಿತಿಯಲ್ಲಿ ಕ್ರಿಯಾಸಕ್ತಿ ವಹಿಸುವ ಕೆಲವು ಶಿಕ್ಷಕ ಸಾಹಿತಿಗಳಿದ್ದಾರೆ. ಕೆಲವು ಹಿರಿಯ ಸಾಹಿತಿಗಳೂ ಆ ಕೆಲಸವನ್ನು ಮಾಡಿದ್ದಾರೆ. ಮತ್ತೆ ಹೇಳಬೇಕೆಂದರೆ 'ಅದು ಸಾಲದು'. ಇಂದು ಒಳ್ಳೆಯ ಶಿಶು ಸಾಹಿತ್ಯ ಹೆಚ್ಚಿಗೆ ಬಂದಷ್ಟು ನಮ್ಮ ಸಾಹಿತ್ಯದ ಬೆಳವಣಿಗೆಗೆ ಅನುಕೂಲವಾಗುತ್ತದೆ. ಅಷ್ಟಲ್ಲದೆ, ಇಂದು ನಾವು ನಮ್ಮ ಎಳೆಯರಲ್ಲಿ ಓದುವ ಅಭಿರುಚಿಯನ್ನು ಬೆಳೆಸದೇ ಬಿಟ್ಟರೆ, ಮುಂದಿನ 25 ವರ್ಷಗಳ ಸುಮಾರಿಗೆ ನಮ್ಮ ಸಾಹಿತಿಗಳ ಪುಸ್ತಕಗಳನ್ನು ಓದುವ ವಾಚಕರೇ ಸಿಗಲಿಕ್ಕಿಲ್ಲ. ಈ ಎಚ್ಚರಿಕೆಯಿಂದಾದರೂ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ನಮ್ಮ ಮಕ್ಕಳಲ್ಲೂ, ಹೆಣ್ಣು ಮಕ್ಕಳಲ್ಲೂ ಪುಸ್ತಕ ಪ್ರೀತಿಯನ್ನೂ, ಓದುವ ಅಭಿರುಚಿಯನ್ನೂ ಬೆಳೆಸುವತ್ತ ಹೆಚ್ಚಿನ ಗಮನ ಹರಿಸುವುದು ಅತ್ಯಗತ್ಯವಾಗಿದೆ.

ವಿವೇಕ: ನಿಮ್ಮಂಥ ಕವಿಗಳಿಗಿಂತ, ಲಕ್ಷಗಟ್ಟಲೇ ಸಂಬಳ ಪಡೆಯುವ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರದೇ ಸಾಹಿತ್ಯ ಪ್ರಪಂಚದಲ್ಲಿ ಮೇಲುಗೈ ಅಂತ ಹೇಳುತ್ತಾರಲ್ಲ?

ಸನದಿ: ಸಾಹಿತ್ಯರಚನೆಗೂ ಲಕ್ಷಾಂತರ ರೂಪಾಯಿಗಳ ಸಂಬಳಕ್ಕೂ ಅಥವಾ ಆಯಾ ಬರಹಗಾರರು ಕೆಲಸ ಮಾಡುವ ಸಂಸ್ಥೆಗಳ ಹಿರಿಮೆಗೂ ಏನೂ ಸಂಬಂಧವಿಲ್ಲವೆಂದೇ ನನಗೆನಿಸುತ್ತದೆ. ಪ್ರಾಧ್ಯಾಪಕರಿಗೆ ಓದಲು ಸಾಕಷ್ಟು ಗ್ರಂಥಗಳು ಹಾಗೂ ಅವರು ಬರೆದದ್ದನ್ನು ಸಾಹಿತ್ಯೇತರ ಕಾರಣಗಳಿಗಾಗಿಯೂ ಮೆಚ್ಚಿಕೊಳ್ಳುವ ಯುವಮನಸ್ಸುಗಳು ಸುಲಭವಾಗಿ ಸಿಗುತ್ತವೆಂಬುದು ಮಾತ್ರ ನಿಜ. ಆದರೆ, ಪ್ರಾಧ್ಯಾಪಕ ವೃತ್ತಿಯಲ್ಲಿ ಇಲ್ಲದ ಅನೇಕ ಕವಿಗಳು, ಲೇಖಕರು ತಮ್ಮ ಸಂಕಲ್ಪ ಬಲದ ಮೇಲೆಯೇ ಬೆಳೆದು ಬಹಳಷ್ಟು ಸಾಧನೆ ಮಾಡಿದವರಿದ್ದಾರೆ. ಅವರ ವಿಶಾಲವಾದ ಅನುಭವಕ್ಷೇತ್ರವೇ ಅವರಿಗೆ ಮಹಾವಿದ್ಯಾಲಯ. ಅವರ ಜಾಗೃತ ಪ್ರಜ್ಞೆಯೇ ಅವರ ಗುರು. ಅವರ ವಿವೇಕವೇ ಮಾರ್ಗದರ್ಶಿ.

ವಿವೇಕ: ಸರಿಯಾಗಿ ಹೇಳಿದಿರಿ. ಕೊನೆಯದಾಗಿ ಇನ್ನೊಂದು ಪ್ರಶ್ನೆ ಕೇಳಬಹುದೇ?


ಸನದಿ: ನಾನು ಬೇಡವೆಂದರೆ ನೀವು ಬಿಡ್ತೀರಾ? ಆಗತ್ಯ ಕೇಳಿಬಿಡಿ.

ವಿವೇಕ: ನೀವು ಅಕಬರ ಅಲಿ, ನಿಸಾರ್ ಅಹ್ಮದ್, ಬಿ.ಎಂ.ಇದಿನಬ್ಬ, ಅಬ್ದುಲ್ ಮಜೀದ್ ಖಾನರಂತೆ ಮುಸ್ಲಿಮ ಸಮಾಜದ ಸಂಜಾತರು. ಅದಕ್ಕೇ ಈ ಪ್ರಶ್ನೆ. ಸಾಹಿತ್ಯದಲ್ಲಿ ಮುಸ್ಲಿಮ್ ಸಂವೇದನೆ ಎಂಬುದಿರಬೇಕೆ?


ಸನದಿ: 'ಮಾನವಜಾತಿ ತಾನೊಂದೆ ವಲಮ್' ಎಂಬ ಸರಳ ತತ್ವವನ್ನು ನಂಬಿಕೊಂಡಿದ್ದವರಿಗೆ ಪ್ರತ್ಯೇಕ ಜಾತಿಯ ಸಂವೇದನೆಗಳೆಲ್ಲ ಗೌಣವೆನಿಸಿಬಿಡುತ್ತವೆ. ನಮ್ಮ ಬರವಣಿಗೆಯಲ್ಲಿ ಅದು ಸಂದರ್ಭಾನುಸಾರವಾಗಿ ಇಲ್ಲವೆ ಆನುಷಂಗಿಕವಾಗಿ ಬರಬಹುದೇ ವಿನಾ ಅದಕ್ಕೇ ಪ್ರತ್ಯೇಕ ಒತ್ತು ಕೊಟ್ಟು ಬರೆಯುತ್ತಾ ಹೋದರೆ, ಮೊದಲೇ ನಮ್ಮ-ನಮ್ಮ ನಡುವೆ ಬೇಲಿಗಳನ್ನು ಬೆಳೆಸಿ ಪ್ರತ್ಯೇಕತೆಯನ್ನು ಪೋಷಿಸುತ್ತ ಬಂದ ಜಾತೀಯ ವ್ಯವಸ್ಥೆಗೆ ಹೊಸ ನೀರಾವರಿ ಒದಗಿಸಿದಂತಾದೀತೆಂಬ ಅನುಮಾನ ನನ್ನನ್ನು ಕಾಡುತ್ತದೆ. ಮುಂದಿನ ತೀರ್ಮಾನ ವಿವೇಕವಂತ ಮನುಷ್ಯರಿಗೆ ಬಿಟ್ಟಿದ್ದು.

ವಿವೇಕ: ಆಯ್ತು, ಸನದಿಯವರೇ, ನಿಮಗೆ 80 ತುಂಬಿದ ಬಗ್ಗೆ ನಮ್ಮ ಪತ್ರಿಕೆಯ ಪರವಾಗಿ ಅಭಿನಂದನೆಗಳು. ನಿಮ್ಮ ಜೀವನದಿ ಇನ್ನೂ ಮುಂದೆ ಹರಿಯುತ್ತಿರಲಿ. ಮತ್ತೆ ಕೂಡೋಣ

■ ವಿವೇಕಾನಂದ ಥಾಂಡೇಲ




ಮದುವೆಯ ಹೊಸದರಲ್ಲಿ ಸನದಿ ದಂಪತಿ (5 ಜನವರಿ 1962)



ರೇಡಿಯೋ ರೂಪಕದ ಸಿದ್ಧತೆಯಲ್ಲಿ ಪಂಡಿತ್ ರಮೇಶ್ ನಾಡಕರ್ಣಿ, ಸನದಿ ಮತ್ತು ಗಾಯಕಿ ವಾಣಿ ಜಯರಾಂ

ಅಧಿಕಾರ ತೊರೆದ ಅಂತಃಕರಣ ಕಂಡ ಭಾರತ

ಪುಸ್ತಕ ವಿಮರ್ಶೆ



"ನೀವು ಈ ಶಿಬಿರದಲ್ಲಿ ಎಲ್ಲಿಯೇ ಕುಳಿತುಕೊಳ್ಳಿ, ಕೀವು ತುಂಬಿದ ದೊಡ್ಡ ಗುಳ್ಳೆಯನ್ನು ಸೀಳಿದಾಗ ಹೊರಚಿಮ್ಮುವ ಕೀವಿನಂತೆ ಜನ ತಮ್ಮ ನೋವುಗಳನ್ನು ತೋಡಿಕೊಳ್ಳಲು ಪ್ರಾರಂಭಿಸುತ್ತಿದ್ದರು" ಎಂದು ಈ ಕೃತಿಯ ಲೇಖಕ ಹರ್ಷ ಮಂದರ್ ಗುಜರಾತ್ ಗಲಭೆಯ ನಂತರದಲ್ಲಿ "ಸಂತ್ರಸ್ತರ ಶಿಬಿರ"ದಲ್ಲಿ ತಮಗಾದ ಅನುಭವವನ್ನು ವಿವರಿಸುತ್ತಾರೆ. ಇದನ್ನು ಓದುತ್ತಿದ್ದಂತೆ ಇತ್ತೀಚೆಗೆ ಓದಿದ ಟರ್ಕಿಯ ಪ್ರಖ್ಯಾತ ಕವಿ ಹಿಕ್ಮತ್, ಹಲವು ದಶಕಗಳ ಕೆಳಗೆ ಬರೆದ ಸಾಲು ಜ್ಞಾಪಕಕ್ಕೆ ಬಂದಿತು. ದಮನದ ಕಾಲದಲ್ಲಿ ತನ್ನ ದೇಶದಲ್ಲಿ ಸಮಯವು "ಕತ್ತು ಕತ್ತರಿಸಿದ ಶಿಶುವಿನ ಕುತ್ತಿಗೆಯಿಂದ ಹರಿಯುವ ರಕ್ತದಂತೆ" ಹರಿಯುತ್ತಿದೆ ಎಂದು ಬರೆಯುವ ಹಿಕ್ಮತ್ ತನ್ನ ಕಾಲದಲ್ಲಿ ಮಡುಗಟ್ಟಿದ್ದ ಹಿಂಸೆಯ ಅನುಭವವನ್ನು ಓದುಗರಿಗೆ ಈ ಸಾಲುಗಳ ಮೂಲಕ ಯಥಾವತ್ ದಾಟಿಸಿಬಿಡುತ್ತಾನೆ. "ಅಸಮಾನತೆಯ ಬಣ್ಣಗಳ"ಲ್ಲಿ ಸಂಕಲಿತವಾಗಿರುವ ಅವರ ಲೇಖನಗಳನ್ನು ಓದಿ ಇಟ್ಟ ನಂತರ ಓದುಗರಿಗೂ ಅದೇ ಅನುಭವವಾದರೆ ಆಶ್ಚರ್ಯವಿಲ್ಲ. ಸ್ವತಂತ್ರ ಭಾರತದ ಮೈಯುದ್ದಕ್ಕೂ ಎದ್ದಿರುವ ಹಸಿವು ಮತ್ತು ಹಿಂಸೆಗಳ ಹಲವು ಕೀವುಗುಳ್ಳೆಯನ್ನು ತಮ್ಮ ತಣ್ಣನೆಯ ಅಂತಃಕರಣದ ಕೈಗಳಿಂದ ಹರ್ಷ ಮಂದರ್ ಸೀಳಿರುವುದರಿಂದ ಪುಸ್ತಕದುದ್ದಕ್ಕೂ ಹಸಿವು ಮತ್ತು ಹಿಂಸೆಗಳ ಬಗೆಬಗೆಯ ನೈಜ ಕಥನಗಳು ಕೀವು ಸುರಿಸುತ್ತಾ ಓದುಗನ ಅಂತಃಸಾಕ್ಷಿಗೆ ಸವಾಲು ಹಾಕುತ್ತವೆ.

ಹರ್ಷ ಮಂದರ್ ಎರಡು ದಶಕಗಳ ಕಾಲ ಭಾರತದ ಆಡಳಿತ ಸೇವೆಯ (IAS) ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದವರು. ಗುಜರಾತ್ ನರಮೇಧದ ಸಂದರ್ಭದಲ್ಲಿ ಸರ್ಕಾರ ಮತ್ತು ತಾವು ಪ್ರತಿನಿಧಿಸುತ್ತಿದ್ದ ಕಾರ್ಯಾಂಗ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆ ನರಮೇಧಕ್ಕೆ ಕುಮ್ಮಕ್ಕಾಗಿದ್ದನ್ನು ಕಂಡು ಮನನೊಂದು ಬೇಸತ್ತು ರಾಜೀನಾಮೆ ಕೊಟ್ಟು ಹೊರಬಂದವರು. ನಂತರದಲ್ಲಿ ತಮ್ಮ ಇತಿಮಿತಿಯಲ್ಲಿ ಸಮಾಜದ ಅಸಹಾಯಕ ಮತ್ತು ಅಲಕ್ಷಿತ ಜನತೆಯ ನೋವುಗಳಿಗೆ ಧ್ವನಿಯಾಗಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ರಾಜಕೀಯ ಮತ್ತು ಸಾಮಾಜಿಕ ದೃಷ್ಟಿಕೋನಕ್ಕೆ ಲಗತ್ತಾಗುವ ಸರ್ಕಾರೇತರ ಸಂಸ್ಥೆಗಳು ಮತ್ತು ಕಾರ್ಯಕರ್ತರ ಜೊತೆಗೂಡಿ ಅಂಥಾ ಅತ್ಯಂತ ಅಸಹಾಯಕ ಬದುಕಿಗೆ ಒಂದಷ್ಟು ಸಹಾಯ ಮತ್ತು ಭರವಸೆಯನ್ನು ಒದಗಿಸಲು ಯತ್ನಿಸುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ತಾವು ಮುಖಾಮುಖಿಯಾದ ದಮನಿತ ಜನರ ಬದುಕಿನ ವಾಸ್ತವಗಳನ್ನು ಮತ್ತು ವೈರುಧ್ಯಗಳನ್ನು ತಮ್ಮ ಅಂಕಣ ಬರಹಗಳಲ್ಲಿ ದಾಖಲಿಸುತ್ತಾ ಬರುತ್ತಿದ್ದಾರೆ.

ಪ್ರಸ್ತುತ ಬರಹಗಳನ್ನು ಅವರು The Hindu ಪತ್ರಿಕೆಗೆ ಪ್ರತಿ ಭಾನುವಾರ ಬರೆಯುತ್ತಿದ್ದ "Barefoot" ಅಂಕಣದಿಂದ ತೆಗೆದುಕೊಳ್ಳಲಾಗಿದೆ. ಕನ್ನಡದ ಪ್ರಖ್ಯಾತ ಮತ್ತು ಹಿರಿಯ ಸಮಾನ ಮನಸ್ಕ ಚಿಂತಕರು, ಕ್ರಿಯಾಮುಖಿ ಬುದ್ಧಿಜೀವಿಗಳು ಆಗಿರುವ ಜಿ.ರಾಜಶೇಖರ ಮತ್ತು ಕೆ.ಫಣಿರಾಜ್ ಅವರು ಹರ್ಷ ಮಂದರ್ ಅವರ ಮುಖ್ಯ ಲೇಖನಗಳನ್ನು ಆಯ್ದು ಸಂಪಾದಿಸಿಕೊಟ್ಟಿದ್ದಾರೆ. ಇಂಗ್ಲಿಷಿನಲ್ಲಿದ್ದ ಈ ಮೂವತ್ತೂ ಲೇಖನಗಳನ್ನು ಸಮಾನತೆಯ ಆಶಯ ಮತ್ತು ಕನಸುಗಳನ್ನು ಹೊತ್ತು ಕ್ರಿಯಾಶೀಲವಾಗಿರುವ 30 ಯುವಜನರು ಬದ್ಧತೆ ಮತ್ತು ಆಪ್ತತೆಯಿಂದ ಅನುವಾದಿಸಿಕೊಟ್ಟಿರುವುದು ಈ ಸಂಕಲನದ ಮತ್ತೊಂದು ಹೆಗ್ಗಳಿಕೆ.

ಹಸಿವು, ಅಪಮಾನ ಮತ್ತು ಹಿಂಸೆಗಳಿಗೆ ಬಣ್ಣಗಳಿವೆಯೇ? ಅಥವಾ ಎಲ್ಲದರ ಬಣ್ಣವೂ ಸಾರಾಂಶದಲ್ಲಿ ಒಂದೆಯೇ?

ಈ ಸಂಗ್ರಹದಲ್ಲಿ ದಾಖಲಾಗಿರುವ "ಪ್ರತಿಯೊಂದು ದಿನವೂ ಜೀವಿಸುವುದಕ್ಕಾಗಿ ಹೆಣಗಾಡುವಂಥಾ ರೀತಿಯಲ್ಲಿ ಬದುಕುತ್ತಿರುವವರ" ಬದುಕಿನ ಬಣ್ಣ ಮತ್ತು ಗುಜರಾತಿನಲ್ಲಿ ಸರ್ಕಾರ ಮತ್ತು ಹಿಂದೂತ್ವವಾದಿಗಳ ಪಾಶವೀ ದಾಳಿಗೆ ತುತ್ತಾದ ಮುಸ್ಲಿಮರ ಸಾವಿನ ಬಣ್ಣಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಆದರೆ ಹರ್ಷ ಮಂದರ್ ತಮ್ಮ ಲೇಖನದಲ್ಲಿ ಕಟ್ಟಿಕೊಡುವುದು ಈ ಸಾವಿಗಿಂತ ದುಸ್ತರವಾದ ಬದುಕಿನ ಬಗ್ಗೆ ಮಾತ್ರವಲ್ಲ, ಸಾವಿನ ಸೆರಗಿನಲ್ಲೂ ಅರಳಲು ಯತ್ನಿಸುವ ಬದುಕಿನ ಗರಿಕೆಯ ಬಗ್ಗೆಯೂ ಅವರು ಬರೆಯುತ್ತಾರೆ. ಆ ಮರಣದ ಮಡಿಲಲ್ಲೂ ಒಸರುವ ಇಂಥಾ ಜೀವದೊರತೆಗಳನ್ನು ಪೋಷಿಸುವಂತೆ "ನಾಗರಿಕ ಸಮಾಜವನ್ನು" ಪ್ರೇರೇಪಿಸುವುದು ಅವರ ಬರಹದ ಉದ್ದೇಶಗಳಲ್ಲಿ ಒಂದಾಗಿರುವಂತೆ ಭಾಸವಾಗುತ್ತದೆ.

ಉದಾಹರಣೆಗೆ ಸ್ಲಂ ಹುಡುಗರನ್ನು ಕಟ್ಟಿಕೊಂಡು "ಸ್ಲಂ ಡಾಗ್ ಮಿಲಿಯನೇರ್" ಚಿತ್ರ ವೀಕ್ಷಿಸುವ ಹರ್ಷ ಮಂದರ್, ಚಿತ್ರ ನೋಡಿದ ನಂತರ ಸ್ಲಂ ಮಕ್ಕಳು ಆ ಚಿತ್ರದಲ್ಲಿ ಗುರುತಿಸಿದ ಪ್ರೀತಿಯ ವಿಜಯವನ್ನು ಸುಲಭದ ಮತ್ತು ಸುರಕ್ಷಿತ ಬದುಕುಳ್ಳವರು ಏಕೆ ಕಾಣಲಾಗಲಿಲ್ಲ ಎಂದು ಆಶ್ಚರ್ಯಪಡುತ್ತಾರೆ.

ಅದೇರೀತಿ ಯಾವುದನ್ನು ಸೋ ಕಾಲ್ಡ್ ಸುಶಿಕ್ಷಿತ ಜಗತ್ತು ಸಮಸ್ಯೆಗಳ ಕಾರಣ ಮತ್ತು ಪರಿಹಾರ ಎಂದು ಭಾವಿಸಿ ದಮನಿತ ಜನರ ಮೇಲೆ ಹೇರಲು ಪ್ರಯತ್ನಿಸುತ್ತದೋ ಅದು ಹೇಗೆ ಅವರ ಬದುಕನ್ನು ನರಕ ಸದೃಶಗೊಳಿಸುತ್ತದೆ ಎಂಬುದನ್ನು ಸಹ ಅವರ ಬರಹಗಳು ಬದುಕಿಸಲೆಂದೇ ಮಾರಾಟ ಮಾಡಿದ ಒರಿಸ್ಸಾದ ತಂದೆತಾಯಿಗಳ ನೈಜ ದುರಂತ ಕಥನ ಇದಕ್ಕೊಂದು ಉದಾಹರಣೆ. ಬಡತನದಿಂದ ಪಾರು ಮಾಡಲು ಮಗುವನ್ನು ಸಹೃದಯೀ ಸಾಲನೀಡಿದಾತನಿಗೆ ದತ್ತುಕೊಟ್ಟು ಬದುಕಿಸಲು ಪ್ರಯತ್ನಿಸಿದರೆ, "ನಾಗರಿಕ ಸಮಾಜ"ದ ಸುಶಿಕ್ಷಿತರು ಅವಳನ್ನು ಅಲ್ಲಿಂದ "ಪಾರು" ಮಾಡಿ ನಿಧಾನ ಸಾವಿಗೆ ದೂಡಿದ ಕಥನ ಕೇವಲದ ಬಡತನದ ದಾರುಣತೆಯನ್ನು ಮಾತ್ರವಲ್ಲ ಸುಶಿಕ್ಷಿತ ಸಮಾಜ ಹಾಗೂ ಕಾನೂನುಗಳ ಹಿಪಾಕ್ರಸಿಯನ್ನು ಬಯಲು ಮಾಡುತ್ತವೆ.

ಅಂತಃಕರಣವಿಲ್ಲದ ಸಮಾಜದಲ್ಲಿ ಬರಿಗಣ್ಣಿಗೆ ಕಾಣದ ಯಾವುದನ್ನು ನಂಬದ, ಅಂತಃಸಾಕ್ಷಿಯನ್ನು ಚುಚ್ಚುವ ಸತ್ಯಗಳ ಅಸ್ತಿತ್ವವನ್ನೇ ನಿರಾಕರಿಸುವ ನಾಗರಿಕ ಸಮಾಜ ಮತ್ತು ಸರ್ಕಾರಗಳು ಹೇಗೆ ಬಡವರ ಬದುಕನ್ನು ಅಂಕಿಸಂಖ್ಯೆ ಮಾಡಿ ಬಡತನದ ಅಸಹಾಯಕತೆಯನ್ನು ಕ್ರೂರ ಲೇವಡೀ ಮಾಡುತ್ತದೆ ಎಂಬುದನ್ನು ಸಹ ಮಂದರ್ ಅವರು ಬಡತನದ ಬಗ್ಗೆ ಬರೆದಿರುವ ಹಲವು ಲೇಖನಗಳಲ್ಲಿ ಬಯಲು ಮಾಡುತ್ತಾರೆ. "ಬಡತನ ಕುರಿತಾದ ಅಂಕಿಸಂಖ್ಯೆಗಳೂ ಸಹ ವಿನಾಕಾರಣ ಬಂಧನಕ್ಕೊಳಗಾದ ನಿಶ್ಶಕ್ತ ಮತ್ತು ನಿಸ್ಸಹಾಯಕ ಆದಿವಾಸಿಯ ಹಾಗೆ. ನಿರಂತರವಾಗಿ ಚಿತ್ರಹಿಂಸೆಗೆ ಒಳಪಡಿಸಿದರೆ ಒತ್ತಡಕ್ಕೆ ಮಣಿದು ಏನನ್ನು ಬೇಕಾದರೂ ಒಪ್ಪಿಕೊಳ್ಳುತ್ತಾರೆ" ಎಂದು ಒಬ್ಬ ಅರ್ಥಶಾಸ್ತ್ರಜ್ಞ ಮಾಡಿದ ಹೇಳಿಕೆಯನ್ನು ವಿಷಾದದಿಂದ ದಾಖಲಿಸುತ್ತಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಗುಜರಾತ್ ಕೋಮು ಹತ್ಯಾಕಾಂಡ ನಡೆದಾಗ ಇನ್ನೂ ಅಧಿಕಾರಿಯಾಗಿದ್ದ ಅವರು ಹೇಗೆ ಅದು ದಿಢೀರನೆ ಸಂಭವಿಸಿದ ಕುಪಿತ ಜನರ ಕೃತ್ಯವಲ್ಲ, ಬದಲಿಗೆ ಯೋಜಿತ, ಸರ್ಕಾರೀ ಪ್ರಾಯೋಜಿತ ನರಮೇಧ ಎಂಬುದನ್ನು ಮನವರಿಕೆಯಾಗುವಂತೆ ವಿವರಿಸುತ್ತಾರೆ. "ಸ್ಥಳೀಯ ಪೊಲೀಸ್ ಮತ್ತು ಆಡಳಿತ ಯಂತ್ರಾಂಗದ ಬೆಂಬಲವಿಲ್ಲದೆ ಯಾವ ಗಲಭೆಯೂ ಕೆಲವು ಗಂಟೆಗಳಿಗಿಂತ ಹೆಚ್ಚುಕಾಲ ಮುಂದುವರೆಯುವುದಿಲ್ಲ" ಎಂದು ಮಂದರ್ ಖಚಿತವಾಗಿ ಅಭಿಪ್ರಾಯ ಪಡುತ್ತಾರೆ. ಕೆಳದರ್ಜೆಯ ಪೊಲೀಸರು ಕೋಮುವಾದೀಕರಣಗೊಂಡಿರುವುದು ಕೋಮು ಗಲಭೆಗಳಿಗೆ ಪ್ರಧಾನ ಕಾರಣ ಎನ್ನುವುದನ್ನು ನಿರಾಕರಿಸುವ ಮಂದರ್ "ವೃತ್ತಿಪರತೆ ಮತ್ತು ಬದ್ಧತೆಗಳನ್ನು ಮೈಗೂಡಿಸಿಕೊಂಡಿರುವ ಉನ್ನತಾಧಿಕಾರಿಗಳು ಇದೇ ಪಡೆಗೆ ನಾಯಕತ್ವ ಕೊಟ್ಟು ಮುನ್ನಡೆಸಿದಾಗ ಅವು ನಿಷ್ಪಕ್ಷಪಾತವಾಗಿ ಧೈರ್ಯದಿಂದ ಕಾರ್ಯನಿರ್ವಹಿಸಿವೆ" ಎಂದು ಪ್ರತಿಪಾದಿಸುತ್ತಾರೆ. ಇದು ದಿನೇದಿನೇ ಕೋಮುಹಿಂಸಾಚಾರ ಹೆಚ್ಚುತ್ತಿರುವ ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೂ ಅತ್ಯಂತ ಮುಖ್ಯ ಪಾಠವಾಗಿದೆ. ನೆಲ್ಲಿ ಹತ್ಯಾಕಾಂಡದ ಬಗ್ಗೆ ಬರೆಯುತ್ತಾ ಅವರು ಹೇಳುವ ಮಾತನ್ನೇ ಸಿಖ್ ನರಮೇಧ ಸಂಭವಿಸಿ 25 ವರ್ಷ ಗತಿಸಿದ ಸಂದರ್ಭದಲ್ಲಿ ಒಬ್ಬ ಸಿಖ್ ಮುತ್ಸದ್ಧಿಯೂ ಹೇಳಿದ್ದು ಇಲ್ಲಿ ಉಲ್ಲೇಖಾರ್ಹ- "1984ರ ಸಿಖ್ ನರಮೇಧದ ಪಾತಕಿಗಳಿಗೆ ಕಠಿಣವಾದ ಶಿಕ್ಷೆ ದೊರೆತಿದ್ದರೆ 2002ರ ಗುಜರಾತ್ ಸಂಭವಿಸುತ್ತಿರಲಿಲ್ಲ"!

ಇಡೀ ಸಂಕಲನದಲ್ಲಿ ಮಂದರ್ ಅತ್ಯಂತ ರ್‍ಯಾಡಿಕಲ್ ಆದ ನಿಲುವನ್ನು ವ್ಯಕ್ತಪಡಿಸುವುದು "ಕಾರ್ಯಾಂಗ ಪ್ರಧಾನವಾಗಿ ಜವಾಬುದಾರರಾಗಬೇಕಿರುವುದು ಸಂವಿಧಾನಕ್ಕೆ ಹೊರತು ರಾಜಕೀಯ ನಾಯಕರುಗಳಿಗಲ್ಲ" ಎಂದು ಸ್ಪಷ್ಟಪಡಿಸುವ ಲೇಖನದಲ್ಲಿ. ಜಾಗತೀಕರಣದ ಈ ಕಾಲಘಟ್ಟದಲ್ಲಿ ಕಾನೂನುಗಳೇ ಸಂಪೂರ್ಣವಾಗಿ ಜನವಿರೋಧಿಯಾಗಿ ರಚಿತಗೊಳ್ಳುತ್ತಿವೆ. ಹೀಗಾಗಿ ಹೊರ ಒತ್ತಡಗಳಿಗೆ ಮಣಿಯದೆ ಕಾನೂನಿಗೆ ತಕ್ಕಂತೆ ಯೋಜನೆ ಅನುಷ್ಠಾನ ಮಾಡುವ ಪ್ರಾಮಾಣಿಕ ಅಧಿಕಾರಿಯೇ ಲಂಚ ತೆಗೆದುಕೊಂಡು ಕಾನೂನುಬಾಹಿರವಾಗಿ ಕೆಲಸ ಮಾಡಿಕೊಡುವ ಭ್ರಷ್ಟ ಅಧಿಕಾರಿಗಿಂತ ಜನವಿರೋಧಿಯಾಗಿಬಿಡುವ ವಿಪರ್ಯಾಸ ಇಂದಿನ ಸಂದರ್ಭದ್ದು. ಆದ್ದರಿಂದಲೇ ಅಂಥಾ ಕಾರ್ಯಾಂಗದ ಹಿರಿಯ ಅಧಿಕಾರಿಯಾಗಿದ್ದುಕೊಂಡು ಮಂದರ್ ತಾಳಿರುವ ಈ ನಿಲುವು ಅತ್ಯಂತ ಮಾರ್ಗದರ್ಶಿಯಾಗಿದೆ. ಎತ್ತಂಗಡಿ, ಕಾರ್ಮಿಕರ ಹಕ್ಕುಗಳು ಇತ್ಯಾದಿ ವಿಷಯಗಳಲ್ಲಿ ಅಧಿಕಾರಿಗಳು ಕಾನೂನುಗಿಂತ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದು ಮಂದರ್ ಪ್ರತಿಪಾದಿಸುತ್ತಾರೆ.

ಮುಂದುವರೆದು "ಪ್ರತಿಯೊಬ್ಬ ಅಧಿಕಾರಿಯೂ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳುತ್ತಾ ಕಾನೂನನ್ನು ಧಿಕ್ಕರಿಸುತ್ತಾ ಹೋದರೆ ಅರಾಜಕತೆ ಸೃಷ್ಟಿಯಾಗುತ್ತದೆ ಎಂದು ಕೆಲವರು ವಾದಿಸಬಹುದು. ಹಾಗಂತ ಪ್ರತಿಯೊಬ್ಬರೂ ತಮ್ಮ ಆತ್ಮಸಾಕ್ಷಿಯನ್ನು ಧಿಕ್ಕರಿಸಿ ಕಾನೂನು ಮತ್ತು ನೀತಿ ನಿಯಮಾವಳಿಯನ್ನು ಮಾತ್ರ ವಿಧೇಯನಾಗಿ ಅನುಸರಿಸುತ್ತಾ ಹೋದರೆ ಅದು ಅಂತಿಮವಾಗಿ ನಿರಂಕುಶತ್ವಕ್ಕೆ ದಾರಿ ಮಾಡಿಕೊಡಬಹುದು. ಫ್ಯಾಸಿಸಂ ಮತ್ತು ಅರಾಜಕತೆಯ ನಡುವೆ ನನ್ನ ದೇಶ ಒಂದನ್ನು ಆಯ್ಕೆ ಮಾಡಿಕೊಳ್ಳುವ ಪರಿಸ್ಥಿತಿ ಬಂದರೆ ನನ್ನ ಆಯ್ಕೆ ಅರಾಜಕತೆಯೇ ಆಗಿರುತ್ತದೆ" ಎಂದು ಯಾವುದೇ ಹಿಂಜರಿಕೆಯಿಲ್ಲದೇ ಮಂದರ್ ಘೋಷಿಸುತ್ತಾರೆ. ಆದರೆ ಅದೇ ಸಮಯದಲ್ಲಿ ಆ ಆತ್ಮಸಾಕ್ಷಿಯ ಸ್ವಾತಂತ್ರ್ಯಕ್ಕೆ ಸಂವಿಧಾನದಲ್ಲಿ ಘೋಷಿತ ಮೌಲ್ಯಗಳು ಒರೆಗಲ್ಲಾಗಿರಬೇಕೆಂದು ಎಚ್ಚರಿಸುವುದನ್ನು ಮರೆಯುವುದಿಲ್ಲ.

ಒಬ್ಬ ಅಧಿಕಾರಿಯಾಗಿ ವ್ಯವಸ್ಥೆ ನೀಡಿದ ಶಿಕ್ಷಣ ಮತ್ತು ಪ್ರಭುತ್ವ ನೀಡಿದ ತರಬೇತಿಗಳು ಕೊಟ್ಟ "ತಿಳಿವಳಿಕೆ ಮತ್ತು ಪೂರ್ವಗ್ರಹಗಳನ್ನು" ಮೀರಿ, ರಾಜಶೇಖರ ಮತ್ತು ಫಣಿರಾಜ್ ಹೇಳುವಂತೆ ಪ್ರಜ್ಞಾಪೂರ್ವಕವಾಗಿ, ಜನಪರ ಝೋಲಾವಾಲಾ ಆದ ಮಂದರ್ ಆತ್ಮಸಾಕ್ಷಿಯ ಧ್ವನಿಗೆ ಕಿವಿಯಾಗಿದ್ದರಿಂದಲೇ ಅವರ ತಿಳಿವಳಿಕೆ ಮಾನವೀಕರಣಗೊಂಡಿದೆ. ಭಾರತದಲ್ಲಿ ಈ ಬಗೆಯ ಉದಾಹರಣೆಗಳು ಈ ದಿನಗಳಲ್ಲಿ ಕಡಿಮೆಯಾಗುತ್ತಲೇ ಹೋಗುತ್ತಿದೆ.

ಆದರೆ ಇಷ್ಟೆಲ್ಲಾ ಹೇಳಿದ ಮೇಲೂ, ಫ್ಯಾಸಿಸಂ ಅನ್ನು ಮಂದರ್ ಪರೋಕ್ಷವಾಗಿ ಸೂಚಿಸುವಂತೆ ಕೇವಲ ಮಾನವೀಯ ಅಂತಃಕರಣವನ್ನು ಉದ್ದೀಪಿಸುವ ಮಾತ್ರದಿಂದಲೇ ಸೋಲಿಸಬಹುದೇ ಎಂಬ ಪ್ರಶ್ನೆ ಉಳಿಯುತ್ತದೆ. ಒಬ್ಬ ಅಧಿಕಾರಿಯಾಗಿದ್ದರೂ ತಮ್ಮ ಮಿತಿ ದಾಟಿ ಸಮಸ್ಯೆಯ ವಿಶ್ಲೇಷಣೆ ಮತ್ತು ಪರಿಹಾರ ಸೂಚಿಸುವ ಪ್ರಯತ್ನವನ್ನು ಮಾಡಿದ್ದರೂ, ಅಧಿಕಾರಶಾಹಿಯ ಜನವಿರೋಧಿತನದ ರಾಜಕೀಯ ಮೂಲವನ್ನು ಪತ್ತೆ ಹಚ್ಚಿದಂತೆ, ಜನತೆಯ ಸಮಸ್ಯೆಯ ರಾಜಕೀಯ ಮೂಲವನ್ನು ಪತ್ತೆಹಚ್ಚಲು ವಿಫಲರಾಗುತ್ತಾರೆ.

ಬಡತನವನ್ನು ಕೇವಲ ಆದಾಯದ ಕೊರತೆ, ಕೊಳ್ಳುವ ಶಕ್ತಿಯ ಕೊರತೆ ಎಂದು ಆರ್ಥಿಕ ವಿಶ್ಲೇಷಣೆ ಮಾತ್ರ ಮಾಡಿದರೆ ಸಮಸ್ಯೆಯ ಮೂಲ ಬಡತನ ಪರಿಹಾರದ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಗೊಳ್ಳದಿರುವುದೆಂಬ ಉತ್ತರ ಸಿಗುತ್ತದೆ. ಹೀಗಾಗಿ ಪರಿಹಾರವೂ ಪ್ರಾಮಾಣಿಕ ಅಧಿಕಾರಿ ಮತ್ತು ಹೆಚ್ಚಿನ ಸಂಪನ್ಮೂಲವನ್ನು ಒದಗಿಸುವುದು ಎಂದಾಗುತ್ತದೆ.

ಇಷ್ಟಾದರೂ ಕೂಡಲೇ ಆಗಬೇಕಾದ ಕೆಲಸ ಆದ್ದರಿಂದ ಬಡವರ ದಾರುಣತೆ ತಪ್ಪಬಹುದು. ಬಡತನ- ಶ್ರೀಮಂತಿಕೆ ಎಂಬ ಅಂತರ ತಪ್ಪುವುದೇ?


ಬಡತನವೆಂಬುದು ಅಂಬೇಡ್ಕರ್ ಹಾಗೂ ಮಾರ್ಕ್ಸ್ ವಿಶ್ಲೇಷಿಸಿದಂತೆ ರಾಷ್ಟ್ರದ ಸಂಪತ್ತಿನ ಅಸಮಾನ ಹಂಚಿಕೆಯ ರಾಜಕಾರಣ ಮತ್ತು ಆರ್ಥಿಕತೆಯ ಉತ್ಪನ್ನ ಎಂದು ಅರ್ಥಮಾಡಿಕೊಂಡಾಗ ಮಾತ್ರ ಬಡತನದ ಮೂಲ ಸ್ವಾತಂತ್ರ್ಯಾನಂತರ ನಾವು ಅನುಸರಿಸುತ್ತಿರುವ ರಾಜಕೀಯ ಮತ್ತು ಆರ್ಥಿಕ ಸಂರಚನೆಗಳಲ್ಲಿವೆ ಎಂದು ಅರ್ಥವಾಗುತ್ತದೆ. ಮಂದರ್ ಆ ಪ್ರಶ್ನೆಯನ್ನು ಹಾಕಿಕೊಂಡಿದ್ದರೆ ನಕ್ಸಲ್ ಚಳವಳಿ ಕೇವಲ ಹಿಂಸಾನಂದಿಗಳ ಚಳವಳಿ ಎನ್ನಿಸದೇ ಈ ದೇಶದ ರಾಜಕೀಯ ಮತ್ತು ಸಾಮಾಜಿಕ ಸ್ಟ್ರಕ್ಚರಲ್ ಸಮಸ್ಯೆಗಳ ಪ್ರಶ್ನೆ ಎನಿಸುತ್ತಿತ್ತು. ಹಾಗೆಯೇ ಕಾಶ್ಮೀರ, ಛತ್ತೀಸ್‌ಗಢ್ ಇತ್ಯಾದಿಗಳಲ್ಲಿ ನಡೆಯುತ್ತಿರುವ ಪ್ರಭುತ್ವ ಹಿಂಸೆಯ ಮೂಲ ಇರುವುದು ಕೇವಲ ಅದನ್ನು ಎಸಗುತ್ತಿರುವ ಮೃಗೀಯ ಮನಸ್ಸಿನ ಅಧಿಕಾರಗಳಲ್ಲಿ ಮಾತ್ರವಲ್ಲ, ಬದಲಿಗೆ ಎಂಥದೇ ಹಿಂಸಾಚಾರ ಮಾಡಿಯಾದರೂ ಈ ಅಸಮಾನತೆಯನ್ನು, ದಾಸ್ಯವನ್ನು, ಪರಾಧೀನತೆಯನ್ನು ಹೇರಲು ಯತ್ನಿಸುತ್ತಿರುವ ಈ ವ್ಯವಸ್ಥೆಯಲ್ಲಿ ಎಂಬುದು ಅರ್ಥವಾಗುತ್ತದೆ.

ಅಂತಃಕರಣವಿಲ್ಲದ ರಾಜಕಾರಣ ಅಮಾನವೀಯ. ಒಸರುತ್ತಿರುವ ಕೀವನ್ನು ಮೊದಲು ಒರೆಸಬೇಕು. ನಂತರ ಗಾಯಮಾಡಲು ಕತ್ತಿ ಹಿರಿದವರ ಕತ್ತಿಯನ್ನು ಕಿತ್ತುಕೊಳ್ಳಬೇಕು. ಅದಕ್ಕೆ ಕತ್ತಿಯ ಮತ್ತು ಕತ್ತಿ ಹಿಡಿದವರ ಚಹರೆಯನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಅದಕ್ಕೂ ಮೊದಲು, ಕೀವನ್ನು ನೋಡುವ ಕಣ್ಣು ಬೇಕಲ್ಲ!

ಆದ್ದರಿಂದಲೇ ಗಾಯವೇ ಆಗಿಲ್ಲವೆಂದು ಭಂಡವಾದ ಮಾಡುತ್ತಿರುವವರನ್ನು ಹಿಡಿದು ನಿಲ್ಲಿಸಿ ಕೀವುಗಟ್ಟಿದ ಗಾಯಗಳನ್ನು ನೋಡಲು ಕಡ್ಡಾಯ ಮಾಡುವ ಹರ್ಷ ಮಂದರ್ ಅವರಿಗೆ ಅಭಿನಂದನೆಗಳನ್ನು ಹೇಳಲೇಬೇಕು.

■ ಶಿವಸುಂದರ್



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಎಲ್ಲಮ್ಮನ ವಧೆ: ಅಮ್ಮಂದಿರೆಲ್ಲರ ವಧೆ

ಆದಿಯಿಂದಲೂ ಪ್ರಕೃತಿಯನ್ನು ನೋಡುತ್ತಾ, ಅದರಲ್ಲಿಯೇ ಬಾಳುತ್ತಾ ...ದ ಮಾನವನಿಗೆ ಸ್ತ್ರೀಯ ತತ್ವವೂ ಮತ್ತು ಪ್ರಕೃತಿಯ ತತ್ವವೂ ಸಮನಾಗಿ ...ದದ್ದು ಅಧ್ಯಯನದ ಮೂಲಕವಲ್ಲ, ಆದರೆ ತನ್ನ ಅನುಭವದ ಮೂಲಕ. ...ತೆಯೇ ಹೆಣ್ಣೂ ತಾನು ಪ್ರಕೃತಿ ಸಹಜವಾಗಿ ತನ್ನಿಂದ ನಿರ್ಮಿತವಾದ ...ಮಾಜವನ್ನು ತಾನೇ ಪೋಷಿಸುತ್ತಲೂ ಇದ್ದಳು. ಆದರೆ, ಅಂತಹ ಹೆಣ್ಣನ್ನೂ ...ಕ್ಕೆ ಅಧೀನಕ್ಕೆ ಒಳಪಡಿಸಿಕೊಳ್ಳಲು ಪುರುಷಮನಸ್ಸುಗಳು ಎಂತೆಲ್ಲಾ ಕೆಲಸ ...ಾಡಿದವು ಎಂಬುದು ಮಾತ್ರ ಮಾರ್ಮಿಕ.


ಈ ಕಥೆಯನ್ನು ಗಮನಿಸಿ: ಬೆಟ್ಟಗಳು, ಗಿಡ, ಮರಗಳಾದಿಯಾಗಿ ಭೂಮಿಯು ...ಟ್ಟುವ ಮುನ್ನ ಅಸ್ತಿತ್ವದಲ್ಲಿ ಬರೀ ನೀರಿತ್ತು, ಆ ನೀರಿನಿಂದ ಆದ್ಯಳೆಂಬ ಆಕೆ ...ನಾಗಿ ಹುಟ್ಟಿದಳು. ಹುಟ್ಟಿದ ಕೂಡಲೇ ಆಕೆ ಪ್ರಬುದ್ಧೆಯಾಗಿ ಬೆಳೆದು ...ಹಿಳೆಯಾಗಿ ನಿಂತಳು. ಅವಳಲ್ಲಿ ಪುರುಷನ ಸಾಂಗತ್ಯದ ಬಯಕೆ ಉಂಟಾಯಿತು. ...ಗವಳು ಹಕ್ಕಿಯೊಂದರ ರೂಪವನ್ನು ತಾಳಿ ತಾವರೆಯ ಮೇಲೆ ಕುಳಿತು ...ೂರು ಮೊಟ್ಟೆಯನ್ನಿಟ್ಟಳು. ಮೊದಲನೆಯ ಮೊಟ್ಟೆಯು ಹಾಳಾಯಿತು. ...ರಡನೆಯ ಮೊಟ್ಟೆಯಿಂದ ಆಕಾಶ, ಸೂರ್ಯ, ಚಂದ್ರ, ಚುಕ್ಕಿಗಳು ಮತ್ತು ...ಮುದ್ರಗಳು ಉಂಟಾದವು. ಮೂರನೆಯ ಮೊಟ್ಟೆಯಿಂದ ಬ್ರಹ್ಮ, ವಿಷ್ಣು ...ತ್ತು ಶಿವ ಹುಟ್ಟಿದರು. ಆದ್ಯ ಆ ಮೂವರಿಗೂ ತನ್ನ ಮೊಲೆಯೂಡಿಸಿ ...ಳೆಸಿದಳು. ತ್ರಿಮೂರ್ತಿಗಳು ಯುವಕರಾಗಿ ನಿಂತರು. ಆಗ ಆದ್ಯ ತನ್ನನ್ನು ...ನು ಆಭರಣ ಮತ್ತು ಹೂಗಳಿಂದ ಸಿಂಗರಿಸಿಕೊಂಡು, ಆ ತ್ರಿಮೂರ್ತಿಗಳನ್ನು ...ನ್ನ ಮೇಲೆ ಕೂಡಲು ಕೇಳಿದಳು. ಬ್ರಹ್ಮ ಮತ್ತು ವಿಷ್ಣು ತಮ್ಮ ತಾಯಿಯ ...ಬಯಕೆಯಿಂದ ಭೀತರಾದರು. ಆದರೆ ಶಿವನು ಒಪ್ಪಿದನು. ಆದರೆ ಅವಳಿಗಿರುವ ...ೂರನೆಯ ಕಣ್ಣನ್ನು ಕೇಳಿದನು. ಆಸೆಯಿಂದ ಉನ್ಮತ್ತಳಾಗಿದ್ದ ಆದ್ಯ ತನ್ನ ...ೂರನೆಯ ಕಣ್ಣನ್ನು ಶಿವನಿಗೆ ಕೊಟ್ಟಳು. ಕೂಡಲೇ ಅವಳು ತನ್ನ ಚೈತನ್ಯ ...ತ್ತು ತೇಜಸ್ಸುಗಳನ್ನು ಕಳೆದುಕೊಂಡಳು. ಮುದುಕಿಯಾಗಿಬಿಟ್ಟಳು. ತಾರುಣ್ಯಭರಿತ ...ಳ ಚರ್ಮವು ಸುಕ್ಕುಗಟ್ಟಿದ್ದಲ್ಲದೇ, ಬಿಗಿಯಾಗಿದ್ದ ಅವಳ ಸ್ತನಗಳು ವೃದ್ಧೆಯದಂತೆ ...ೀತಾಡತೊಡಗಿದವು. ತದನಂತರ ಈ ಮೂವರೂ ತ್ರಿಮೂರ್ತಿಗಳು ...ಲಶಾಲಿಗಳಾಗಿ ತಾವೇ ಸೃಷ್ಟಿ, ಸ್ಥಿತಿ ಮತ್ತು ಲಯಗಳ ವಿಶ್ವದ ಪ್ರಕ್ರಿಯೆಯ ...ಭಾಗಗಳನ್ನು ತಮ್ಮ ಅಧಿಕಾರಗಳಲ್ಲಿಟ್ಟುಕೊಂಡು ಮೆರೆಯತೊಡಗಿದರು. ...ವ್ಯಳ ಕಳೆದುಕೊಂಡ ಯೌವನದ ಜೊತೆಗೆ ಅವಳ ಆಸೆಯೂ ಹೊರಟು ...ೋಯಿತು. ಆ ಪ್ರಾಚೀನ ದೇವಿಯು ದೈತ್ಯರೊಂದಿಗೆ ಬಡಿದಾಡಿಕೊಂಡು ...ವರನ್ನು ಕೊಂದು ರಕ್ತವನ್ನು ಹೀರುತ್ತಾ ಜೀವನ ಸಾಗಿಸಿದಳು. (ಆಂಧ್ರಪ್ರದೇಶದ ...ನಪದ ಕಥೆ)

ಸ್ತ್ರೀತತ್ವದಿಂದಲೇ ಜಗತ್ತು ಉಂಟಾದದ್ದು ಎಂದು ಸಾರುವ ಇದೇ ಕಥೆಯಲ್ಲಿ ...ವಳಿಂದಲೇ ಪೋಷಿತರಾದ ಪುರುಷರು ಹೇಗೆ ಅವಳನ್ನು ಶೋಷಿಸಿದರು ...ಂಬುದನ್ನು ಗಮನಿಸಿ.

ಹಾಗೆಯೇ ದೀರ್ಘಜಿಹ್ವೆಯ ಕಥೆಯಲ್ಲಿ ಸ್ತ್ರೀತತ್ತ್ವವು ರಾಜಕೀಯವಾಗಿ ...ೇಗೆ ದಮನಿಸಲ್ಪಟ್ಟಿತು ಎಂದು ಸೂಚ್ಯವಾಗಿ ಕಥಿಸಲಾಗಿದೆ.

ದೀರ್ಘಜಿಹ್ವೆಯು ಉದ್ದವಾದ ನಾಲಿಗೆಯನ್ನು ಉಳ್ಳಂತವಳು. ದೇವತೆಗಳು ...ವು ಬೇರೆ ಯಾರೊಂದಿಗೂ ಹಂಚಿಕೊಳ್ಳಲು ಇಷ್ಟ ಪಡದ ಸೋಮರಸವನ್ನು ...ನ್ನ ಉದ್ದವಾದ ನಾಲಿಗೆಯನ್ನು ಚಾಚಿ ಹೀರಿಬಿಡುತ್ತಿದ್ದಳು. ದೇವತೆಗಳು ...ದೇ ಕಾರಣಕ್ಕೆ ಅವರ ದಾಯಾದಿಗಳಾದ ಅಸುರರನ್ನು ಕೊಲ್ಲುತ್ತಿದ್ದರು. ಹಾಗೆಯೇ ... ದೀರ್ಘಜಿಹ್ವೆಯನ್ನೂ ಕೊಲ್ಲಲು ಸಂಚು ಹೂಡಿದರು.

ಮೊದಲು ಸೋಮರಸವನ್ನು ಉತ್ಪಾದಿಸುವಂತಹ ಎಲ್ಲಾ ಯಜ್ಞಗಳನ್ನು ...ಲ್ಲಿಸಿದರು. ನಂತರ ದೇವತೆಗಳ ಅರಸ ಇಂದ್ರ ಅವಳನ್ನು ಹಿಡಿಯಲು ...ತ್ನಿಸಿದ. ಆದರೆ ಆಗಲಿಲ್ಲ, ನಂತರ ಈ ಕಾರ್ಯಕ್ಕೆ ಸುಮಿತ್ರನೆಂಬ ಸುಂದರರೂಪಿ ...ಯುವಕನನ್ನು ನೇಮಿಸಿದ. ಸುಂದರ ಯುವಕರಿಗೆ ಮಹಿಳೆಯು ಮನಸೋಲುವಳು ಎಂಬುದು ಇಂದ್ರನ ಆಲೋಚನೆಯಾಗಿತ್ತು, ಆದರೆ ಸುಮಿತ್ರನೂ ಈ ಕಾರ್ಯದಲ್ಲಿ ವಿಫಲನಾದ. ಕಾರಣವೆಂದರೆ, ದೀರ್ಘಜಿಹ್ವೆಯ ದೇಹವೆಲ್ಲವೂ ಯೋನಿಗಳಿಂದಲೇ ತುಂಬಿತ್ತು, ಆದರೆ ಒಂದೇ ಶಿಶ್ನವುಳ್ಳ ಸುಮಿತ್ರನು ಅವಳಿಗೆ ಸಾಟಿಯಾಗಲಿಲ್ಲ. ನಂತರ ಇಂದ್ರ ಸುಮಿತ್ರನ ದೇಹದೆಲ್ಲಾ ಕಡೆ ಶಿಶ್ನಗಳು ಮೊಳೆಯುವಂತೆ ಮಾಡಿ ಅವನನ್ನು ಮತ್ತೆ ಅವಳ ಕಡೆಗೆ ಕಳುಹಿಸಿದ. ಈ ಸಂದರ್ಭದಲ್ಲಿ ಸುಮಿತ್ರ ಯಶಸ್ವಿಯಾದ. ಅವಳನ್ನು ಸಂಪೂರ್ಣವಾಗಿ ಕೂಡಿದ ಸುಮಿತ್ರ ಅವಳಿಂದ ಬೇರ್ಪಡಲು ಒಪ್ಪಲಿಲ್ಲ, ತನ್ನ ಬಿಡುವಂತೆ ಆಕೆ ಚೀತ್ಕರಿಸಿದಳು. ನೀನು ನನ್ನ ಒಳ್ಳೆಯ ಗೆಳೆಯನೆಂದು ನಂಬಿದ್ದೆ ಎಂದು ಹಲುಬಿದಳು. "ನಾನು ಒಳ್ಳೆಯ ಸ್ನೇಹಿತರಿಗೆ ಒಳ್ಳೆಯವನು, ಕೆಟ್ಟ ಸ್ನೇಹಿತರಿಗೆ ಕೆಟ್ಟವನು" ಎಂದ ಸುಮಿತ್ರ ದೀರ್ಘಜಿಹ್ವೆಯನ್ನು ಕೆಳಗುರುಳಿಸಿ ಇಂದ್ರನನ್ನು ಕರೆದ. ಇಂದ್ರನು ತನ್ನ ವಜ್ರಾಯುಧದಿಂದ ಅವಳನ್ನು ಕೊಂದ. (ಜೈಮಿನಿಯ ಬ್ರಾಹ್ಮಣ)





ಸ್ತ್ರೀವರ್ಗವನ್ನು ರಮಿಸುವಂತೆಯೇ ರತಿಸಿ ಅವರನ್ನು ತಮ್ಮ ಅಧೀನಕ್ಕೆ ತಂದುಕೊಂಡು ಮಾತೃಪ್ರಧಾನ ಸಮಾಜವನ್ನು ನಾಶ ಮಾಡಿದ ಸಂಕೇತವಿದು.

ಹಾಗೆಯೇ ಇನ್ನೊಂದು ಕಥೆ ಜಗತ್ತಿನ ಉಗವು ಪುರುಷತತ್ವದಿಂದಾದ್ದು ಎಂದು ಸಾಧಿಸಲು ಹೊರಟರೂ, ಅಲ್ಲಿನ ಸ್ತ್ರೀತತ್ವದ ಅಗತ್ಯವನ್ನು ಅಲ್ಲಗಳೆಯಲಾಗುವುದಿಲ್ಲ. ಆಗಲೇ ಪುರುಷ ಪುರೋಹಿತವರ್ಗದ ಮೇಲಾಟವು ಪ್ರಾರಂಭವಾಗಿದ್ದಿರಬಹುದು.

ಕಥೆ ಹೀಗಿದೆ: ಪ್ರಜಾಪತಿಯು ತನ್ನ ಮನೋಬಲದಿಂದ ಗಂಡುಮಕ್ಕಳನ್ನು ಸೃಷ್ಟಿಸಿದ. ಆದರೆ ಅವರು ತಮ್ಮ ಸಂತಾನವನ್ನು ಹೆಚ್ಚಿಸಲಾರದೇ ಹೋದರು. ಹಾಗಾಗಿ ಇದೇ ಪ್ರಜಾಪತಿಯು ಸಂಧ್ಯಾ, ತನಗೆ ತಾನೇ ಮುಸ್ಸಂಜೆಯಾಗಿರುವ ಹೆಣ್ಣನ್ನು ಸೃಷ್ಟಿಸಿದ. ಪ್ರಜಾಪತಿಯು ಅತಿ ಸುಂದರಳಾಗಿರುವ ಅವಳನ್ನು ನೋಡಿ ಅತಿ ಮೋಹಗೊಂಡು ಅವಳನ್ನು ತಬ್ಬಿಕೊಳ್ಳಲು ಓಡಿದ. ಆದರೆ, ಅವಳು ಅವನಿಂದ ತಪ್ಪಿಸಿಕೊಂಡು ಆಕಾಶಕ್ಕೋಡಿದಳು. ಪ್ರಜಾಪತಿ ಅವಳನ್ನು ಬಿಡಲಿಲ್ಲ, "ತಂದೆಯಾದವನು ಮಾಡಬಾರದ್ದನ್ನು ಮಾಡುತ್ತಿದ್ದಾನೆ" ಎಂದು ಅವಳ ಅಣ್ಣಂದಿರು ಸಹಾಯಕ್ಕೆಂದು ರುದ್ರನನ್ನು ಕರೆದರು. ತನ್ನ ತಂದೆಯನ್ನು ಶಿಕ್ಷಿಸಲು ಕೇಳಿಕೊಂಡರು. ರುದ್ರನು ಶರಸಂಧಾನ ಮಾಡಿ ಪ್ರಜಾಪತಿಯನ್ನು ಘಾಸಿಗೊಳಿಸಿದನು. ಪ್ರಜಾಪತಿಯ ಬೀಜಗಳು (ವೀರ್ಯ) ಕೆಳಕ್ಕೆ ಬಿದ್ದು ಕೊಳವಾದವು. ಅದರಿಂದ ಪ್ರಾಣಿಗಳು ಹುಟ್ಟಿದವು. (ಐತರೇಯ ಬ್ರಾಹ್ಮಣ)

ಇಲ್ಲಿ ಪುರುಷವರ್ಗವು ಅವಳನ್ನು ಕಾಪಾಡಲೂ ಮತ್ತು ಉಪಯೋಗಿಸಿಕೊಳ್ಳಲೂ ಇರುವಂತಹ ಸಾಧ್ಯತೆಗಳನ್ನು ಹೇಳಿದರೆ, ಪುರೋಹಿತವರ್ಗ ಸಂಕೇತವಾಗಿ ಪರಶುರಾಮನು ತನ್ನ ತಾಯಿ ರೇಣುಕೆಯನ್ನೇ ಕೊಂದ ಕಥೆ ಮಾತೃಪ್ರಧಾನ ಸಮಾಜವ್ಯವಸ್ಥೆಗೆ ಕೊಟ್ಟ ಮಹಾ ಕೊಡಲಿಯೇಟು. ತನ್ನ ತಂದೆಯ ಮಾತಿಗೆ ಮನ್ನಣೆ ನೀಡಿ, ಅಕ್ಷರಶಃ ವಧೆ ಮಾಡುವ ಮೂಲಕ ಪಿತೃಪ್ರಧಾನವೂ, ಪುರುಷಪ್ರಧಾನವೂ ಆಗಿರುವಂತಹ ಸಮಾಜಕ್ಕೆ ಆದಿ ಪುರುಷನಾಗಿ ಸಾಂಕೇತಿಕವಾಗಿ ನಿಂತ. ರೇಣುಕಾ ಎಲ್ಲಮನ ವಧೆ ಎಲ್ಲಾ ಅಮ್ಮಂದಿರ ಸಮಾಜವನ್ನು ಅಳಿಸುವ ಸಂಕೇತ.

ರೇಣುಕಾದೇವಿ

ರೇಣು ಎಂದರೆ ಮಣ್ಣಿನ ಕಣ. ರೇಣುಕೆಯು ಪೃಥ್ವೀತತ್ವ ಪ್ರಧಾನವಾದ ದೇವತೆ. ಆಲಂಪುರ ಚರಿತ್ರೆಯಲ್ಲಿ ರೇಣುಕೆಯ ಮುಂಡವನ್ನು ಭೂದೇವಿಯೆಂದೇ ಸಂಭೋದಿಸಲಾಗಿದೆ.

ರೇಣುಕೆಯು ಹುತ್ತದ ರೂಪದಲ್ಲಿ ಪೂಜಿಸಲ್ಪಡುವವಳು. ಮೃದುಕೋಮಲವಾದ ರೇಣುಗಳಿಂದ ಗೂಢಾಕಾರವಾಗಿ ಕಟ್ಟಲ್ಪಟ್ಟಿರುವ ಹುತ್ತವೇ ಭೂಮಿಯ ಯೋನಿ. ಅದರಲ್ಲಿ ವಾಸ ಮಾಡುವ ನಾಗನಾದರೋ ಪುರುಷತತ್ವದ ಪ್ರತಿನಿಧಿ. ರೇಣುಕಾ ಎಂಬ ದೇವಿಯಾದುದು ಮೂಲತಃ ಭೂಮಿದಾಚೆ. ಹುತ್ತವು ಪೃಥ್ವೀತತ್ವದ ಸಂಕೇತವಾದರೆ, ನಾಗವು ಪುರುಷತ್ವದ ಸಂಕೇತ. ಈ ಎರಡರ ಸಂಬಂಧಸೂಚಿಯಾಗಿಯೇ ರೇಣುಕೆಯು ಅಷ್ಟನಾಗಗಳ ಆಭರಣಗಳಿಂದ ಆವೃತಳಾಗಿದ್ದಾಳೆ.

ರೇಣುಕರಾಜ ಮತ್ತು ಭೋಗಾವತಿ ರಾಜದಂಪತಿಗಳ ಮಗಳಾಗಿ ಹುಟ್ಟಿದವಳು ರೇಣುಕಾ. ಅವಳ ಎಂಟನೆಯ ವಯಸ್ಸಿನಲ್ಲಿ ಮಲಾಪಹಾರಣೀ ನದಿಯ ದಡದಲ್ಲಿ ವಾಸವಿದ್ದ ಋಚೀಕಮುನಿ ಮತ್ತು ಸತ್ಯವತಿಯರ ಮಗನಾದ ಜಮದಗ್ನಿ ಋಷಿಯೊಡನೆ ಆಕೆಯ ವಿವಾಹವಾಯಿತು. ವಸು, ವಿಶ್ವಾವಸು, ಬೃಹದ್ಭಾನು, ಬೃಹತ್ಕಣ್ವ ಮತ್ತು ರಾಮಭದ್ರರೆಂಬ ಮಕ್ಕಳಾದರು. ರಾಮಭದ್ರನೇ ಮುಂದೆ ಪರಶುರಾಮನಾದದ್ದು. ರೇಣುಕೆಯು ತನ್ನ ಪಾತಿವ್ರತ್ಯದ ಪ್ರಭಾವದಿಂದ ಪ್ರತಿ ನಿತ್ಯವೂ ಮರಳಿನಲ್ಲಿ ಮಡಿಕೆಯನ್ನು ಮಾಡಿಕೊಂಡು, ಸರ್ಪವನ್ನೇ ಸಿಂಬಿಯನ್ನಾಗಿಸಿಕೊಂಡು ನದಿಗೆ ಹೋಗಿ, ಪತಿಯ ಯಜ್ಞಕಾರ್ಯಕ್ಕೆ ಅಗತ್ಯವಿದ್ದ ನೀರನ್ನು ತರುತ್ತಿದ್ದಳು. ಒಂದು ದಿನ ಚಿತ್ರರಥನೆಂಬ ಗಂಧರ್ವನು ನದಿಯಲ್ಲಿ ತನ್ನ ಸಂಗಾತಿಗಳೊಡನೆ ರತಿಕ್ರೀಡೆಯಾಡುವುದನ್ನು ಕಂಡು ತಾನೂ ಅದನ್ನು ಬಯಸಿ, ಮರಳಿನ ಮಡಿಕೆಯು ಒಡೆದು, ಸರ್ಪ ಸಿಂಬಿಯು ಬಿಡಿಸಿಕೊಂಡು ಹರಿದು ಹೋಗಿ ಬರಿಗೈಯಲ್ಲಿ ಹಿಂದಿರುಗಿದಳು. ಅಗ್ನೋದಕವಿಲ್ಲದೆ ತಮ್ಮ ವ್ರತಕ್ಕೆ ಭಂಗವೊದಗಿದ್ದಕ್ಕಾಗಿ ಜಮದಗ್ನಿಯು ಕ್ರೋಧಾವಿಷ್ಟನಾಗಿ ಕುಷ್ಠರೋಗದ ಶಾಪವನ್ನು ಕೊಟ್ಟು ಅವಳನ್ನು ಆಶ್ರಮದಿಂದ ಹೊರದೂಡುವನು. ಅವಳೋ ವರದಾನದಿಗೆ ಬಂದು ಮೈಗೆ ಬೇವಿನ ಸೊಪ್ಪನ್ನು ಕಟ್ಟಿಕೊಂಡು ಸ್ನಾನ ಮಾಡುತ್ತಿದ್ದಳು.

ಏಕನಾಥ ಮತ್ತು ಜೋಗಿನಾಥರೆಂಬ ಸಿದ್ಧ ಪುರುಷರ ನೆರವಿನಿಂದ ರೋಗ ಮುಕ್ತಳಾದರೂ ಅವಳನ್ನು ಸಹಿಸದ ಜಮದಗ್ನಿಯು ಅವಳನ್ನು ಕೊಲ್ಲುವಂತೆ ತನ್ನ ಮಕ್ಕಳಿಗೆ ಆಜ್ಞಾಪಿಸುತ್ತಾನೆ. ಆದರೆ ಉಳಿದವರೆಲ್ಲರೂ ನಿರಾಕರಿಸಿ ರಾಮಭದ್ರನು ಮಾತ್ರ ಅವಳ ತಲೆ ತೆಗೆಯಲು ಸಮ್ಮತಿಸುತ್ತಾನೆ. ತನ್ನ ಪರಶುವನ್ನು ಹಿಡಿದುಕೊಂಡು ತಾಯನ್ನು ಕೊಲ್ಲಲು ಬಂದಾಗ ಅವಳು ಅವನಿಂದ ತಪ್ಪಿಸಿಕೊಂಡು ಚಂದ್ರಗುತ್ತಿಯ ಕಲ್ಲುಬಂಡೆಯ ಗುಹೆಯೊಳಗೆ ಬೆತ್ತಲಾಗಿ ಅಡಗಿಕೊಂಡಳು. ಆದರೂ ಹಿಂಬಾಲಿಸಿದ ಪರಶುರಾಮನು ತಾಯಿಯ ಶಿರವನ್ನು ಕತ್ತರಿಸಿದನು. ಬೇವಿನ ಉಡಿಗೆಯ ಸೇವೆ ಮತ್ತು ಬೆತ್ತಲೆ ಸೇವೆಗಳು ನಡೆಯುತ್ತಿದ್ದದ್ದು ಈ ಘಟನೆಯ ಪ್ರತೀಕವಾಗಿಯೇ. ಬೆನ್ನತ್ತಿ ಬಂದ ಮಗನಿಂದ ತಪ್ಪಿಸಿಕೊಳ್ಳಲು ಬೆತ್ತಲೆಯಾಗಿ ರೇಣುಕೆಯು ಲಿಂಗವನ್ನು ತಬ್ಬಿಕೊಂಡು ಪ್ರಾಣಬಿಟ್ಟಳಂತೆ. ಆದ್ದರಿಂದಲೇ ಅವಳ ಹಿಂಭಾಗವು ಪೂಜಿಸಲ್ಪಡುವುದು.

ಬೆತ್ತಲೆ ಸೇವೆ


"ಭಾಳಾ ಮಂದಿಗೆ ಬತ್ಲೆ ಮಾಡಿದಿ, ಬೇವ ಉಡಿಸಿ ಮೋಜ ನೋಡಿದಿ" ಎಂದು ಶಿಶುನಾಳ ಶರೀಫರು ಹಾಡಿದ್ದಾರೆ. ಈ ಬೆತ್ತಲೆ ಸೇವೆಯಲ್ಲಿ ಭಾಗವಹಿಸುತ್ತಿದ್ದವರು ಹೆಚ್ಚಾಗಿ ದಲಿತ ಮತ್ತು ಹಿಂದುಳಿದ ವರ್ಗದವರು. ಚರಿತ್ರೆಯ ಪುಟಗಳುದ್ದಕ್ಕೂ ಧರ್ಮವು ಸಾಂಸ್ಥಿಕ ರೂಪ ಪಡೆದುಕೊಂಡು ಕೆಳವರ್ಗದವರನ್ನೂ ಮತ್ತು ದಲಿತರನ್ನೂ ಶೋಷಣೆ ಮಾಡುತ್ತಲೇ ಬಂದಿದೆ. ಬೆತ್ತಲೆಸೇವೆಯಂತಹ ಅನಾಗರಿಕ ಪದ್ಧತಿಯು ಈ ದೇವಸ್ಥಾನದಲ್ಲಿ ಜೀವಂತವಾಗಿದ್ದು ಒಂದು ದುರಂತವೇ ಸರಿ. ಆದರೂ 1987 ರಲ್ಲಿ ಸರ್ಕಾರದ ಉಗ್ರಕ್ರಮದಿಂದಾಗಿ ಈ ಸಂಪ್ರದಾಯವು ಈಗ ಪೂರ್ಣವಾಗಿ ನಿಂತಿದೆ. (ರೇಣುಕಾರಾಧನಮ್ - ಹರ್ಷ ಕಣೇಕಲ್)

ತನ್ನ ಪತ್ನಿಯನ್ನು ಸಹಜ ಬಯಕೆಗಳಿಂದ ವಂಚಿಸಿ, ಅವಳ ರೋಗಕ್ಕೆ ಕಾರಣನಾಗಿ, ಅವಳ ಕೊಲೆಯನ್ನು ತನ್ನ ಮಗನಿಂದಲೇ ಮಾಡಿಸಿ, ತಮ್ಮ ಅಧಿಕಾರ ಮೆರೆದರು ಎಂದು ನಾವು ವಾಸ್ತವಿಕ ನೆಲೆಗಟ್ಟಿನಿಂದ ಈ ಕಥೆಯನ್ನು ನೋಡಿದರೆ, ಶ್ರೀ ಹರ್ಷ ಕಣೇಕಲ್ ತಮ್ಮ ರೇಣುಕಾರಾಧನಮ್ ಪುಸ್ತಕದಲ್ಲಿ ಆಧ್ಯಾತ್ಮಿಕ ರೀತಿಯಲ್ಲಿ ಪುರಾಣದ ಒಗಟನ್ನು ಒಡೆಯಲು ಯತ್ನಿಸುತ್ತಾರೆ.


ರೇಣುಕೆಯ ಐದು ಜನ ಮಕ್ಕಳು ಮೂಲಾಧಾರದಿಂದ ವಿಶುದ್ಧಿಯವರೆಗೂ ಇರುವ ಐದು ಚಕ್ರಗಳ ಸಂಕೇತ. ರೇಣುಕೆಯ ಪತಿಯಾದ ಜಮದಗ್ನಿಯು ಆರನೆಯದಾದ ಆಜ್ಞಾಚಕ್ರದ ಪ್ರತೀಕ. ರೇಣುಕೆಯನ್ನು ಸಂಭ್ರಾಂತಗೊಳಿಸುವ ಗಂಧರ್ವ ಚಿತ್ರರಥ ಮತ್ತು ಅಪ್ಸರಸಿಯರ ಜಲಕ್ರೀಡೆ ಕಾಮಪೂರಿತವಾದ ಮನಸ್ಸಿನ ಪ್ರತೀಕ.

ಮನಸ್ಸಿನ ಕಾಮನೆಯನ್ನು ಗೆಲ್ಲದೇ ಯೋಗಿಯು ಸಾಧನೆಯಲ್ಲಿ ಮುಂದುವರಿಯಲು ಸಾಧ್ಯವಾಗದು. ಆಜ್ಞಾಚಕ್ರದಲ್ಲಿ ಇರುವ ಗುರುವಿನ ಆಜ್ಞೆಯಂತೆ ಕಂಠದಲ್ಲಿರುವ ವಿಶುದ್ಧಿಯ ಸ್ಥಾನದಲ್ಲೇ ಕಾಮನೆಗಳನ್ನೆಲ್ಲಾ ನಿವೃತ್ತಗೊಳಿಸಬೇಕು. ಆಗ ಮಾತ್ರ ಸಹಸ್ರಾರವನ್ನು ಸೇರುವುದಕ್ಕೆ ಸಾಧ್ಯವಾಗುವುದು. ವಿಶುದ್ಧ ಎಂಬ ಹೆಸರೇ ಸೂಚಿಸುವಂತೆ ಅದು ಕಾಮನೆಗಳಿಂದ ಮುಕ್ತವಾದ ಪರಮಪವಿತ್ರವಾದ ಸ್ಥಾನ. ಪರಶುರಾಮನೇ ವಿಶುದ್ಧ ಚಕ್ರದ ಪ್ರತೀಕ. ಆತನು ತನ್ನ ತಂದೆಯೂ ಗುರುವೂ ಆದ ಜಮದಗ್ನಿಯ ಆಜ್ಞೆಯಂತೆ ರೇಣುಕೆಯ ಕಾಮನೆಗಳನ್ನೆಲ್ಲಾ ವಿಶುದ್ಧಿಯ ಸ್ಥಾನವಾದ ಕಂಠದಲ್ಲೇ ಕತ್ತರಿಸಿ ಷಟ್ಚಕ್ರಗಳಿಂದ ಮುಕ್ತಳಾದ ಕುಲಕುಂಡಲಿನಿಯು ಸಹಸ್ರಾರದಲ್ಲಿ ಪರಶಿವನೊಂದಿಗೆ ಕ್ರೀಡಿಸುವಂತೆ ಮಾಡುತ್ತಾನೆ.

ಹೀಗೆ ಆಧ್ಯಾತ್ಮಿಕ ವ್ಯಾಖ್ಯಾನ ಕೊಡುವ ಮೂಲಕ ಎಷ್ಟೆಷ್ಟೋ ಪುರಾಣಗಳ ಕಥೆಗಳು ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಅಧ್ಯಯನಗಳಿಂದ ತಪ್ಪಿಸಿಕೊಂಡುಬಿಡುತ್ತವೆ. ■



ಭಾರತ ನನ್ನನ್ನು ಪ್ರಧಾನಿಯನ್ನಾಗಿ ಹೊಂದಲು ಹಂಬಲಿಸುತ್ತಿರುವುದಕ್ಕೆ 9 ಅದಮ್ಯ ಕಾರಣಗಳು



1. ರಿಲಯನ್ಸ್‌ಗೆ 'ಒಳ್ಳೆಯ'ದೆನಿಸಿದ್ದು ಭಾರತಕ್ಕೂ 'ಒಳ್ಳೆಯ'ದೆನಿಸಲೇಬೇಕು.

2. ನಾನು ಖಾಸಗಿ ಬಂಡವಾಳಶಾಹಿ ಉದ್ಯಮಗಳಲ್ಲಿ ನಂಬಿಕೆ ಇಟ್ಟಂತವನು (ನನ್ನ ಸ್ನೇಹಿತ ಮತ್ತು ಉದ್ಯಮಿಯಾದ ಗೌತಮ್ ಅದಾನಿಗೆ ಕಚ್ ತೀರದುದ್ದಕ್ಕೂ ಹರಡಿಕೊಂಡ ಸಾವಿರಾರು ಎಕರೆ ಜಾಗವನ್ನು ನಾನು ಬೇಕಾಬಿಟ್ಟಿ ಬೆಲೆಗೆ ಕೊಡಲಿಲ್ಲವೇ? 2005ರಲ್ಲಿ, ಪ್ರತಿ ಚದರ ಮೀಟರ್‌ಗೆ ಜುಜುಬಿ 10 ರೂಪಾಯಿ ರೇಟಿನಂತೆ ಸುಮಾರು 6500 ಎಕರೆ ಜಾಗವನ್ನು ಆತನಿಗೆ ಕೊಡುವುದಕ್ಕಾಗಿ ನನ್ನ ಸರ್ಕಾರ ಒಂದೇ ದಿನ 23 ಆದೇಶಗಳನ್ನು ರವಾನಿಸುವಷ್ಟು ಶ್ರಮ ಹಾಕಿತು)

3. ನಾನು ಹೆಂಗಸರ ಸುರಕ್ಷತೆಯ ಬಗ್ಗೆ ಅಪಾರ ಕಾಳಜಿ ಉಳ್ಳಂತವನು. (ಮಹಿಳೆಯರನ್ನು ಸುರಕ್ಷಿತವಾಗಿಡುವುದು ನನ್ನ ಮೊದಲ ಆದ್ಯತೆ, ಅದಕ್ಕೋಸ್ಕರ ಹಗಲು-ರಾತ್ರಿ ಎನ್ನದೆ ಅವರ ಪ್ರತಿಯೊಂದು ಖಾಸಗಿ ಚಲನವಲನಗಳ ಮೇಲೂ ಹದ್ದಿನ ಕಣ್ಣಿಡಲು ಸಿದ್ಧ)

4. ನಾನು ಗುಜರಾತ್‌ಗೆ 'ಅಭಿವೃದ್ಧಿ'ಯನ್ನು ತಂದಿದ್ದೇನೆ; ಇವತ್ತು ಗುಜರಾತ್‌ನಲ್ಲಿ ಪ್ರತಿ ಮೂರರಲ್ಲಿ ಒಬ್ಬ ಮಗು ಮಾತ್ರ ಅಪೌಷ್ಟಿಕತೆಯಿಂದ ಬಳಲುತ್ತಿದೆ. ಇದನ್ನೇ ನಾನು ಭಾರತಕ್ಕೂ ಮಾಡುತ್ತೇನೆ, ನಮ್ಮ ಪ್ರತಿ ಮೂರು ಮಕ್ಕಳಲ್ಲಿ ಒಂದು ಮಗು ಮಾತ್ರ ಹಸಿದ ಹೊಟ್ಟೆಯಲ್ಲಿ ಮಲಗುವಂತೆ ಮಾಡುವುದಾಗಿ ನಾನು ಭರವಸೆ ನೀಡುತ್ತೇನೆ.

5. ನಾನು ಭ್ರಷ್ಟಾಚಾರ ಮುಕ್ತ ಆಡಳಿತದಲ್ಲಿ ನಂಬಿಕೆ ಇಟ್ಟಂತವನು. (ನನ್ನ ಸ್ವಂತ ರಾಜ್ಯ ಅದರದ್ದೇ ಆದ ಲೋಕಾಯುಕ್ತ ವ್ಯವಸ್ಥೆಯನ್ನೇ ಹೊಂದದಂತೆ ತಡೆಯಲು ನಾನು ಕೋಟ್ಯಂತರ ರೂಪಾಯಿ ಖರ್ಚು ಮಾಡಿದ್ದೇನೆ. ಲೋಕಾಯುಕ್ತ ಯಾಕೆ ಬೇಕು?)

6. ಮಾಧ್ಯಮಗಳೊಂದಿಗೆ ನಿರಂತರವಾಗಿ ಸಂವಾದದಲ್ಲಿರಬೇಕೆಂದು ನಂಬಿದವನು ನಾನು (ನನಗೆ ತಿಳಿದಮಟ್ಟಿಗೆ ಕಳೆದ ಐದು ವರ್ಷಗಳಲ್ಲಿ ನಾನು ಕಡೇ ಪಕ್ಷ ಒಂದಾದರು ಮಾಧ್ಯಮ ಮುಖಾಮುಖಿ ಸಂದರ್ಶನ ಎದುರಿಸಿದ್ದೇನೆ)

7. ಪ್ರಭುತ್ವಶಾಹಿ ಹಿಡಿತವನ್ನು ನಾನು ಒಪ್ಪುವುದಿಲ್ಲ, ರಾಜಕೀಯವಾಗಿ ಮೋಹನ್ ಭಾಗವತ್‌ರನ್ನು ಬಿಟ್ಟು ಮತ್ತ್ಯಾರಿಗೂ ನನ್ನನ್ನು ಪ್ರಶ್ನಿಸುವ ಹಕ್ಕಿಲ್ಲ. (ಆರ್‌ಎಸ್‌ಎಸ್ ಆಶಯಗಳನ್ನು ಕಾಯುವಲ್ಲಿ ಆತ ಬಲು ಚಾಣಾಕ್ಷ. 2005ರಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಬಾಂಬ್ ಸ್ಫೋಟಗಳನ್ನು ನಡೆಸುವಂತೆ ಅಸೀಮಾನಂದನನ್ನು ಆತ ಪ್ರೇರೇಪಿಸಿದಾಗಲೂ 'ಇದನ್ನು ಸಂಘದೊಂದಿಗೆ ಲಿಂಕ್ ಮಾಡಬೇಡ' ಎಂಬ ಸಲಹೆ ನೀಡುವುದನ್ನು ಮರೆತವನಲ್ಲ)

8. ನನ್ನ ಸ್ವಂತ ಬ್ಲಾಗ್‌ಗಳನ್ನು ಸ್ವತಃ ನಾನೇ ಬರೆಯುತ್ತೇನೆ (ನನ್ನ ಬರವಣಿಗೆ ಎಷ್ಟು ವೇಗವಾಗಿರುತ್ತದೆಂದರೆ ಕೆಲವೊಮ್ಮೆ ಫಸ್ಟ್ ಪರ್ಸನ್‌ನಿಂದ ಥರ್ಡ್ ಪರ್ಸನ್ ಆಗಿ ಬಿಟ್ಟಿರುತ್ತೇನೆ)

9. ನನ್ನ ಎದೆ 56 ಇಂಚು ಸುತ್ತಳತೆಯದ್ದು.

ಅಂಬಿಗಿಂತ ಶಿವಣ್ಣನೇ ವಾಸಿ

'ಕನ್ನಡ ಚಿತ್ರರಂಗ ಬಿಟ್ಟು ಹತ್ತು ವರ್ಷವಾಯ್ತು' ಎಂದು ಹೇಳಿದ ಕನ್ನಡದ ಹಿರಿಯ ನಟ ಅಂಬರೀಷ್ ಅವರು ಇನ್ನು ಮುಂದೆ ಕನ್ನಡ ಸಿನಿಮಾಗಳಲ್ಲಿ ನಟಿಸುವ ಯೋಗ್ಯತೆಯನ್ನು ಕಳಕೊಂಡುಬಿಟ್ಟರು.

ಕನ್ನಡ ಸುರಸುಂದರಾಗಿ ಎನಿಸಿಕೊಂಡ ರಮ್ಯಾ ಅನುಭವದ ಪಾಠ ಹೇಳಿ ಕೊಟ್ಟ ಮೇಡಂ ಉಮಾಶ್ರೀ, ಇವರೆಲ್ಲ ನಾವೂ ರಾಜಕೀಯದಲ್ಲಿ ಕ್ಷೇಮವಾಗಿದ್ದೀವಿ. ಕನ್ನಡದ ಚಿತ್ರರಂಗ ಇದ್ದರೆಷ್ಟು, ಹೋದರೆಷ್ಟು ಎನ್ನುವ ಮನೋಭಾವನೆಗಳಿಗೆ ನನ್ನದೊಂದು ಧಿಕ್ಕಾರ.

ಅಮಿತಾಬ್ ಬಚ್ಚನ್, ಶಾರುಖ್‌ಖಾನ್, ಸಲ್ಮಾನ್‌ಖಾನ್, ಅಮೀರ್ ಖಾನ್, ರಜನೀಕಾಂತ್, ಕಮಲ ಹಾಸನ್, ವಿಜಯ್, ಅಜಿತ್, ಚಿರಂಜೀವಿ, ಪವನ್ ಕಲ್ಯಾಣ್, ಮಹೇಶ್‌ಬಾಬು, ಜೂನಿಯರ್ ಎನ್‌ಟಿಆರ್, ಮುಮ್ಮಟ್ಟಿ, ಮೋಹನ್‌ಲಾಲ್, ಜಾಕಿಚಾನ್ ಇವರೆಲ್ಲರ ಚಿತ್ರಗಳು ಕನ್ನಡದಲ್ಲಿ ಬಂದುಬಿಟ್ಟರೆ ಕನ್ನಡ ನಟರ ಚಿತ್ರಗಳನ್ನು ಕೇಳುವವರೇ ಇಲ್ಲದಂತಾಗುತ್ತದೆ.

ಬೆಂಗಳೂರಿನಲ್ಲಿ 30-40 ಥಿಯೇಟರ್ ಇರಬಹುದು. ಆದರೆ ಒಂದೇ ಥಿಯೇಟರ್ ಇರುವ ಹಳ್ಳಿಗಳಲ್ಲಿ ಪರಿಸ್ಥಿತಿ ಏನಾಗುತ್ತದೆ. ಕಲ್ಪನೆ ಮಾಡಿಕೊಂಡರೇನೆ ಭಯವಾಗುತ್ತೆ.

ಒಂದಂತೂ ಸತ್ಯ ಕನ್ನಡ ನಟರು ಅಂತ ಅನಿಸಿಕೊಂಡವರು ತಮ್ಮ ಸ್ವಾಭಿಮಾನ, ಇಗೋ ಅನ್ನು ಬಿಟ್ಟು ಡಬ್ಬಿಂಗ್ ವಿರುದ್ಧ ಒಗ್ಗಟ್ಟಾಗಿ ಹೋರಾಡದೇ ಹೋದರೆ ಕನ್ನಡ ಚಿತ್ರರಂಗವಷ್ಟೇ ಅಲ್ಲ, ಕನ್ನಡ ಭಾಷೆ ಕೂಡ ಸರ್ವನಾಶವಾಗುವುದು ಶತಃಸಿದ್ಧ.

- ಶಂಕರ ಹ. ಜವಾ, ಇಳಕಲ್


ಕನ್ನಡ ಚಿತ್ರರಂಗಕ್ಕೆ ಈ 'ಡಬ್ಬಿಂಗ್' ಭೂತ

ಕನ್ನಡ ಚಿತ್ರರಂಗದ ಕೆಲವು ವ್ಯಕ್ತಿಗಳ ವ್ಯಾಪಾರ ದೃಷ್ಟಿಯಿಂದ ಹಾಗೂ ಕನ್ನಡದ ಬಗ್ಗೆ ಅಭಿಮಾನ ಗೌರವ ಇಲ್ಲದವರು ಜ್ಞಾನದ ನೆಪವೊಡ್ಡಿ 'ಡಬ್ಬಿಂಗ್' ಬೇಕು ಅಂತ ತಮ್ಮ ಸ್ವಾರ್ಥಕ್ಕೆ ಗ್ರಾಹಕರ ಹಕ್ಕು ಎಂದು 'ಡಬ್ಬಿಂಗ್' ಪರ ಮಾತಾಡುತ್ತಿರುವುದು ಹೇಸಿಗೆ ತಿನ್ನುವ ಕೆಲಸವಾಗಿದೆ. ಇದರಿಂದ ಕನ್ನಡದ ಸಂಸ್ಕೃತಿಗೆ ಧಕ್ಕೆಯಾಗಲಿದೆ. ಹಿಂದೆ ಭಾಷಾವಾರು ಪ್ರಾಂತ್ಯ ಆಧಾರದ ಮೇಲೆ 'ಕರ್ನಾಟಕ, ಕನ್ನಡ' ಅಂತ ರಚನೆಯಾಗಿದೆ. ಆ ಆಧಾರದ ಮೇಲೆ ಕನ್ನಡದ ಸಂಸ್ಕೃತಿ, ಕಲೆ, ಸಾಹಿತ್ಯ ಭಾಷೆ ಹೀಗೆ ಹತ್ತು ಹಲವು ಕನ್ನಡಿಗರ ಹಕ್ಕುಗಳು ನಿಂತಿವೆ. ಅದರ ಮೇಲೆ ದೌರ್ಜನ್ಯ ಮಾಡೋ ಹಕ್ಕು ಯಾರಿಗೂ ಇಲ್ಲ.

ಈ ಡಬ್ಬಿಂಗ್‌ನಿಂದ ಕನ್ನಡದ ಸಂಸ್ಕೃತಿ, ಭಾಷೆಯ ಉಚ್ಚಾರಣೆ, ಭಾವನೆ ಹಾಗೂ ಚಿತ್ರರಂಗದಲ್ಲಿ ದುಡಿಯುವ ಕಾರ್ಮಿಕರ ಬದುಕನ್ನು ಹಾಳು ಮಾಡಬೇಡಿ ಎಂಬುದು ಕನ್ನಡಿಗರ ಬಯಕೆ.

ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅವರು ಐದು ದಶಕಗಳ ಕಾಲ ಕಲೆಯ ಮುಖಾಂತರ ಕನ್ನಡ ಭಾಷೆ ಹಾಗೂ ಕನ್ನಡ ಚಿತ್ರರಂಗಕ್ಕೆ ಸೇವೆ ಸಲ್ಲಿಸಿದ್ದರು. ಅವರು ಇದ್ದಾಗ ಇರದ 'ಡಬ್ಬಿಂಗ್' ಈಗ ಮತ್ತೆ ಸುದ್ದಿ ಎದ್ದಿದೆ. ಇದನ್ನು ಅರಿಯದ ರೀತಿಯಲ್ಲಿ ಮೌನಕ್ಕೆ ಶರಣಾಗಿರುವ ಕನ್ನಡದ ಈಗಿನ ಹಿರಿಯ ನಟರಾದ ಅಂಬರೀಷ್ ಅವರಿಗೆ ಶೋಭೆ ತರುವಂತದಲ್ಲ.

ಇನ್ನೂ ಕನ್ನಡ ಭಾಷೆಯ ಅಂದಚೆಂದವನ್ನು ಅರಿಯದವರೆಲ್ಲಾ ಕನ್ನಡ ಹೆಸರಿನಲ್ಲಿ ಸಂಘ ಸಂಸ್ಥೆ ಹುಟ್ಟು ಹಾಕುತ್ತಾರೆ. ನವೆಂಬರ್‌ನಲ್ಲಿ ಮಾತ್ರ ಕನ್ನಡ ರಾಜ್ಯೋತ್ಸವ ಹಾಗೂ ಸಂಘದ ವಾರ್ಷಿಕೋತ್ಸವ ಜೊತೆಗೆ ಸಂಘದಲ್ಲಿರುವ ವ್ಯಕ್ತಿಗಳ ಹುಟ್ಟುಹಬ್ಬ ಆಚರಿಸುವುದಕ್ಕೆ ಸೀಮಿತವಾಗಿರುತ್ತೆ. ಅವರು ಎಂದೂ ಕನ್ನಡದ ನೆಲ, ಜಲ, ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯ ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಒಲವು ತೋರುವುದಿಲ್ಲ.



- ಎನ್. ಮಹೇಶ್, ಕತ್ತಾದಿಪುರ

ಈ ವಾರದ 'ಲಂಕೇಶ್'ನಲ್ಲಿ ಶಿವಣ್ಣ V/s ಅಂಬಿ ವರದಿ ಕುರಿತು ನನ್ನ ಅನಿಸಿಕೆ. ಅಂಬಿಯವರು ಡಬ್ಬಿಂಗ್ ವಿರೋಧಿ ಚಿತ್ರ ಕಲಾವಿದರ ಪ್ರತಿಭಟನೆಯಲ್ಲಿ ಭಾಗವಹಿಸದಿರಲು ಚಿತ್ರರಂಗದಲ್ಲಿ ಡಾ. ರಾಜ್ ಕುಟುಂಬ ನಾಯಕತ್ವದ ವಿರುದ್ಧ ಅಂಬಿಗಿರುವ ಒಳ ಅಸಹನೆ, ಹೊಟ್ಟೆಕಿಚ್ಚು ಕಾರಣ ಎಂದು ಲೇಖಕರು ವಿಶ್ಲೇಷಿಸಿರುವಂತೆಯೇ ಚಿತ್ರ ಜಗತ್ತಿನಲ್ಲಿ ಅಂಬಿಗಿರುವ ಆತ್ಮೀಯರು, ಹಿತೈಷಿಗಳಾದ ನಿರ್ಮಾಪಕರು, ಪ್ರದರ್ಶಕರು, ವಿತರಕರೂ ಸೇರಿದಂತೆ ಅನೇಕರು ಹೋರಾಟದಲ್ಲಿ ಭಾಗವಹಿಸದಂತೆ ಅಂಬಿಯೇ ಕೈಕಟ್ಟಿರಬಹುದಲ್ಲವೇ?!

ಏನೇ ಇರಲಿ ರಾ. ಸೋಮನಾಥರ ಈ ಲೇಖನ ಅಂಬಿಯ ಅಂತರಂಗದ ಮುಖವ ಅನಾವರಣಗೊಳಿಸುವುದರ ಜೊತೆಗೆ ಚಿತ್ರರಂಗದ ಹಿರಿಯರೊಬ್ಬರ ವಿರುದ್ಧ ಅವರ ಮುಂದೆಯೇ ಬೆಳೆದ-ಬೆಳೆಯುತ್ತಿರುವ ಹುಡುಗರು, ಚಿಂಟೂ-ಪಿಂಟೂಗಳು ಗುಡುಗಿದ್ದು ವಿಶೇಷವಾಗಿತ್ತು. ಹಿಂದಿನಂತೆಯೇ ಇಂದು, ನಾಳೆಯೂ ಸಹ ಜೆ.ಪಿ.ನಗರ-ಸದಾಶಿವನಗರ ಎಂಬ ಎರಡು ಹೆಡ್‌ಕ್ವಾಟರ್ಸ್‌ಗಳು ಕನ್ನಡ ಚಿತ್ರರಂಗಕ್ಕೆ ಕಾಯಂ ಎಂಬು ಮನದಟ್ಟಾಯಿತು..

- ಡಿ.ಎಲ್.ಮಂಜು, ಮಂಗಳೂರು



ಪೂರ್ವಾಗ್ರಹ ನಮ್ಮ ಮಾನಸಿಕತೆಯೊಳಗೆಯೇ ಹಾಸುಹೊಕ್ಕಾಗಿದೆ

ಇತ್ತೀಚೆಗೆ ಅರುಣಾಚಲ ಪ್ರದೇಶದ ವಿದ್ಯಾರ್ಥಿ ನೀಡೋ ತಾನ್ಯಾನನ್ನು ದಿಲ್ಲಿಯ ಕೆಲವು ವ್ಯಾಪಾರಿಗಳು ಮೊದಲು ಅಪಹಾಸ್ಯ ಮಾಡಿ ನಂತರ ಅವನು ಪ್ರತಿಭಟಿಸಿದ್ದಕ್ಕೆ ಅವನನ್ನು ಹೊಡೆದು ಕೊಂದಿದ್ದು ಮತ್ತೂ ದಿಲ್ಲಿ ಪೊಲೀಸರು ಅಪರಾಧಿಗಳನ್ನು ರಕ್ಷಿಸಲು ಪ್ರಯತ್ನಿಸಿದ್ದು ದಿಲ್ಲಿಯ ಜನರಲ್ಲಿ ಈಶಾನ್ಯ ಭಾರತೀಯರ ಬಗ್ಗೆ ಇರುವ ಜನಾಂಗ ತಿರಸ್ಕಾರಕ್ಕೆ ಸಾಕ್ಷಿ. ದಿಲ್ಲಿ ನಮ್ಮ ಇಡೀ ದೇಶದ ರಾಜಧಾನಿ ಆಗಿದ್ದರೂ ದಿಲ್ಲಿಯ ಸುತ್ತಲಿನ ನಾಲ್ಕು ರಾಜ್ಯಗಳವರನ್ನು ಹೊರತುಪಡಿಸಿ ಉಳಿದ ರಾಜ್ಯದವರನ್ನು ದಿಲ್ಲಿಯಲ್ಲಿ ಪರಕೀಯರಂತೆ ಕಾಣಲಾಗುತ್ತದೆ. ಏನಾದರೊಂದು ಅಡ್ಡ ಹೆಸರಿಟ್ಟು ಬೇರೆ ರಾಜ್ಯದವರನ್ನು ಅಪಹಾಸ್ಯ ಮಾಡುವುದು ದಿಲ್ಲಿಯವರಿಗೆ ವಿಕೃತ ಆನಂದ ಕೊಡುತ್ತದೆ. ಅದರಲ್ಲೂ ಈಶಾನ್ಯ ಭಾರತೀಯರನ್ನು ಮತ್ತು ದಕ್ಷಿಣ ಭಾರತೀಯರನ್ನು ಅತೀ ಹೆಚ್ಚು ಅಪಹಾಸ್ಯ ಮಾಡಲಾಗುತ್ತದೆ; ಅವರನ್ನೆಲ್ಲ ಎರಡನೇಯ ದರ್ಜೆಯ ಪ್ರಜೆಗಳಂತೆ ಅಲ್ಲಿನ ಜನ ಕಾಣುತ್ತಾರೆ.

ನಾನು ದಿಲ್ಲಿಯಲ್ಲಿ ಬ್ಯಾಂಕ್ ಉದ್ಯೋಗ ನಿಮಿತ್ತ ನಾಲ್ಕು ವರ್ಷ ಇದ್ದಾಗ ನನಗೇ ಅದರ ಕಹಿ ಅನುಭವ ಆಗಿದೆ. ಹಾಗೆ ನೋಡಿದರೆ ಜಾತಿ-ಧರ್ಮ- ಭಾಷೆ-ಪ್ರದೇಶದ ಆಧಾರದಲ್ಲಿ ಜನಾಂಗ ಪೂರ್ವಾಗ್ರಹ ಭಾರತೀಯರ ಮಾನಸಿಕತೆಯೊಳಗೆಯೇ ಹಾಸುಹೊಕ್ಕಾಗಿದೆ. ಇದು ಪುರಾಣಕಾಲದಿಂದಲೂ ಇರುವಂತದ್ದು, ಆದರೂ ನಾವು ದಕ್ಷಿಣ ಆಫ್ರಿಕಾ ಮತ್ತು ಯುರೋಪಿನಲ್ಲಿ ಇರುವ ಜನಾಂಗ ತಿರಸ್ಕಾರ ಮತ್ತು ವರ್ಣ-ದ್ವೇಷವನ್ನು ಎತ್ತಿ ತೋರಿಸುತ್ತೇವೆ.

ನಮ್ಮ ಮನೆಯಲ್ಲಿ ಕೋಣ ಸತ್ತು ಬಿದ್ದಿದ್ದರೂ ಬೇರೆಯವರ ಮನೆಯಲ್ಲಿ ನೊಣ ಬಿದ್ದಿರುವುದನ್ನು ತೋರಿಸುವಂತ ಹವರು ನಾವು. ಉತ್ತರ ಭಾರತದ ಹೈಸ್ಕೂಲಿನ ಇತಿಹಾಸ ಪುಸ್ತಕವನ್ನೇ ತೆಗೆದು ನೋಡಿ. ಅದರಲ್ಲಿ ಪುಲಿಕೇಶಿಯಂತಹ ಮಹಾನ್ ಚಕ್ರವರ್ತಿಯ ಹೆಸರೂ ಕಾಣಸಿಗುವುದಿಲ್ಲ, ದಕ್ಷಿಣ ಭಾರತೀಯ ಸ್ವಾತಂತ್ರ ಹೋರಾಟಗಾರರ ಹೆಸರು ಅಲ್ಲಿ ಯಾರಿಗೂ ಗೊತ್ತಿಲ್ಲ, ಝಾನ್ಸಿ ರಾಣಿ ಲಕ್ಷ್ಮಿಯನ್ನು ವೈಭವೀಕರಿಸುವ ಅಲ್ಲಿಯವರಿಗೆ ಅವಳಿಗಿಂತ ಮುವತ್ತು ವರ್ಷ ಮೊದಲೇ ಬ್ರಿಟಿಷರ ವಿರುದ್ಧ ಹೋರಾಡಿದ ಕಿತ್ತೂರು ಚೆನ್ನಮ್ಮಳ ಹೆಸರೇ ಗೊತ್ತಿಲ್ಲ.

ಹಿಂದಿ ಚಿತ್ರರಂಗದವರು ಉತ್ತರ ಭಾರತೀಯರಲ್ಲಿ ಇರುವ ಈ ಜನಾಂಗ ಪೂರ್ವಾಗ್ರಹವನ್ನು ಹೆಚ್ಚು ಅಳಗೊಳಿಸುತ್ತಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ದಕ್ಷಿಣ ಭಾರತೀಯರನ್ನು ಮತ್ತು ಈಶಾನ್ಯ ಭಾರತೀಯರನ್ನು ಬಫೂನ್‌ಗಳಂತೆ ಅಪಹಾಸ್ಯದ ವಸ್ತುವಾಗಿಯೇ ತೋರಿಸಲಾಗುತ್ತದೆ.

ಇದಕ್ಕೆ ವಾಣಿಜ್ಯ ಜಾಹಿರಾತುಗಳೂ ಹೊರತಲ್ಲ. ಈ ಜನಾಂಗ ಪೂರ್ವಾಗ್ರಹದಿಂದಾಗಿಯೇ ಬಾಲಿವುಡ್ಡಿನಲ್ಲಿ ದಕ್ಷಿಣ ಭಾರತೀಯ ಅಥವಾ ಈಶಾನ್ಯ ಭಾರತೀಯ ನಟನೊಬ್ಬ ಎಂದೂ ಸೂಪರ್ ಸ್ಟಾರ್ ಆಗಲು ಸಾಧ್ಯವೇ ಇಲ್ಲ.

ಕನ್ನಡ ಚಿತ್ರರಂಗದಲ್ಲಿ ನೇಪಾಳಿ ಕುಟುಂಬದಿಂದ ಬಂದ ನೇಪಾಳಿ ಮುಖಚರ್ಯೆ ಇರುವ ಗಣೇಶ್ ಸೂಪರ್ ಸ್ಟಾರ್ ಆಗಲು ಸಾಧ್ಯವಾಯಿತು. ಹಾಗೆಯೇ ತಮಿಳಿನಲ್ಲಿ ಮರಾಠಿ ಮೂಲದ ರಜನಿಕಾಂತ್ ಎಂಬ ಕರಿಯ ಸೂಪರ್ ಸ್ಟಾರ್ ಆಗಲು ಸಾಧ್ಯವಾಯಿತು. ಆದರೆ ಹಿಂದಿಯಲ್ಲಿ ಬಿಳಿ ಚರ್ಮದ ಪಂಜಾಬಿಗಳನ್ನು ಹೊರತುಪಡಿಸಿ ಬೇರೆ ಯಾರೂ ಸೂಪರ್ ಸ್ಟಾರ್ ಆಗಲು ಸಾಧ್ಯವೇ ಇಲ್ಲ ಎಂಬಂತಹ ಮಾನಸಿಕತೆ ತುಂಬಿದೆ. ಇದಕ್ಕೆ ಮೂಲಕಾರಣ ಉತ್ತರ ಭಾರತೀಯರಲ್ಲಿ ಇರುವ ಅಪ್ಪಟ ಆರ್ಯನ್ ಮನೋಸ್ಥಿತಿ.

ಕರ್ನಾಟಕದಲ್ಲೂ ಸ್ವಲ್ಪಮಟ್ಟಿಗೆ ಇಂತಹ ಪ್ರಾದೇಶಿಕ ಪೂರ್ವಾಗ್ರಹಗಳು ಇವೆ. ಹಳೆ ಮೈಸೂರು ಹಾಗೂ ಕರಾವಳಿಯವರಲ್ಲಿ ಉತ್ತರ ಕರ್ನಾಟಕದವರ ವಿರುದ್ಧ ಇಂತಹ ತಿರಸ್ಕಾರ ಭಾವನೆಗಳು ಮನೆ ಮಾಡಿವೆ. ಕೆಲ ದಿನಗಳ ಹಿಂದೆ ಸ್ವತಃ ಕರ್ನಾಟಕ ಸಿಐಡಿ ಇಲಾಖೆಯ ಸೈಬರ್ ಕ್ರೈಂ ವಿಭಾಗದ ಎಸ್‌ಪಿ ಅವರೇ ಪತ್ರಿಕಾಗೋಷ್ಠಿಯಲ್ಲಿ ಬಹಿರಂಗವಾಗಿ ಹೇಳಿದ್ದೇನೆಂದರೆ ಒಂದೂವರೆ ವರ್ಷಗಳ ಹಿಂದೆ ಕರ್ನಾಟಕದಿಂದ ಈಶಾನ್ಯ ಭಾರತೀಯರು ಗುಳೇ ಹೋಗಲು ಕಾರಣವಾದ ಮೊಬೈಲ್ ಫೋನ್ ಮೂಲಕ ಹರಡಲಾದ ಭಯೋತ್ಪಾದಕ ಸಂದೇಶಗಳ ಮೂಲವನ್ನು ಇನ್ನೂ ಹುಡುಕಲು ಸಾಧ್ಯವಾಗದಿರುವುದಕ್ಕೆ ಪ್ರಮುಖ ಕಾರಣ ಎಲ್ಲಾ ಈಶಾನ್ಯ ಭಾರತೀಯರು ಒಂದೇ ತೆರನಾಗಿ ಕಾಣುತ್ತಿರುವುದಂತೆ. ನಮ್ಮ ಸೈಬರ್ ಕ್ರೈಮ್ ಅಧಿಕಾರಿಗಳೂ ದಿಲ್ಲಿಯ ಸಾಮಾನ್ಯ ಜನರಷ್ಟೇ ಜನಾಂಗ ಪೂರ್ವಾಗ್ರಹ ಹೊಂದಿರುವಂತೆ ಕಾಣುತ್ತಿದೆ ಅಲ್ಲವೇ!

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಮತ್ತೆ ಹೊರಟ ಘಾಟಿ ಮುದುಕ?



ಬಿಜೆಪಿಯ ಆಜೀವ ಕಾರ್ಯಕರ್ತ ಹಾಗು ಪಾರ್ಟ್ ಟೈಮ್ ಸ್ವಾಮಿ ಎಂಭತ್ತರ ಪೇಜಾವರ ಸ್ವಾಮಿ ಕರಾವಳಿಯ ಬೂದಿ ಮುಚ್ಚಿದ ಕೆಂಡಕ್ಕೆ ತಿದಿಯೂದಿ ಬೆಂಕಿ ಹಚ್ಚಲು ಮತ್ತೆ ಹೊರಟುನಿಂತಿದ್ದಾರೆ. ತನ್ನ ಕೃಪಾಪೋಷಿತ ಪಕ್ಷ ತನ್ನ ಪರಿಸರದಲ್ಲಿ ಕಳೆದ ಚುನಾವಣೆಯಲ್ಲಿ ಭಾರೀ ಲುಕ್ಸಾನು ಅನುಭವಿಸಿದ್ದನ್ನು ಕಂಡು ಕೊರಗಿದ ಈ ಘಾಟಿ ಮುದುಕ ಸದ್ಯದಲ್ಲೇ ಎದುರಾಗುವ ಎಲೆಕ್ಷನ್ನಿನ ಮೇಲೆ ಕಣ್ಣಿಟ್ಟು ಈ ಬಾರಿ ಸೇಡು ತೀರಿಸಿಕೊಳ್ಳಲು ಮತ್ತೆ ಎದ್ದು ನಿಂತಿದ್ದಾರೆ.

ಮೊನ್ನೆ ಮೊನ್ನೆವರೆಗೂ ಕರಾವಳಿ ಜಿಲ್ಲೆಯಲ್ಲಿ ಸೌಜನ್ಯಾ ಪರ ಚಳವಳಿ ಭಾರೀ ದೊಡ್ಡ ಮಟ್ಟದಲ್ಲಿ ನಡೆದಿತ್ತು. ತನ್ನ ಕಾಲ ಬುಡದಲ್ಲೇ ನಡೆದ ಈ ಹೋರಾಟ ಕಂಡೂ ಕಾಣದಂತೆ ಸುಮ್ಮನಿದ್ದು ಭಾರೀ ದಪ್ಪದ ರಗ್ಗನ್ನು ಹೊದ್ದು ಮಲಗಿದ್ದ ಪೇಜಾವರರಿಗೆ ಈಗ ಉಳ್ಳಾಲದಲ್ಲಿ ನಡೆದ ಗಲಾಟೆ ಮಾತ್ರ ರೋಷವುಕ್ಕಿಸಿದೆಯಂತೆ. ಮಾಮೂಲಿನಂತೆ ತಾನು ಯಾವ ಧರ್ಮದ ಹಾಗು ಯಾವ ಪಕ್ಷದ ಪರವೂ ಇಲ್ಲ ಎಂಬ ಹಳಸಲು ಮಾತನ್ನೇ ಆಡುತ್ತಾ ಒಂದೆರಡು ಬಾರಿ ಉಳ್ಳಾಲಕ್ಕೆ ಹೋಗಿ ಪೊಲೀಸರಿಂದ ತಡೆಯಿಸಿಕೊಂಡು ಬಂದಿದ್ದಾರೆ. ಈಗ ಕರಾವಳಿಯ ಎಲ್ಲಾ ಸ್ವಾಮಿಗಳನ್ನು ಸೇರಿಸಿ ಬರುತ್ತೇನೆ ಎಂದು ಗುಟುರು ಹಾಕಿ ಹೋಗಿದ್ದಾರೆ ಈ ಮುದಿ ಬೆಂಕಿ

ಸಂದರ್ಶನ

'ಕತೆಗೆ ಛಾಯಾಗ್ರಹಣ ಹೊಂದಬೇಕು': ನಾಗಾರ್ಜುನ್

'ಏಕಮೇವ' ಚಿತ್ರದ ಮೂಲಕ ಸ್ವತಂತ್ರ ಛಾಯಾಗ್ರಾಹಕರಾಗಿ, ಇದೀಗ 'ಶ್ವೇತ' ಹಾಗೂ 'ಪ್ರೇಮ ಪಲ್ಲಕ್ಕಿ' ಚಿತ್ರಗಳಲ್ಲಿ ಬ್ಯುಸಿಯಾಗಿರುವ ಪ್ರತಿಭಾವಂತ ಛಾಯಾಗ್ರಾಹಕ ನಾಗಾರ್ಜುನ್ ಇಲ್ಲಿ ಮಾತಾಡಿದ್ದಾರೆ.



ನಿಮ್ಮ ಜನ್ಮಸ್ಥಳ, ಕುಟುಂಬ, ಶಿಕ್ಷಣ ಕುರಿತು ಹೇಳ್ತೀರಾ?

ನಾನು ಹುಟ್ಟಿದ್ದು, ಬೆಳೆದಿದ್ದು ಎಲ್ಲಾ ಬೆಂಗಳೂರಿನಲ್ಲೇ. ಅಪ್ಪ ಸಿವಿಲ್ ಕಂಟ್ರಾಕ್ಟರ್ ಆಗಿದ್ರು. ಅಮ್ಮ ಗೃಹಿಣಿ. ನನಗೆ ಮದುವೆಯಾಗಿ ಆರು ವರ್ಷದ ಒಬ್ಬ ಮಗನಿದ್ದಾನೆ. ಓದಿದ್ದು ಎಂ.ಎ.

ನಿಮಗೆ ಛಾಯಾಗ್ರಹಣದ ಕಡೆ ಆಸಕ್ತಿ ಬರಲು ಸ್ಫೂರ್ತಿಯೇನು?

ನನಗೆ ಮೊದಲಿನಿಂದಲೂ ಫೋಟೋಗ್ರಫಿ ಬಗ್ಗೆ ತೀವ್ರವಾದ ಕುತೂಹಲ ಮತ್ತು ಆಸಕ್ತಿ ಇತ್ತು. ಅದರಲ್ಲೂ ಪಿ.ಸಿ.ಶ್ರೀರಾಮ್ ಅವರ ಕ್ಯಾಮೆರಾ ವರ್ಕ್ ನಿಜಕ್ಕೂ ನನ್ನೊಳಗೆ ಆರಂಭದಿಂದಲೂ ಬೆರಗು ಮೂಡಿಸಿತ್ತು. ಆದರೆ, ಅವರ ಜೊತೆ ಕೆಲಸ ಮಾಡುವ ಅವಕಾಶ ನನಗೆ ಸಿಗಲಿಲ್ಲ. ಹಾಗೇನೆ, ಸುಂದರನಾಥ್ ಸುವರ್ಣ ಅವರ ಛಾಯಾಗ್ರಹಣ ನನ್ನ ಮೇಲೆ ಭಾರೀ ಪ್ರಭಾವ ಬೀರಿತ್ತು ಅಂತಲೇ ಹೇಳುತ್ತೇನೆ. ಅವರ ಛಾಯಾಗ್ರಹಣದಲ್ಲಿ ಮೂಡಿಬಂದಂಥ 'ನಮ್ಮೂರ ಮಂದಾರ ಹೂವೇ', 'ರಾಜಕೀಯ', 'ಗೋಲಿಬಾರ್', 'ಅನುರಾಗ ಸಂಗಮ', 'ಲಾಕಪ್ ಡೆತ್' ಸೇರಿದಂತೆ ಅನೇಕ ಚಿತ್ರಗಳು ನನ್ನನ್ನು ಆಕರ್ಷಿಸಿದವು. ಹೇಗಾದರೂ ಮಾಡಿ ಸುವರ್ಣ ಸಾರ್ ಜೊತೆ ಕೆಲಸ ಮಾಡಬೇಕು, ನಾನೂ ಕೂಡ ಅವರಂತೆ ಕನ್ನಡ ಚಿತ್ರರಂಗದಲ್ಲಿ ಒಬ್ಬ ಪ್ರತಿಭಾವಂತ ಕ್ಯಾಮೆರಾಮ್ಯಾನ್ ಅನ್ನಿಸಿಕೊಳ್ಳಬೇಕು ಅನ್ನುವಂಥ ಬಯಕೆ ನನ್ನಲ್ಲಿ ಮೂಡಲಾರಂಭಿಸಿದ್ದವು. ಕಡೆಗೊಂದು ದಿನ ನನ್ನ ಬಯಕೆ ಈಡೇರಿ ಅವರ ಜೊತೆ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಬದುಕಿಗೇ ತಿರುವು ನೀಡಿತೆನ್ನಬಹುದು.

ಸುಂದರನಾಥ್ ಸುವರ್ಣರ ಪರಿಚಯ ಹೇಗಾಗಿದ್ದು? ಅವರ ಜೊತೆ ಯಾವ್ಯಾವ ಸಿನಿಮಾಗಳಿಗೆ ಕೆಲಸ ಮಾಡಿದ್ದೀರಿ?

ಸುವರ್ಣ ಸಾರ್ ಪರಿಚಯವಾಗಿದ್ದು ಆಕಸ್ಮಿಕ ಎನ್ನಬಹುದು. ಹೇಗೆಂದರೆ, ನಾನು ಮತ್ತು ನನ್ನ ಕೆಲವು ಗೆಳೆಯರು ಆಗಾಗ ಗಾಂಧಿಬಜಾರಿನಲ್ಲಿ ಸೇರ್ತಾ ಇದ್ವಿ. ನನ್ನ ಕೆಲವು ಗೆಳೆಯರಿಗೆ ಪರಿಚಯವಿದ್ದುದರಿಂದ ಅವರ ಮೂಲಕ ಸುವರ್ಣ ಸರ್ ಅವರನ್ನು ಭೇಟಿಯಾಗುವ ಅವಕಾಶ ಒದಗಿ ಬಂದು, ನಾನೂ ಕೂಡ ಕ್ಯಾಮೆರಾಮ್ಯಾನ್ ಆಗಬೇಕೆಂಬ ತುಡಿತವನ್ನು ಅವರೆದುರು ಹೇಳಿಕೊಳ್ಳಲು ದಾರಿಯಾಯಿತು. 'ಅದಕ್ಕೇನಂತೆ, ಬಾ ನನ್ ಜೊತೆ ಕೆಲಸ ಮಾಡು' ಅಂತ ಪ್ರೋತ್ಸಾಹಿಸಿ ನನ್ನನ್ನು ತಮ್ಮ ಅಸಿಸ್ಟೆಂಟ್ ಕ್ಯಾಮೆರಾಮನ್ ಆಗಿ ಸೇರಿಸಿಕೊಂಡರು. ಅಲ್ಲಿಂದಾಚೆಗೆ, ಅವರ ಜೊತೆ, ಅಸಿಸ್ಟೆಂಟ್ ಕ್ಯಾಮೆರಾಮ್ಯಾನ್ ಆಗಿ, ಆನಂತರದ ದಿನಗಳಲ್ಲಿ ಅಸೋಸಿಯೇಟ್ ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಿದೆ. ಅವರ ಜೊತೆ ನಾನು ಕೆಲಸ ಮಾಡಿದ ಚಿತ್ರಗಳು 'ಹ್ಯಾಟ್ಸ್ ಆಫ್ ಇಂಡಿಯ', 'ಸುಲ್ತಾನ್', 'ಕಿಚ್ಚ', 'ಲಂಕೇಶ್ ಪತ್ರಿಕೆ', 'ಧರ್ಮ', 'ತಮಸ್ಸು', 'ಅಶೋಕ', 'ಗಂಡನ ಮನೆ', 'ಶ್ರೀ ಮಂಜುನಾಥ', 'ಚೆಲ್ಲಾಟ', 'ಗಂಡುಗಲಿ ಕುಮಾರ ರಾಮ', 'ದಾಸ', 'ಸರ್ದಾರ' ಒಳಗೊಂಡಂತೆ ಅನೇಕ ಚಿತ್ರಗಳು. ಹಾಗೇನೆ, ಎಸ್.ರಾಮಚಂದ್ರ ಅವರ ಜೊತೆ 'ದಾಟು' ಚಿತ್ರಕ್ಕೆ ಕೆಲಸ ಮಾಡಿದ್ದೇನೆ.

ನೀವು ಸ್ವತಂತ್ರ ಛಾಯಾಗ್ರಾಹಕರಾಗಿ ಕೆಲಸ ಮಾಡಿದ ಸಿನಿಮಾ ಯಾವುದು? ಆ ಅನುಭವ ಹೇಗಿತ್ತು?

'ಏಕಮೇವ' ಸ್ವತಂತ್ರ ಕ್ಯಾಮೆರಾಮ್ಯಾನ್ ಆಗಿ ನನಗೆ ಮೊದಲ ಚಿತ್ರ. ಆ ಚಿತ್ರದ್ದು ಒಳ್ಳೆಯ ಅನುಭವ. ಅಸಿಸ್ಟೆಂಟ್, ಅಸೋಸಿಯೇಟ್ ಆಗಿ ಕೆಲಸ ಮಾಡಿದಂಥ ಒಬ್ಬ ಉತ್ಸಾಹಿ, ತಾನು ಸ್ವತಂತ್ರವಾಗಿ ಕ್ಯಾಮೆರಾ ಕೆಲಸ ನಿಭಾಯಿಸಬೇಕಾಗಿ ಬಂದಾಗ ನಿಜಕ್ಕೂ ಸವಾಲುಗಳಿರುತ್ತವೆ. ಕಥೆ, ನಿರ್ದೇಶಕರ ಟೇಸ್ಟ್ ಅರ್ಥಮಾಡಿಕೊಂಡು ಆದಷ್ಟು ಹೊಸ ರೀತಿಯ ಲೈಟಿಂಗ್, ಹೊಸ ರೀತಿಯ ಶಾಟ್‌ಗಳನ್ನು ಇಡುವ ಮೂಲಕ ತನ್ನೊಳಗಿನ ಕ್ರಿಯೇಟಿವಿಟಿಯನ್ನು ತೀರಾ ಅತಿಯೆನಿಸದಂತೆಯೂ, ತೀರಾ ಕೊರತೆಯೆನಿಸದಂತೆಯೂ ಹೊರಹಾಕಬೇಕಾಗುತ್ತೆ. ನನಗಂತೂ 'ಏಕಮೇವ' ಚಿತ್ರದ ಅನುಭವ ಸದಾ ನೆನಪಿನಲ್ಲಿರುವಂಥದ್ದೇ. ಆ ಚಿತ್ರಕ್ಕೆ 'ಅತ್ಯುತ್ತಮ ಕಥೆ' ಹಾಗೂ ಆ ಚಿತ್ರದಲ್ಲಿ ನಟಿಸಿದ್ದ ಚಿರಂಜೀವಿ ಎನ್ನುವ ಹುಡುಗನಿಗೆ 'ಅತ್ಯುತ್ತಮ ಬಾಲ ನಟ' ರಾಜ್ಯ ಪ್ರಶಸ್ತಿಗಳು ಬರುವುದರ ಜೊತೆಗೆ, ಮೆಕ್ಸಿಕೋ ಫಿಲಂ ಫೆಸ್ಟಿವಲ್‌ನಲ್ಲಿ 'ಏಕಮೇವ' ಚಿತ್ರವೂ ಪ್ರದರ್ಶನ ಕಂಡು ಅತ್ಯುತ್ತಮ ಛಾಯಾಗ್ರಹಣಕ್ಕೆ 'ಸಿಲ್ವರ್ ಫಾಮ್ ಅವಾರ್ಡ್' ಬಂದಿರುತ್ತದೆ.



ನೀವು 'ಏಕಮೇವ' ನಂತರ 'ಪ್ರೇಮ ಪಲ್ಲಕ್ಕಿ' ಎನ್ನುವ ಸಿನಿಮಾಗೂ ಕ್ಯಾಮೆರಾಮ್ಯಾನ್ ಆಗಿ ಕೆಲಸ ಮಾಡಿದ್ದೀರಿ ಅಂತ ಪತ್ರಿಕೆಗಳಲ್ಲಿ ಓದಿದ್ದೇನೆ. 'ಪ್ರೇಮ ಪಲ್ಲಕ್ಕಿ' ಚಿತ್ರದ ನಿಮ್ಮ ಕಾರ್ಯವೈಖರಿಯ ಬಗ್ಗೆ ಹೇಳ್ತೀರಾ?

'ಪ್ರೇಮ ಪಲ್ಲಕ್ಕಿ' ಚಿತ್ರದ ಅನುಭವವೂ ವಿಭಿನ್ನವಾದುದೇ. ಅದೊಂದು ನೈಜ ಘಟನೆಯನ್ನಾಧರಿಸಿದ ಚಿತ್ರ. ಪ್ರೀತಿ ಹಾಗೂ ಮಾರ್ಷಲ್ ಆರ್ಟ್ ಈ ಚಿತ್ರದಲ್ಲಿನ ವಿಶೇಷಗಳು ಆದ್ದರಿಂದ, ಸಾಧ್ಯವಾದಷ್ಟು ನಿಜವಾಗಿಯೇ ಚಿತ್ರೀಕರಿಸಲು ಪ್ರಯತ್ನಿಸಿದ್ದೇನೆ. ಕಾಲ್ಪನಿಕ ಕಥೆಗಳನ್ನಾಧರಿಸಿದ ಚಿತ್ರಗಳಿಗೆ ಕ್ಯಾಮೆರಾ ಹಿಡಿಯುವುದಕ್ಕೂ, ನೈಜ ಘಟನೆಗಳನ್ನಾಧರಿಸಿದ ಚಿತ್ರಗಳಿಗೆ ಕ್ಯಾಮೆರಾ ಹಿಡಿಯುವುದಕ್ಕೂ ಬೇರೆ ಬೇರೆ ತೆರನಾದ ತಯಾರಿ ಬೇಕಾಗುತ್ತದೆ. ಆ ನಿಟ್ಟಿನಲ್ಲಿ 'ಪ್ರೇಮ ಪಲ್ಲಕ್ಕಿ' ಚಿತ್ರ ಕುರಿತಂತೆ ನನಗೆ ವರ್ಕ್ ತೃಪ್ತಿಯಂತೂ ನೀಡಿದೆ. ಬಿ.ಸುರೇಶ ಅವರ ಜೊತೆ ಕೆಲಸ ಮಾಡಿದ ಅನುಭವವಿರುವಂಥ ಸುಧಾಕರ್ ಶೆಟ್ಟಿ ಎನ್ನುವವರು ಈ ಚಿತ್ರದ ನಿರ್ದೇಶಕರು. ನಿಜಕ್ಕೂ ಅವರೊಂದಿಗೆ ಕೆಲಸ ಮಾಡುವಾಗಿನ ಅನುಭವ ಖುಷಿ ಕೊಡುತ್ತೆ. ಪ್ರತೀ ದೃಶ್ಯಗಳು ಸಾಧ್ಯವಾದಷ್ಟು ನೈಜವಾಗಿಯೇ ಮೂಡಿಬರಲು ಶಕ್ತಿ ಮೀರಿ ಶ್ರಮಿಸುತ್ತಿದ್ದೆವು. ಉದಾಹರಣೆಗೆ ಕೆಲವು ಸಂದರ್ಭಗಳಲ್ಲಿ ಕ್ರೇನ್ ಬಳಸಬಹುದಾದ ಕಡೆ ಮರದ ಮೇಲೋ, ಬಸ್ ಮೇಲೋ ಕೂತು ಶಾಟ್ ತೆಗೆದಿದ್ದುಂಟು. ಹಾಗೇನೆ. ಎಷ್ಟೋ ಕಡೆ ಕೈಯಲ್ಲೇ ಕ್ಯಾಮೆರಾ ಹಿಡಕೊಂಡು ಶೂಟ್ ಮಾಡಿದ್ದುಂಟು.

ನೀವು ಈಗಷ್ಟೇ 'ಶ್ವೇತ' ಎನ್ನುವ ಕುತೂಹಲಕಾರಿ ಚಿತ್ರವೊಂದರಲ್ಲಿ ಬ್ಯುಸಿ ಇದ್ದೀರಿ. ಆ ಚಿತ್ರದ ಅನುಭವ ಹೇಗಿದೆ?

'ಶ್ವೇತ' ಚಿತ್ರವು ಖಂಡಿತವಾಗಿ ನನ್ನ ವೃತ್ತಿ ಬದುಕಿಗೇ ಹೊಸ ತಿರುವು ನೀಡಬಲ್ಲದು ಎಂದು ನಂಬಿದ್ದೇನೆ. ಬೇಸಿಕಲಿ 'ಶ್ವೇತ' ಒಂದು ಕುತೂಹಲ ಕೆರಳಿಸುವ, ಹೊಸ ಮಾದರಿಯ ಕಥಾವಸ್ತುವುಳ್ಳ ಹಾರರ್ ಸಿನಿಮಾ. ಈ ಸಿನಿಮಾದಲ್ಲಿ ನನ್ನೊಳಗಿನ ಪ್ರತಿಭೆಯನ್ನು ಹೊರಹಾಕಲು ಉತ್ತಮ ಅವಕಾಶವಿದೆ. ಲಭ್ಯವಿರುವ ಎಕ್ವಿಪ್ಮೆಂಟ್‌ಗಳನ್ನೇ ಸಮರ್ಪಕವಾಗಿ ಬಳಸಿಕೊಂಡು, ಲೈಟಿಂಗ್‌ನಲ್ಲಿ ಆಟವಾಡಿ, ಕಥೆಯನ್ನು ವಿಭಿನ್ನ ರೀತಿಯಲ್ಲಿ ತೆರೆಯ ಮೇಲೆ ಮೂಡಿಸಲು ಇಲ್ಲಿ ಸಾಧ್ಯ. ನಿರ್ದೇಶಕ ರಾಜೇಶ್ ಬಲಿಪ ಅವರೊಂದಿಗೆ ಕೆಲಸ ಮಾಡುವಾಗಿನ ಅನುಭವ ನಿಜಕ್ಕೂ ಖುಷಿ ಕೊಡುತ್ತದೆ. ನನ್ನ ಪ್ರಯೋಗಶೀಲತೆಗೆ ನಿರ್ದೇಶಕರ ಸಂಪೂರ್ಣ ಸಹಕಾರ, ಸ್ವತಂತ್ರ ಸಿಕ್ಕಿದೆ. ಈ ಚಿತ್ರದ ಇನ್ನೊಂದು ವಿಶೇಷತೆಯೆಂದರೆ 'ಮ್ಯಾನ್ ಲಿಯೋ ಕ್ರಿಯೇಷನ್ಸ್'ನ ಪ್ರಣವ್ ಎನ್ನುವವರ ಗ್ರಾಫಿಕ್ ವರ್ಕ್ ಚಿತ್ರಕ್ಕೆ ಹೊಸ ಬಗೆಯ ಸ್ವರೂಪ ನೀಡುವಲ್ಲಿ ಸಹಕರಿಸುತ್ತಿದೆ. ಹಾಗಾಗಿ, ಲೈಟಿಂಗ್ ಮಾಡುವುದರಿಂದ ಹಿಡಿದು, ಆಂಗಲ್ಸ್ ಫಿಕ್ಸ್ ಮಾಡುವುದರಿಂದ ಹಿಡಿದು, ಒಂದೊಂದು ಶಾಟ್ ಬಗ್ಗೆಯೂ ತೀರಾ ನಿಗಾ ವಹಿಸಿ ಕೆಲಸ ಮಾಡುತ್ತಿದ್ದೇನೆ. ಒಂದೇ ಮಾತಲ್ಲಿ ಹೇಳುವುದಾದರೆ 'ಶ್ವೇತ' ಚಿತ್ರದಲ್ಲಿನ ನನ್ನ ಕೆಲಸ ದಿನೇದಿನೇ ನನ್ನ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸುತ್ತಿದೆ ಎಂದೇ ಹೆಮ್ಮೆಯಿಂದ ಹೇಳಬಯಸುತ್ತೇನೆ.

ಭಾರತ ದೇಶದಲ್ಲೇ ನಿಮ್ಮ ಮೆಚ್ಚಿನ ಛಾಯಾಗ್ರಾಹಕರು ಯಾರ್‍ಯಾರು? ಅವರಿಂದ ನೀವು ಗ್ರಹಿಸಿದ್ದೇನು? ಕಲಿತಿದ್ದೇನು?

ವಿ.ಕೆ. ಮೂರ್ತಿ, ಸುಂದರನಾಥ್ ಸುವರ್ಣ, ಪಿ.ಸಿ.ಶ್ರೀರಾಮ್, ಕಬೀರ್ ಲಾಲ್, ಸಂತೋಷ್ ಶಿವನ್, ಛೋಟ ಕೆ ನಾಯ್ಡು, ಸಮೀರ್ ರೆಡ್ಡಿ, ರತ್ನವೇಲು ಇಷ್ಟವಾಗುತ್ತಾರೆ. ಇಲ್ಲಿ ವಿಶೇಷವಾಗಿ ಇಷ್ಟವಾಗುವವರೆಂದರೆ ವಿ.ಕೆ.ಮೂರ್ತಿಯವರು. ಬ್ಲಾಕ್ ಅಂಡ್ ವೈಟ್ ಚಿತ್ರಗಳ ಕಾಲದಲ್ಲೇ ಅನೇಕ ಪ್ರಯೋಗಗಳನ್ನು ಮಾಡಿದಂಥ ಪ್ರಬುದ್ಧ ತಂತ್ರಜ್ಞ ಅವರು. ದೇಶದಲ್ಲೇ ಮೊದಲಬಾರಿಗೆ ಕೋಲು ಬೆಳಕು (ಸೋರ್ಸ್ ಲೈಟ್), ಹೆಲಿಕಾಪ್ಟರ್ ಶಾಟ್, ಬೌನ್ಸಿಂಗ್ ಲೈಟ್, ಮಿರರ್ ಮೂಲಕ ಸೂರ್ಯನ ಕಿರಣಗಳನ್ನು ರಿಫ್ಲೆಕ್ಟ್ ಮಾಡಿ ಕಲಾವಿದರ ಮೇಲೆ ಬೀಳುವಂತ ಮಾಡುವ ತಂತ್ರಜ್ಞಾನಗಳನ್ನು ತಂದಂಥ ಖ್ಯಾತಿಗೆ ಒಳಗಾಗುತ್ತಾರೆ. ಸುಂದರನಾಥ ಸುವರ್ಣ ಅವರು ನನಗೆ ನೇರ ಗುರುಗಳಾದರೆ, ವಿ.ಕೆ.ಮೂರ್ತಿಯವರು ನನ್ನ ಮಾನಸ ಗುರು. ಅದೇ ರೀತಿ, ಪಿ.ಸಿ.ಶ್ರೀರಾಮ್ ಅವರು ಟೆಲಿಶಾಟ್‌ಗಳನ್ನು ಕಂಪೋಸ್ ಮಾಡುವುದರಲ್ಲಿ ಹಾಗೂ ಮಾಸ್ಕಿಂಗ್ ವರ್ಕ್‌ನಲ್ಲಿ ನಿಸ್ಸೀಮರು. ಇನ್ನು ಕನ್ನಡದ ವಿಷಯಕ್ಕೆ ಬಂದರೆ ಅನೇಕ ಅತಿರಥ-ಮಹಾರಥ ಕ್ಯಾಮೆರಾಮ್ಯಾನ್‌ಗಳು ತಮ್ಮ ಅಮೋಘವಾದ ಪ್ರತಿಭೆಯನ್ನು ತೋರಿಸಿದ್ದಾರೆ. ಅವರೆಲ್ಲರ ಕ್ಯಾಮೆರಾ ವರ್ಕ್ ನನ್ನಂಥವರಿಗೆ ಯಾವತ್ತಿಗೂ ಕಲಿಕೆಗೆ ಸಹಕರಿಸುತ್ತದೆ. ಬಾಲ್ಯದಿಂದ ಅವರುಗಳು ಮಾಡಿರುವ ಕನ್ನಡ ಸಿನಿಮಾಗಳನ್ನೇ ನೋಡಿಕೊಂಡು ಬೆಳೆದವನಾದ್ದರಿಂದ ಅವರೆಲ್ಲರ ಪ್ರಭಾವ ಒಂದಲ್ಲ ಒಂದು ರೀತಿಯಲ್ಲಿ ನನ್ನ ಮೇಲೆ ಬಿದ್ದೇ ಇರುತ್ತದೆ. ಅವರುಗಳ ಪೈಕಿ ಮುಖ್ಯವಾಗಿ ನನ್ನನ್ನು ಆಕರ್ಷಿಸಿದ ಕನ್ನಡದ ಕ್ಯಾಮೆರಾಮ್ಯಾನ್‌ಗಳೆಂದರೆ ಬಿ.ಸಿ.ಗೌರಿಶಂಕರ್, ಸೀತಾರಾಂ, ಎಚ್.ಸಿ.ವೇಣು, ಜೆ.ಜೆ.ಕೃಷ್ಣ ಕೃಷ್ಣ ಕುಮಾರ್ ಮತ್ತು ರಮೇಶ್ ಬಾಬು. ಹಾಗೇನೆ, ಇವತ್ತಿನ ಜಮಾನಕ್ಕೆ ಹೊಸ ಬಗೆಯ ತಂತ್ರಜ್ಞಾನವನ್ನು ಬಳಸಿಕೊಂಡು ಅದ್ಭುತ ಕ್ಯಾಮೆರಾ ವರ್ಕ್ ನೀಡುತ್ತಿರುವ ಎಸ್.ಕೃಷ್ಣ, ಸತ್ಯ ಹೆಗಡೆ, ಶೇಖರ್ ಚಂದ್ರ, ಎಸ್.ಎಚ್.ರಮೇಶ್, ಕೆ.ಎಸ್. ಚಂದ್ರಶೇಖರ್ ಅವರ ಕೆಲಸಗಳಿಂದಲೂ ಸಾಕಷ್ಟು ಕಲಿತಿದ್ದೇನೆ.

ಕೊನೆಯದಾಗಿ ಏನನ್ನು ಹೇಳಲು ಬಯಸುತ್ತೀರಿ?

ನನ್ನ ಒಂದೇ ಒಂದು ಆಸೆಯೆಂದರೆ, ಹಾಲಿವುಡ್‌ನ ಪ್ರಸಿದ್ಧ ಕ್ಯಾಮೆರಾಮ್ಯಾನ್‌ಗಳು ನಮ್ಮ ದೇಶದ ಕ್ಯಾಮೆರಾಮ್ಯಾನ್‌ಗಳ ಕಡೆ ತಿರುಗಿ ನೋಡುವಂತಾಗಬೇಕು. ಅಷ್ಟು ಪರಿಪಕ್ವವಾದ, ಅಡ್ವಾನ್ಸ್ಡ್ ಟೆಕ್ನಾಲಜಿ ಬಳಸಿಕೊಂಡು ನಾವು ಕೆಲಸ ಮಾಡುವಂತಾಗಬೇಕು. ನಮ್ಮಲ್ಲಿ ನಿಜಕ್ಕೂ ಅಂತಹ ಪ್ರತಿಭಾವಂತರು ಇದ್ದಾರೆ. ಇಂದಲ್ಲ ನಾಳೆ, ನಮ್ಮ ದೇಶದ ಕ್ಯಾಮೆರಾಮ್ಯಾನ್‌ಗಳು ವಿಶ್ವದ ಗಮನ ಸೆಳೆಯುತ್ತಾರೆ ಎಂಬ ಭರವಸೆ ಹೊಂದಿದ್ದೇನೆ. ಇನ್ನೊಂದು ಮಾತು ಏನೆಂದರೆ, ಮೊದಲಿಗೆ ನೆಗೆಟಿವ್ ಕ್ಯಾಮೆರಾಗಳನ್ನು ಬಳಸಿ ಕೆಲಸ ಮಾಡುವುದರ ಬಗ್ಗೆ ಅಧ್ಯಯನಿಸುತ್ತಿದ್ದೆ. ಈಗ ನೆಗೆಟಿವ್ ಕ್ಯಾಮೆರಾಗಳ ಜೊತೆಗೆ ಡಿಜಿಟಲ್ ಕ್ಯಾಮೆರಾ ಬಳಸಿಯೂ ಕೆಲಸ ಮಾಡುವತ್ತ ಅಪ್ ಡೇಟ್ ಆಗುತ್ತಿದ್ದೇನೆ. ಆ ನಿಟ್ಟಿನಲ್ಲಿ, ರೆಡ್-ಎಂ.ಎಕ್ಸ್ ಹಾಗೂ ರೆಡ್ -ಎಪಿಕ್ ಎಂಬ ಎರಡು ಕ್ಯಾಮೆರಾಗಳನ್ನು ನಾನೇ ಖರೀದಿಸಿ ಇಟ್ಟುಕೊಂಡಿದ್ದೇನೆ.

ಹಾಗೇನೆ, ಎಲ್ಲಕ್ಕಿಂತ ಮುಖ್ಯವಾಗಿ ಕಥೆಗೆ ನಿಷ್ಠನಾಗಿ ಸಾಧ್ಯವಾದಷ್ಟು ಹೊಸ ಬಗೆಯ ತಂತ್ರಜ್ಞಾನ ಬಳಸಿ ಕ್ಯಾಮೆರಾ ವರ್ಕ್ ಮಾಡಬಯಸುತ್ತೇನೆ.



ಸಂದರ್ಶನ: ಹೃದಯಶಿವ

...ಬಾಬ. ಉಳ್ಳಾಲ ಪ್ರಕರಣ, ತೊಕ್ಕೊಟ್ಟಿನ ಬ್ಲೂಫಿಲಮ್ ಪ್ರಕರಣ ಮುಂತಾದ್ದಕ್ಕೆಲ್ಲ ಮರುಜೀವ ಕೊಟ್ಟು ಬಿಜೆಪಿಗೆ ಲಾಭ ಮಾಡಿಕೊಡುವ ಹುನ್ನಾರ ಪೇಜಾವರರದ್ದು. ಉಳ್ಳಾಲಕ್ಕೆ ಹೋಗುವ ಮೊದಲು ಕರಾವಳಿಯ ಕೇಮಾರು ಸ್ವಾಮಿಯಂತಹವರು ಮುಂಚೂಣಿಯಲ್ಲಿದ್ದ ಸೌಜನ್ಯ ಕೇಸಿನ ಬಗ್ಗೆ ಪೇಜಾವರರು ಮಾತನಾಡಲಿ.

- ಅವಿನಾಶ್ ಎಂ.ಎಸ್, ನೆಲ್ಲಿಕಾರು



'ಪುಟ್ಟರಂಗಮ್ಮ ಎಂಬ ಅಮ್ಮನ ನೆನಪಿನಲ್ಲಿ' ಬಾನು ಮುಷ್ತಾಕ್ ಅವರು ಬರೆದ ಲೇಖನ ತುಂಬಾ ಚೆನ್ನಾಗಿತ್ತು. ಜನಪರ ಚಿಂತನೆಯ ಎಲೆಮರೆಕಾಯಿಯಾಗಿದ್ದ ರಂಗಮ್ಮನವರ ಬಗೆಗಿನ ಲೇಖನ ಮನ ಮುಟ್ಟುವಂತಿತ್ತು. ಹಾಗೇನೇ ಪ್ರೊ. ರವಿವರ್ಮ ಕುಮಾರ್ ಅವರು ...ಯಿಗೆ ತಕ್ಕ ಮಗನಾಗಿದ್ದಾರೆ.

ಇಂತಹ ಲೇಖನವನ್ನು ಪ್ರಕಟಿಸಿದ ಲಂಕೇಶ್ ಬಳಗಕ್ಕೆ ...ಧನ್ಯವಾದಗಳು.

ಬಳ್ಳಾರಿಯ ದಲಿತರ ಭೂಮಿ ಕಬ್ಜಾ ಮಾಡಿದ ...ಸೋಮಾಲೀಕರ ಬಗ್ಗೆ ಪ್ರಕಟವಾದ ಲೇಖನ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು 67 ವರ್ಷಗಳಾಗುತ್ತಿದ್ದರೂ ಕಾಯಿದೆ ...ಮತ್ತು ಕಾನೂನುಗಳು ಹಲ್ಲಿಲ್ಲದ ಹಾವಿನಂತಾಗಿವೆ ...ಎಂಬುದನ್ನು ತೋರಿಸುತ್ತದೆ. ಶೋಷಣೆ ನಿರಂತರವಾಗಿ ...ನಡೆಯುತ್ತಿರುವುದು ತುಂಬಾ ಅಪಾಯಕಾರಿಯಾಗಿದೆ. ಅದಕ್ಕೆ ...ಕಾರಣರಾದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ...ಜರುಗಿಸಬೇಕಿದೆ.

- ಭೀಮನಗೌಡ ಪರಗೊಂಡ, ಜೇವರ್ಗಿ

ದಲಿತರ ಭೂಮಿಯನ್ನು ಕಬ್ಜಾ ಮಾಡಿದ ...ಸೋಮಾಲೀಕರು ಲೇಖನವನ್ನು ಕುಮಾರ್ ಸಮತಳ ತುಂಬಾ ...ಚೆನ್ನಾಗಿ ಬರೆದಿದ್ದಾರೆ.

- ರಾಜಣ್ಣ ಡಿ, ಬದಕನಹಳ್ಳಿ



...ಕ್ರೌರ್ಯವನ್ನು ಎದುರಿಸಿ ಗೆಲ್ಲಲು ಬೇಕಾದ ಗಟ್ಟಿತನ ...ಅಲೋಕ್ ಮತ್ತು ಲಕ್ಷ್ಮಿ ಅವರ ಪ್ರೀತಿಯಿಂದ ...ಸಾಬೀತಾಗಿದೆ (ಬೆಂಕಿಯಲ್ಲಿ ಅರಳಿದ ಏಕ್ ಪ್ರೇಮ್ ...ಕಹಾನಿ). ಅವರ ಆಶಯಗಳು ಗೆಲ್ಲಲಿ. ಕೃತಕ ಬಂಧನದಲ್ಲಿ ...ಮಾದರಿ ಸಂಬಂಧ ಹುಡುಕುವ ಭ್ರಮೆ ನಮ್ಮ ...ಮನಸ್ಥಿತಿಯದು. ಅದು ವಿಶ್ವಾಸ ಮೂಡಿಸುವ ಬದಲು ...ತತ್ವವನ್ನು ಕೊಲ್ಲುತ್ತಾ ಸಾಗುತ್ತದೆ. ನಿರ್ಭಯರಾಗಿ ಬದುಕುವ ...ಮಗ ಅಲೋಕ್ ಮತ್ತು ಲಕ್ಷ್ಮಿ ಹೊಸ ಸಂಚಲನವಾಗಿದ್ದಾರೆ.

- ರವಿಕುಮಾರ್, ಹಾಸನ

ಸೂ: ನಿಮ್ಮ ಅನಿಸಿಕೆಗಳನ್ನು ...ankesh70@rediffmail.com ಗೆ ನುಡಿ ...ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಅನಿಸಿಕೆಗಳನ್ನು 9980331427 ನಂಬರ್‌ಗೂ ...ವಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday

ಇದೇ ಮೊದಲು ಇದೇ ಕೊನೆ



ಪುನೀತ್ ರಾಜಕುಮಾರ್ ಅಭಿನಯದ ಎರಡನೇ ಚಿತ್ರ 'ಅಭಿ' ಮೂಲಕ ಚಿತ್ರರಂಗ ಪ್ರವೇಶಿಸಿ ಕ್ರಮೇಣ ಕನ್ನಡದ ಪ್ರಮುಖ ನಟಿಯರ ಪೈಕಿ ಒಬ್ಬರಾದ ರಮ್ಯ ಅಲಿಯಾಸ್ ದಿವ್ಯ ಸ್ಪಂದನ ಯಾವತ್ತೋ ರಾಜ್ಯಪ್ರಶಸ್ತಿ ಪಡೆಯಬೇಕಿತ್ತು. ತಮ್ಮ ಮುಂಗೋಪ, ಮುಲಾಜಿಲ್ಲದ ಮಾತಿನ ಮೂಲಕ ಚಿತ್ರರಂಗದ ಮಂದಿಯ ಜೊತೆ ಆಗಾಗ ಒಂದಿಷ್ಟು ಕಿರಿಕ್ಕು ಮಾಡಿಕೊಂಡಿದ್ದ . ಬಿಟ್ಟರೆ ಪರ್ಫಾರ್ಮೆನ್ಸ್ ವಿಷಯದಲ್ಲಿ ರಮ್ಯ ಯಾವತ್ತೂ ಸೂಪರ್. ಹೆಚ್ಚು ಕಮ್ಮಿ ಈಕೆಯ ಜೊತೆಜೊತೆಗೇ ಅಥವಾ ತುಸು ಮುಂಚಿತವಾಗಿಯೇ ಚಿತ್ರರಂಗ ಪ್ರವೇಶಿಸಿದ ರಕ್ಷಿತಾ, ರಾಧಿಕಾ ಮದುವೆ, ಸಂಸಾರ ಅಂತ ಬ್ಯುಸಿಯಾಗತೊಡಗಿದ್ದರೂ ರಮ್ಯ ಮಾತ್ರ ಈಗಲೂ ಬೇಡಿಕೆಯನ್ನು ಹೊಂದಿರುವ ನಟಿ. ಈಗ ಅದರ ಜೊತೆ ಸಂಸದೆ ಕೂಡ.

ಇಂಥ ರಮ್ಯ ತಮ್ಮ ಇತ್ತೀಚಿನ ಚಿತ್ರವಾದ 'ಸಂಜು ವೆಡ್ಸ್ ಗೀತ'ದ ಅಭಿನಯಕ್ಕಾಗಿ ರಾಜ್ಯ ಪ್ರಶಸ್ತಿ ಪಡೆದಿದ್ದು ಒಂದು ಕಡೆ ಆಕೆಯ ಅಭಿಮಾನಿಗಳಿಗೆ ಖುಷಿ ಕೊಟ್ಟರೆ, ಮತ್ತೊಂದು ಕಡೆ 'ರಮ್ಯಾಗೆ ಈ ಪ್ರಶಸ್ತಿ ಬರಲು ಇಷ್ಟು ವರ್ಷ ಬೇಕಿತ್ತಾ?' ಎಂಬ ಅಚ್ಚರಿ ಉದ್ಗಾರಗಳೂ ಕೇಳಿಬರುತ್ತಿವೆ.

ಇಷ್ಟಕ್ಕೂ ತಮಗೆ ಒಲಿದ ಈ ಪ್ರಶಸ್ತಿಯ ಬಗ್ಗೆ ಮಾತಾಡುತ್ತ ರಮ್ಯ ಹೇಳಿದ್ದು ಇಷ್ಟು: "ನನಗೆ ರಾಜ್ಯಪ್ರಶಸ್ತಿ ಬಂದೇ ಬರುತ್ತದೆ ಅಂತ ಪ್ರತಿ ವರ್ಷ ನನ್ನ ಅಪ್ಪ ನಿರೀಕ್ಷೆಯಲ್ಲಿರುತ್ತಿದ್ದರು. 'ಅದು ಯಾವತ್ತಿಗೂ ಬರಲ್ಲ ಬಿಡಿ' ಅಂತ ನಾನು ಅವರಿಗೆ ಹೇಳ್ತಿದ್ದೆ. ಆದ್ದರೀಗ 'ಸಂಜು ವೆಡ್ಸ್ ಗೀತ' ಚಿತ್ರದ ನನ್ನ ಅಭಿನಯಕ್ಕೆ ಅವಾರ್ಡ್ ಬಂದಿದೆ. ದುರಂತವೆಂದರೆ, ನನ್ನ ಅಪ್ಪ ಈಗ ನನ್ನೊಂದಿಗಿಲ್ಲ. ಈ ಪ್ರಶಸ್ತಿಯನ್ನು ನನ್ನ ತಂದೆಗೆ ಅರ್ಪಿಸುತ್ತಿದ್ದೇನೆ. ಬಹುಶಃ ಇದೇ ನನ್ನ ಮೊದಲ ಹಾಗೂ ಕೊನೆಯ ರಾಜ್ಯಪ್ರಶಸ್ತಿಯಾಗುತ್ತೇನೋ ಗೊತ್ತಿಲ್ಲ."

ತಮಗೆ ಪ್ರಶಸ್ತಿ ತಡವಾಗಿ ಬಂದುದರ ಬಗ್ಗೆ ರಮ್ಯ ಅವರಿಗೆ ಎಷ್ಟು ಸಿಟ್ಟಿದೆ, ಬೇಸರವಿದೆ ಅನ್ನುವ ಅಂಶ ಈ ಮಾತಿನಲ್ಲೇ ಗೊತ್ತಾಗುತ್ತದೆ ಅಲ್ಲವೇ?

ಅಂದಹಾಗೆ, ರಮ್ಯ ಅತ್ತ ರಾಜಕೀಯದಲ್ಲೂ ಇತ್ತ ಚಿತ್ರಲೋಕದಲ್ಲೂ ಇದ್ದು ಇನ್ನಷ್ಟು ಪ್ರಶಸ್ತಿಗಳನ್ನು ಪಡೆಯಲಿ ಎಂಬುದು ನಮ್ಮ ಆಶಯ.


'ಅಂಬಾನಿ'ಗೆ ಜ್ಯೂರಿ ಅವಾರ್ಡ್

ಯಾವಾಗ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ಎಂಬ ಶಾರ್ಟ್ ಫಿಲಂ ಯೂ ಟ್ಯೂಬ್‌ನಲ್ಲಿ ಹಿಟ್ ಆಗಿ ಕಡೆಗೆ ಅದೇ ಶಾರ್ಟ್ ಫಿಲಂ ದೊಡ್ಡ ಪರದೆಯ ಮೇಲೆ ಸಿನಿಮಾ ಆಗಿ ಮೂಡಿಬಂದು ನೂರು ದಿನ ಓಡಿತೋ ಕನ್ನಡದಲ್ಲಿ ಶಾರ್ಟ್ ಫಿಲಂ ಮಾಡುವವರ ಸಂಖ್ಯೆಯೂ ಹೆಚ್ಚಾಗತೊಡಗಿತು. ಹಾಗೆ ಹುಟ್ಟಿಕೊಂಡ ಶಾರ್ಟ್ ಫಿಲಂ ಟ್ರೆಂಡ್‌ಗೆ ಸಾಕ್ಷಿಯಾಗಿ ತಯಾರಾದ ಚಿತ್ರಗಳ ಪೈಕಿ 'ಅಂಬಾನಿ' ಎಂಬ ಶಾರ್ಟ್ ಫಿಲಂ ಕೂಡ ಒಂದು. ಕಳೆದ ಜನವರಿ ತಿಂಗಳಿನಲ್ಲಿ ದಿನಾಂಕ 24ರಿಂದ 26ರ ವರೆಗೆ ಬೆಂಗಳೂರಿನಲ್ಲಿ ನಡೆದ 9ನೇ ಅಂತರರಾಷ್ಟ್ರೀಯ ಮಕ್ಕಳ ಚಿತ್ರೋತ್ಸವದಲ್ಲಿ ಈ ಚಿತ್ರವೂ ಭಾಗವಹಿಸಿತ್ತು. ಜಗತ್ತಿನ 44 ದೇಶಗಳ ಸುಮಾರು 200 ಚಿತ್ರಗಳ ಪೈಕಿ ಆಯ್ದ 50 ಚಿತ್ರಗಳು ಮಾತ್ರ ಈ ಚಿತ್ರೋತ್ಸವದಲ್ಲಿ ಪ್ರದರ್ಶನ ಕಾಣಲು ಆಯ್ಕೆಯಾಗಿದ್ದವು. ಅವುಗಳ ಪೈಕಿ 'ಅಂಬಾನಿ'ಯೂ ಒಂದು. ಸಾಲದೆಂಬಂತೆ 'ಅಂಬಾನಿ'ಗೆ ವಿಶೇಷ ಜ್ಯೂರಿ ಅವಾರ್ಡ್ ದೊರೆತಿದ್ದು ಒಂದೇ ಚಿತ್ರೋತ್ಸವದಲ್ಲಿ ಒಟ್ಟು ನಾಲ್ಕು ಬಾರಿ ಪ್ರದರ್ಶನ ಕಂಡ ಕಿರುಚಿತ್ರ ಎಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಅವಕಾಶಗಳಿಗಾಗಿ ಕಾಯುತ್ತಾ ಕೂರದೆ ನಾವಾಗಿ ನಾವೇ ಅವಕಾಶಗಳನ್ನು ಹುಡುಕಿಕೊಂಡು ಹೋದಾಗ ಏನು ಬೇಕಾದರೂ ಸಾಧಿಸಬಹುದು ಎಂಬ ಸಂದೇಶವನ್ನು ಚಿತ್ರದ ಕಥೆ ಹೇಳುತ್ತದೆ. ಈ ಕಿರುಚಿತ್ರಕ್ಕೆ ವಿಷ್ಣು ವೈಷ್ಣವ ಪ್ರಸನ್ನ ಎಂಬುವವರು ಹಣ ಹೂಡಿದ್ದರೆ, ವಿನೋದ್ ನಾಗ್ ಎಂಬುವವರು ನಿರ್ದೇಶಕರು. ಇಂತಹ ಭರವಸೆಯ ಪ್ರತಿಭೆಗಳಿಗೆ ಚಿತ್ರರಂಗ ವೇದಿಕೆಗಳನ್ನು ಕಲ್ಪಿಸಿಕೊಟ್ಟು ಕನ್ನಡಕ್ಕೆ ಹೊಸತನದಿಂದ ಕೂಡಿದ ಚಿತ್ರಗಳು ಬರುವಂತಾಗಲಿ ಎಂಬುದು ನಮ್ಮ ಆಶಯ.

ಕ್ರೇಜಿಸ್ಟಾರ್ ತೆರೆಗೆ

ಕನ್ನಡ ಚಿತ್ರರಂಗದ ಕನಸುಗಾರ ಎಂದೇ ಹೆಸರು ಪಡೆದಿರುವ ರವಿಚಂದ್ರನ್ ಪ್ರೇಮಿಗಳ ದಿನದಂದು ತಮ್ಮ 'ಕ್ರೇಜಿಸ್ಟಾರ್' ಎಂಬ ಹೊಸ ಕನಸನ್ನು ತೆರೆಗೆ ತರುತ್ತಿದ್ದಾರೆ. ರವಿಚಂದ್ರನ್ ನಿರ್ದೇಶನದ ಚಿತ್ರವೊಂದು ಬಹಳ ವರ್ಷಗಳ ನಂತರ ತೆರೆಗೆ ಬರುತ್ತಿರುವುದರಿಂದ ಅವರ ಅಭಿಮಾನಿಗಳು ಫುಲ್ ಖುಷ್. ಅಂದಹಾಗೆ, ಈ ರೊಮ್ಯಾಂಟಿಕ್ ಮೂವಿ ಬರೋಬ್ಬರಿ ನೂರೈವತ್ತು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದ್ದು ಭಾರೀ ನಿರೀಕ್ಷೆಯನ್ನು ಹುಟ್ಟುಹಾಕಿರುವುದರಲ್ಲಿ ಅನುಮಾನವಿಲ್ಲ.

ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ, ಸೂಪರ್ ಡೂಪರ್ ಹಿಟ್



ಆಗಿದ್ದ 'ಮಲ್ಲ' ನಂತರ ರವಿಚಂದ್ರನ್-ಪ್ರಿಯಾಂಕ ಜೋಡಿ ಮತ್ತೆ ಒಂದಾಗಿರುವುದು. 'ಮಲ್ಲ' ಚಿತ್ರದಲ್ಲಿ ಇದ್ದಂತೆ 'ಕ್ರೇಜಿಸ್ಟಾರ್'ನಲ್ಲೂ ರವಿ-ಪ್ರಿಯ ನಡುವೆ ಬಿಸಿಬ… ದೃಶ್ಯಗಳಿರುತ್ತವೆಂಬ ನಂಬಿಕೆ ರವಿ ಅಭಿಮಾನಿಗಳಲ್ಲಿ ಇರುವುದಂತೂ ಸಹ… ಉಳಿದಂತೆ, 'ಕ್ರೇಜಿಸ್ಟಾರ್' ಚಿತ್ರದಲ್ಲಿ ಎಂದಿನ ರವಿಚಂದ್ರನ್ ಶೈಲಿಯ ರೊಮ್ಯಾ… ಜೊತೆಗೆ ಸೆಂಟಿಮೆಂಟ್‌ಗೆ ಒತ್ತು ನೀಡಿರುವ ಸುದ್ದಿಯು ಬಲ್ಲ ಮೂಲಗಳಿಂ… ಕೇಳಿಬರುತ್ತಿದೆ. ಅಂದಹಾಗೆ, ಒಂದುಕಾಲದಲ್ಲಿ ಕನ್ನಡ ಚಿತ್ರರಂಗದ ದಿ… ಬದಲಿಸಿದ ನಿಜ ತಂತ್ರಜ್ಞ ಕನಸುಗಾರ ರವಿಚಂದ್ರನ್ ಅವರಿಗೆ ಒಂದು ಶುಭಾಶ… ಹೇಳಿಬಿಡೋಣ. ಆಲ್ ದಿ ಬೆಸ್ಟ್ ಕ್ರೇಜಿಸ್ಟಾರ್.

ಸಿದ್ದು ಉವಾಚ

ಧಾರವಾಡದಲ್ಲಿ ನಡೆದ ರಾಜ್ಯಪ್ರಶಸ್ತಿ ವಿತರಣಾ ಸಮಾರಂಭದ… ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತಾಡುತ್ತ ಆದಷ್ಟು ಸಾಮಾಜ… ಕಳಕಳಿ ಇರುವ ಚಿತ್ರಗಳನ್ನು ನಿರ್ಮಿಸುವಂತೆ ಚಿತ್ರರಂಗಕ್ಕೆ ಸಲಹೆ ನೀಡಿದ್ದಾ… ಹಿಂದೆಲ್ಲ ಅಂತಹ ಚಿತ್ರಗಳು ಬರುತ್ತಿದ್ದು ಹಿಂಸೆ, ಕ್ರೌರ್ಯಗಳಿಂದ ಹೊರತಾಗಿದ್ದ… ಆನಂತರದ ದಿನಗಳಲ್ಲಿ ಡಬಲ್ ಮೀನಿಂಗ್ ಡೈಲಾಗ್‌ಗಳನ್ನುಳ್ಳ, ಕ್ರೌರ್ಯ… ರಕ್ತಪಾತವನ್ನು ಬಿಂಬಿಸುವಂಥ ಚಿತ್ರಗಳು ನಿರ್ಮಾಣವಾಗತೊಡಗಿದವು. ಅಂತ… ಚಿತ್ರಗಳಿಂದ ಸಾಮಾಜಿಕ ದುಷ್ಪರಿಣಾಮ ಬೀರಿದ್ದರಲ್ಲಿ ಯಾವುದೇ ಅನುಮಾನವಿ… ಮುಂದೆಯೂ ಸರ್ಕಾರವು ಚಿತ್ರರಂಗಕ್ಕೆ ಸಂಪೂರ್ಣ ಸಹಕಾರ ನೀಡಲಿ… ಉತ್ತಮ ಚಿತ್ರಗಳನ್ನು ನಿರೀಕ್ಷಿಸುತ್ತದೆ. ಹಾಗಾಗಿ ಹೆಚ್ಚು ಹೆಚ್ಚು ಸಂಖ್ಯೆಯ… ಸಾಮಾಜಿಕ ಕಾಳಜಿ ಇರುವ ಚಿತ್ರಗಳು ನಿರ್ಮಾಣವಾಗಲಿ, ಸಮಾಜದ ಸ್ವಾಸ್ಥ್ಯವ… ಕಾಪಾಡುವಂತಾಗಲಿ ಎಂದು ಸಲಹೆ ನೀಡಿದ್ದಾರೆ.

ಏಪ್ರಿಲ್ 11ಕ್ಕೆ ಕೊಚಾಡಿಯನ್



ರಜನಿಕಾಂತ್ ಅಭಿನಯದ ಬಹು ನಿರೀಕ್ಷಿತ 'ಕೊಚಾಡಿಯನ್' ಚಿತ್ರವು ಬರುವ ಏಪ್ರಿಲ್ 11ಕ್ಕೆ ವಿಶ್ವದುದ್ದಗಲ ಬಿಡುಗಡೆಯಾಗುತ್ತಿದೆ. ಹಾಲಿವುಡ್‌ನ 'ಅವತಾರ್' ಚಿತ್ರಕ್ಕೆ ಬಳಸಿದ್ದಂತಹ ಫೋಟೋ ರಿಯಾಲಿಸ್ಟಿಕ್ ಪರ್ಫಾರ್ಮೆನ್ಸ್ ಕ್ಯಾಪ್ಚರ್ ಟೆಕ್ನಾಲಜಿಯನ್ನು ಈ ಚಿತ್ರಕ್ಕೆ ಬಳಸಿದ್ದು ಈಗಾಗಲೇ 'ಕೊಚಾಡಿಯನ್' ಎಲ್ಲೆಡೆಯೂ ತನ್ನದೇ ಆದ ಕ್ರೇಜ್ ಹುಟ್ಟುಹಾಕಿದೆ. ರಜನಿಕಾಂತ್ ಅವರ ಮಗಳಾದ ಸೌಂದರ್ಯ ನಿರ್ದೇಶಿಸುತ್ತಿರುವ ಈ ಚಿತ್ರದಲ್ಲಿ ದೀಪಿಕಾ ಪಡುಕೋಣೆ, ಶೋಭನಾ, ಶರತ್ ಕುಮಾರ್ ಸೇರಿದಂತೆ ಹಲವಾರು ಹೆಸರಾಂತ ಕಲಾವಿದರು ನಟಿಸಿದ್ದು ಎ.ಆರ್.ರೆಹಮಾನ್ ಈ ಚಿತ್ರಕ್ಕೆ ಸಂಗೀತ ನೀಡಿರುತ್ತಾರೆ. ತಮಿಳು ಸೇರಿದಂತೆ ತೆಲುಗು, ಹಿಂದಿ, ಮರಾಠಿ, ಭೋಜ್‌ಪುರಿ, ಬಂಗಾಳಿ, ಪಂಜಾಬಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಡಬ್ ಆಗಿರುವ ಈ ಚಿತ್ರವು ಜಗತ್ತಿನಾದ್ಯಂತ ಒಟ್ಟು 6000 ಚಿತ್ರಮಂದಿರಗಳಲ್ಲಿ ತೆರೆಕಾಣುತ್ತಿದೆ.



ಮೋದಿಯ ಬಾಲಿವುಡ್ ಬೆಡಗಿಯರು

ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರಹಂತಕ ನರೇಂದ್ರ ಮೋದಿಗೆ ಥಳು… ಬಳುಕಿನ ಬಾಲಿವುಡ್‌ನಲ್ಲಿ ಹಲವು ಅಭಿಮಾನಿ ಬೆಡಗಿಯರಿದ್ದಾರೆ. ಈ ಬೆಡಗಿಯ… ಬುದ್ಧಿಮಟ್ಟ ಯಾವ ಹಂತದ್ದು ಎಂದು ನೋಡಿದರೆ ಅವರು ಯಾಕೆ ಮೋದಿ… ಅಭಿಮಾನಿಗಳಾಗಿದ್ದಾರೆ ಎಂಬುದು ಅರ್ಥವಾಗುತ್ತದೆ.

ಅವಕಾಶ ಸಿಕ್ಕಾಗಲೆಲ್ಲ ಬಟ್ಟೆ ಬಿಚ್ಚುವ ಅಭ್ಯಾಸದ ಮಲ್ಲಿಕಾ ಶೆರಾವ… ಮೋದಿಯ ಬಾಲಿವುಡ್ ಅಭಿಮಾನಿಗಳಲ್ಲಿ ಪ್ರಮುಖಳು. ಈಕೆ ಈ ಹಿಂ… ಮೋದಿಯನ್ನು "ಭಾರತದ ಅತಿ ಅನುರೂಪನಾದ ವರ" ಎಂದು ಬಣ್ಣಿಸಿದ್ದಳ… ಅದು ಸಾಲದೆಂಬಂತೆ ಹೋದವರ್ಷ ಮೋದಿಯ ಹುಟ್ಟುಹಬ್ಬದಂದು 'ಹ್ಯಾ… ಬರ್ತ್‌ಡೇ' ಹಾಡನ್ನು ಹಾಡಿ ಅದರ ವೀಡಿಯೋವನ್ನು ಬಿಡುಗಡೆ ಮಾಡಿದ್ದಳ… ಅದರಲ್ಲಿ ಆಕೆ ಅದೆಷ್ಟು ಕೆಟ್ಟದಾಗಿ 'ಹ್ಯಾಪಿ ಬರ್ತ್‌ಡೇ ಮೋದೀಈಈ… ಜೀಈಈಈ" ಎಂದು ಹಾಡಿದ್ದಳೆಂದರೆ ಬಿಜೆಪಿಗಳು "ಇದು ನಿಜವಾಗಲ… ಮೋದಿಯ ಅಭಿಮಾನಿ ಒಬ್ಬರು ಮಾಡುವ ಕೆಲಸವಲ್ಲ. ಇದರ ಹಿಂ… ಕಾಂಗ್ರೆಸ್ ಸಂಚು ಅಡಗಿದೆ" ಎಂದು ಗುಡುಗಿದ್ದರು.

ಇದೀಗ ಬಾಲಿವುಡ್‌ನ ಲೇಟೆಸ್ಟ್ ಐಟಂ ಬೆಡಗಿಯಾಗಿರುವ ಮೇ… ಪಟೇಲ್ ಎಂಬಾಕೆಯೂ ಮೋದಿಯ ಬಗೆಗಿನ ಅಭಿಮಾನವನ್ನು ವಿಭಿನ್ನವಾ… ವ್ಯಕ್ತಪಡಿಸಿದ್ದಾಳೆ. ಈಕೆಯ ತಲೆ ಖಾಲಿ ಇರುವುದರಿಂದ ಮಾತಿನ ಬದಲ… ತನ್ನ ಮೈಮಾಟವನ್ನು ಮೋದಿಯ ಪ್ರಚಾರಕ್ಕೆ ಒಡ್ಡಿದ್ದಾಳೆ.

ಬಿಜೆಪಿಯ ಸಿಂಬಲ್ ಆದ ಕಮಲದ ಹೂಗಳ ಮೇಲೆ ಬೆತ್ತಲಾ… ಮಲಗಿರುವ ಮೇಘ್ನಾ ಹಲವು ಹೂಗಳನ್ನು ತನ್ನ ದೇಹದ ಹಲವು ಭಾಗಗಳ… ಮುಚ್ಚಿಕೊಳ್ಳಲು ಉಪಯೋಗಿಸಿದ್ದಾಳೆ.

ಈಕೆಯ ಈ ಬೆತ್ತಲೆ ಚಿತ್ರಗಳಿಂದ ಪ್ರಭಾವಿತರಾಗಿ ಮೋದಿಗೆ ಓ… ಹಾಕುವವರೂ ಇದ್ದರೆ ಅಚ್ಚರಿ ಇಲ್ಲ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4 …
Fax : 26604536 …